# ಶ್ರೇಯಃಸಾಧನ

ಪಂಡಿತ ಭೀಮಾಜಿ ಜೀವಾಜಿ ಹುಲಿಕವಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಪುನರ್ಮುದ್ರಣ ಯೋಜನೆ : ಪುಷ್ಪ – ೧೧

# ಶ್ರೇಯಃಸಾಧನ

ಜೇಮ್ಸ್ ಆ್ಯಲನ್ ಅವರ ವಿಚಾರಗಳು

ಭೀಮಾಜಿ ಜೀವಾಜಿ ಹುಲಿಕವಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

**ಶ್ರೇಯಃಸಾಧನ : ಜೇಮ್ಸ್ ಆ್ಯಲನ್ ಅವರ ವಿಚಾರಗಳು**

**ಭೀಮಾಜಿ ಜೀವಾಜಿ ಹುಲಿಕವಿ**

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

●

ಆರ್ಥಿಕ ನೆರವು : ಕರ್ನಾಟಕ ರಾಜ್ಯ ಸರಕಾರ

●

SHREYAHSAADHANA :
Kannada Version of **Triumphant Life**
by James Allen, a famous American Wıiter
by Bheemaaji Jeevaaji Hulikavi

Published in 1985 by
Siddhaling Pattanshetti
Secretary
Karnatak Vidyavardhk Sangh, Dharwad - 580 001

© Karnatak Vidyavardhak Sangha, Dharwad

Pages : 80 (12 + 68)    Copies : 5000

Printed at
Lalita Mudranalaya, Market, Dharwad - 580 001

# ಮೊದಲ ಮಾತು

ಕ್ರಿ. ಶ. ೧೮೯೦ ರಲ್ಲಿ ಸ್ಥಾಪಿತಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘವು ಕರ್ನಾಟಕದ ಅತ್ಯಂತ ಪ್ರಾಚೀನವಾದ, ಸಾಹಿತ್ಯಕ, ಮತ್ತು ಸಾಂಸ್ಕೃತಿಕ ಜೀವನದಲ್ಲಿ ಕನ್ನಡದ ಜನನಾಡಿಯನ್ನು ಹಿಡಿದ ತುಂಬ ಮಹತ್ವದ ಸಂಸ್ಥೆಯಾಗಿದೆ. ಕರ್ನಾಟಕದ ಅನೇಕ ಬರೆಹಗಾರರು ಕವಿಗಳು ಸಾಮಾಜಿಕ ಕಾರ್ಯಕರ್ತರು ಈ ಸಂಸ್ಥೆಯಿಂದ ಸ್ಫೂರ್ತಿ ಪಡೆದು, ಹೆಸರು ಪಡೆದು ನಾಡಿನ ತುಂಬ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಂಡಿದ್ದಾರೆ.

ತನ್ನ ಹುಟ್ಟಿನಾರಭ್ಯದಿಂದ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಗಾಗಿ ಅವಿರತವಾಗಿ ಶ್ರಮಿಸುತ್ತ ಬಂದಿದೆ. ಹಲವಾರು ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಧಾರವಾಡವನ್ನು ಕೇಂದ್ರ ವನ್ನಾಗಿ ಇಟ್ಟುಕೊಂಡು ಸಮಸ್ತ ಕರ್ನಾಟಕದ ಲೇಖಕರನ್ನು, ವಿಚಾರವಂತರನ್ನು ಒಂದುಗೂಡಿಸಿ ಬೆಳಕಿಗೆ ತರುವ ಕಾರ್ಯವನ್ನು ಸಂಘವು ಮೊದಲಿನಿಂದ ನಿಯಮಿತವಾಗಿ ಮಾಡುತ್ತ ಬಂದಿದೆ.

ಕನ್ನಡ ಬರೆಹಗಾರರ ಬಳಗವನ್ನು ಕಟ್ಟಿ ಅವರಿಂದ ವಿವಿಧ ವಿಷಯಗಳನ್ನು ಕುರಿತು ಗ್ರಂಥಗಳನ್ನು ಬರೆಸಿ ಅಥವಾ ಸ್ಪರ್ಧೆಗಳನ್ನು ಏರ್ಪಡಿಸಿ ಗ್ರಂಥರಚನೆಗೆ ಪ್ರೋತ್ಸಾಹ ನೀಡಿ ತನ್ಮೂಲಕ ಮೂಡಿಬಂದ ಕೃತಿಗಳನ್ನು ತುಂಬ ಪರಿಶ್ರಮದಿಂದ ಪ್ರಕಟಿಸಿ ಅವುಗಳನ್ನು ನಾಡಿನ ತುಂಬ ಹರಡಿದ್ದ ಕನ್ನಡಾಭಿಮಾನಿಗಳಿಗೆ ತಲುಪಿಸುವ ಮಹತ್ವದ ಚಾರಿತ್ರಿಕ ಹೊಣೆಗಾರಿಕೆಯನ್ನು ಸಹ ಸಂಘವು ನಿರ್ವಹಿಸಿಕೊಂಡು ಬಂದಿದೆ.

ಈ ನಿಟ್ಟಿನಲ್ಲಿ ಸಂಘವು ಸಾಹಿತ್ಯಿಕ ಜಗತ್ತಿನಲ್ಲಿ ಬಹುಕಾಲ ಉಳಿಯುವಂಥ ನೂರಾರು ಪುಸ್ತಕಗಳನ್ನು ಪ್ರಕಟಿಸಿದ್ದು ಅವು ಸಂಘದ ಚರಿತ್ರೆಯಲ್ಲಿ ಉಳಿಯುವಂಥ ಕೃತಿಗಳು. ಈಚೆಗೆ ಕೆಲವು ವರ್ಷಗಳಿಂದ ಸಂಘದ ಪ್ರಕಾಶನ ವಿಭಾಗವು ನಾಡಿನಲ್ಲಿ ಬೆಳೆದು ಬಂದ ಪ್ರಕಾಶನದ ಪ್ರಸಾರದೊಂದಿಗೆ ಸ್ಪರ್ಧಾತ್ಮಕವಾಗಿ ಹೊಂದಿಕೊಂಡು ಹೋಗಲಾಗದೆ ಪುಸ್ತಕ ಪ್ರಕಟಣೆಯ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿತು.

ಈಗ ಅನತಿ ಕಾಲದಲ್ಲಿಯೇ ತನ್ನ ಆಯುಷ್ಯದ ನೂರನೆಯ ವರ್ಧಂತಿ ಉತ್ಸವ ವನ್ನು ಸಂಘವು ಆಚರಿಸಲಿರುವ ಸಂದರ್ಭದಲ್ಲಿ ಪೂರ್ವಭಾವಿಯಾಗಿ ತನ್ನ ಪ್ರಾಚೀನ ಗೌರವವನ್ನು ಮೆರೆದ ಕೆಲವಾರು ಕೃತಿಗಳನ್ನು ಆಯ್ದುಕೊಂಡು ಅವುಗಳ ಮರು ಮುದ್ರಣದ ಯೋಜನೆಯನ್ನು ಹಾಕಿಕೊಂಡಿತು. ಹಿಂದೆ ಸಂಘವು ಪ್ರಕಟಿಸಿದ ಅನೇಕ ಪುಸ್ತಕಗಳು ಇಂದು ಕಾಲಗರ್ಭದಲ್ಲಿ ಸೇರಿಹೋಗಿ ಅವುಗಳ ಪ್ರತಿಗಳು, ಕೆಲವು ಕೃತಿ

ಗಳ ಹೆಸರುಗಳು ಸಹ ಗೊತ್ತಿಲ್ಲದಂತೆ ಆಗಿಬಿಟ್ಟಿವೆ. ಸಂಘದ ಇಡೀ ಚರಿತ್ರೆಯನ್ನು ಒಟ್ಟುಗೂಡಿಸಿ ಮಹತ್ವದ ಸಂಶೋಧನ ಗ್ರಂಥವೊಂದನ್ನು ಜವಾಬ್ದಾರಿಯುತ ವಿದ್ವಾಂಸರೊಬ್ಬರಿಂದ ಬರೆಸಬೇಕೆಂಬ ವಿಚಾರ ಸಹ ಸಂಸ್ಥೆಗಿದೆ. ಅದಕ್ಕೆ ಅನುಕೂಲಕರವಾಗಿ ಸಹಾಯಕವಾಗುವಂಥ ಕಾರ್ಯವೆಂದು ಸದ್ಯ ಉಪಲಬ್ಧವಿದ್ದ ಕೃತಿಗಳಲ್ಲಿ ಹದಿನೈದು ಪುಸ್ತಕಗಳನ್ನು ಆಯ್ದು ಅವುಗಳ ಮರುಮುದ್ರಣದ ಯೋಜನೆಯೊಂದನ್ನು ಹಮ್ಮಿಕೊಂಡು ಅದರ ವಿವರವನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ೧೯೮೪ರ ಪೂರ್ವಾರ್ಧದಲ್ಲಿ ಸಲ್ಲಿಸಲಾಯಿತು. ಆಗ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ನ. ನಾ. ಕಠಾವಿ ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಬಗ್ಗೆ ತಾವು ಇಟ್ಟುಕೊಂಡಿದ್ದ ಅಭಿಮಾನವನ್ನು ಹೃತ್ಪೂರ್ವಕವಾಗಿ ನೆನೆದು ಸಂಘವು ಹಮ್ಮಿಕೊಂಡ ಈ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಎಲ್ಲ ರೀತಿಯ ನೆರವು ನೀಡುವುದಾಗಿ ಆಶ್ವಾಸನೆ ಕೊಟ್ಟರು. ಅದರಂತೆ ಯೋಜನೆಯನ್ನು ಒಪ್ಪಿ ಸರಕಾರವು ಹದಿನೈದು ಪುಸ್ತಕಗಳ ಪ್ರಕಾಶನಕ್ಕಾಗಿ ಎರಡು ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಕೊಡುವಂತೆ ವ್ಯವಸ್ಥೆ ಮಾಡಿದ ಮಾನ್ಯ ಶ್ರೀ ಕಠಾವಿ ಅವರು ಸಂಘವು ಆ ಅನುದಾನವನ್ನು ಸ್ವೀಕರಿಸುವ ಹೊತ್ತಿಗೆ ಭೌತಿಕವಾಗಿ ಇಲ್ಲವಾದದ್ದು ಸಂಘಕ್ಕೆ ಬಹಳ ದೊಡ್ಡ ನೋವು. ಹದಿನೈದು ಕೃತಿಗಳ ಪ್ರಕಾಶನದ ಈ ಸಂದರ್ಭದಲ್ಲಿ ಸಂಘವು ಅತ್ಯಂತ ಕೃತಜ್ಞತೆಯಿಂದ ಶ್ರೀ ಕಠಾವಿ ಅವರನ್ನು ಸ್ಮರಿಸುತ್ತದೆ.

ಸಂಘವು ಮರುಮುದ್ರಣದ ಪ್ರಕಾಶನ ಯೋಜನೆಯ ಮೊದಲ ಹಂತವಾಗಿ ಆಯ್ದುಕೊಂಡ ಹದಿನೈದು ಕೃತಿಗಳು ಇವು :

೧) ಶೌರ್ಯಸಾಗರ
೨) ಕನ್ನಡಿಗರ ಜನ್ಮಸಾರ್ಥಕತೆ
೩) ನರಕಾಸುರ ವಿಜಯ ವ್ಯಾಯೋಗಂ
೪) ಕರ್ನಾಟಕ ಕಥಾಸರಿತ್ಸಾಗರ
೫) ಮೋಹಿನೀ ಅಥವಾ ನಿಂದಕರ ನಡವಳಿ
೬) ಕನ್ನಡ ಮಾತು ತಲೆ ಎತ್ತುವ ಬಗೆ
೭) ಕಾಲಿದಾಸ ಚರಿತ್ರ
೮) ಕರ್ಣಾಟಕ ಯಯಾತಿನಾಟಕಂ
೯) ಗೃಹವೈದ್ಯಕವು
೧೦) ಭಾರತೀಯ ವಿದುಷಿಯರು
೧೧) ಶ್ರೇಯಃಸಾಧನ

೧೨) ಪಂಡಿತರಾಜ

೧೩) ಇಸೋಪನ ಚರಿತ್ರೆ

೧೪) ವಿದ್ಯಾರಣ್ಯ ಸ್ವಾಮಿಗಳು

೧೫) ನರಗುಂದದ ಬಂಡಾಯ

ಕ್ರಮವಾಗಿ ಪ್ರಕಟವಾಗುತ್ತಿರುವ ಈ ಕೃತಿಗಳು ಸಹ ವಿಷಯ ವೈವಿಧ್ಯ, ಆ ಕಾಲದ ಭಾಷಾ ಸೌಂದರ್ಯ, ವ್ಯಾಕರಣ ಹಾಗೂ ಭಾಷಾಶಾಸ್ತ್ರದ ದೃಷ್ಟಿಕೋನ ಹಾಗೂ ಬೆಳೆಯಬೇಕಾಗಿದ್ದ ಒಂದು ಭಾಷೆಯ ನಿರಂತರ ಪರಿಶ್ರಮದ ವಿಕಾಸಶೀಲ ಘಟ್ಟ ಮುಂತಾದ ದೃಷ್ಟಿಯಿಂದ ಪ್ರಮುಖ ಆಯಾಮಗಳನ್ನು ಹೊಂದಿರುವಂಥವು. ಈ ಕೃತಿಗಳನ್ನು ಆಗ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕಾಗಿ ರಚಿಸಿಕೊಟ್ಟ ಆಯಾ ಲೇಖಕರು ತಮ್ಮ ಕೃತಿಗಳ ಸ್ವಾಮ್ಯವನ್ನು ಸಂಘಕ್ಕೆ ನೀಡಿದ್ದು ಈಗ ಈ ಕೃತಿಗಳ ಏಕಸ್ವಾಮ್ಯ ಹೊಂದಿದ ಸಂಘವು ಆ ಎಲ್ಲ ಲೇಖಕರನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಈ ಕೃತಿಗಳಲ್ಲಿ ಯಾವುದೇ ಬದಲಾವಣೆ ಅಥವಾ ಹೊಸ ಸೇರ್ಪಡೆ ಇತ್ಯಾದಿ ಮಾಡದೆ ಅವು ಇದ್ದ ಮೂಲ ಸ್ಥಿತಿಯಲ್ಲಿಯೇ ಮರುಮುದ್ರಿಸಲಾಗಿದೆ. ಐತಿಹಾಸಿಕ ದೃಷ್ಟಿಯಿಂದ ಈ ಕೃತಿಗಳನ್ನು ಅಭ್ಯಸಿಸುವವರಿಗೆ ಯಾವ ದೃಷ್ಟಿಯಿಂದಲೂ ವ್ಯತ್ಯಯ ಬರದ ಹಾಗೆ ಇವುಗಳ ಮೂಲ ಸ್ವರೂಪವನ್ನು ಉಳಿಸಿಕೊಳ್ಳಲಾಗಿದೆ. ಈಗ ಬೇರೆ ಎಲ್ಲಿಯೂ ಉಪಲಬ್ಧವಿರದ ಈ ವಿರಳ ಕೃತಿಗಳನ್ನು ಹೀಗೆ ಅವು ಇದ್ದ ಸ್ವರೂಪದಲ್ಲಿಯೇ ಉಪಲಬ್ಧಗೊಳಿಸಿ ಅವುಗಳ ಆಯುಷ್ಯ ಹಾಗೂ ಅಸ್ತಿತ್ವಗಳನ್ನು ಇನ್ನಷ್ಟು ಸುಭದ್ರಗೊಳಿಸುವ ನಿಟ್ಟಿನಲ್ಲಿ ಈ ಮರುಮುದ್ರಣಗಳು ಜನತೆಗೆ ಪ್ರಯೋಜನಕಾರಿಯಾದರೆ ಸಂಘದ ಶ್ರಮ ಸಾರ್ಥಕವಾದಂತೆ.

ಈ ಕೃತಿಗಳನ್ನು ಪ್ರಕಟಿಸಲು ಆರ್ಥಿಕ ನೆರವು ನೀಡಿದ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಾವು ವಿಶೇಷವಾಗಿ ಕೃತಜ್ಞರಾಗಿದ್ದೇವೆ. ಈ ಹದಿನೈದು ಕೃತಿಗಳಲ್ಲದೆ ಕರ್ನಾಟಕ ವಿದ್ಯಾವರ್ಧಕ ಸಂಘದ ಇನ್ನಿತರ ಎಲ್ಲ ಕೃತಿಗಳನ್ನು ಹೀಗೆ ಮರುಮುದ್ರಣ ಮಾಡಿ ನಾಡಿನ ತುಂಬ ಅವು ವ್ಯಾಪಿಸುವಂತೆ ಮಾಡುವ ಉದ್ದೇಶ ನಮಗಿರುವುದರಿಂದ ಇನ್ನು ಮುಂದೆಯೂ ಕರ್ನಾಟಕ ಸರಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಮ್ಮ ಈ ಬೃಹತ್ ಯೋಜನೆ ಯಶಸ್ವಿಯಾಗಿ ಮುಂದುವರಿಯುವಂತೆ ನಮಗೆ ಆರ್ಥಿಕ ನೆರವನ್ನು ನೀಡಿ ಇಂಥ ಒಂದು ಐತಿಹಾಸಿಕ ಉಪಕ್ರಮದ ಮೂಲಕ ಪ್ರಕಾಶಿತಗೊಳ್ಳುವ ಕೃತಿಗಳ ಪುನರುಜ್ಜೀವನಕ್ಕೆ ಕಾರಣವಾಗಿ ನಮ್ಮ ಬೆನ್ನು ತಟ್ಟಲಿ ಎಂದು ಆಶಿಸುತ್ತೇವೆ.

ಪ್ರಸ್ತುತ ಕೃತಿ **ಶ್ರೇಯಃಸಾಧನ** ಎಂಬುದನ್ನು ಪಂಡಿತ ಭೀಮಾಜಿ ಜೀವಾಜಿ ಹುಲಿಕವಿ ಅವರು ಕನ್ನಡಕ್ಕೆ ತಂದಿದ್ದಾರೆ. ಸುಪ್ರಸಿದ್ಧ ಅಮೇರಿಕನ್ ಲೇಖಕರಾದ

ಜೇಮ್ಸ್ ಆ್ಯಲನ್ ಅವರ ಮೂಲ ಇಂಗ್ಲಿಷ್ ಕೃತಿ 'ಟ್ರೈಂಫಂಟ್ ಲೈಫ್' ಎಂಬುದನ್ನು ರಾಮಚಂದ್ರ ಕೃಷ್ಣ ಚೌಕರ ಅವರು ಮರಾಠಿಗೆ ಭಾಷಾಂತರಿಸಿದ್ದುದನ್ನು ನೆರವಿಗೆ ಪಡೆದು ಕನ್ನಡಕ್ಕೆ ಭಾಷಾಂತರಿಸಿದ್ದಾಗಿ ಹೇಳಿದ್ದಾರೆ. ಜೇಮ್ಸ್ ಆ್ಯಲನ್ ಅಮೇರಿಕನ್ ವಿದ್ವಾಂಸರಾಗಿದ್ದರೂ ಅವರ ವಿಚಾರಸರಣಿ ಸಂಪೂರ್ಣ ಭಾರತೀಯವೆನ್ನುವಷ್ಟು ಅವರ ಬರವಣಿಗೆ ನಮಗೆ ಆತ್ಮೀಯವೆನಿಸುತ್ತದೆ. ಮಧ್ಯೆ ಮಧ್ಯೆ ಭಾರತೀಯ ಗ್ರಂಥಗಳ, ವಿಶೇಷವಾಗಿ ಭಗವದ್ಗೀತೆಯ ಉದ್ಧರಣೆಗಳನ್ನು ನೀಡುವ ಶೈಲಿಯಂತೂ ತುಂಬ ಹೃದ್ಯವಾಗಿದೆ. ಪಂಡಿತ ಭೀ. ಜೀ. ಹುಲಿಕವಿಯವರ ಕನ್ನಡದ ಬಗ್ಗೆ ಬೇರೆ ಹೇಳುವ ಅಗತ್ಯವೇ ಇಲ್ಲ. ಅತ್ಯಂತ ಶುದ್ಧ, ವೈಚಾರಿಕತೆಯನ್ನು ನಿರಾಯಾಸವಾಗಿ ವಹಿಸಿ, ಓದುಗರನ್ನು ತಟ್ಟಬಲ್ಲ, ತಲುಪಬಲ್ಲ ನಿರಾಳ ಕನ್ನಡವನ್ನು ಈ ಶತಮಾನದ ಆರಂಭದಲ್ಲಿ ಬರೆದ ವಿರಳ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು ಹುಲಿಕವಿ. ಈ ಕೃತಿ ಅನುವಾದಕ್ಕಿಂತ ಅವರ ಸ್ವಂತದ್ದೇ ಎನಿಸುವಷ್ಟು ಕನ್ನಡತನದಿಂದ ತುಂಬಿದೆ. ಕರ್ನಾಟಕ ವಿದ್ಯಾವರ್ಧಕ ಸಂಘದ 'ವಾಗ್ಭೂಷಣ'ದಲ್ಲಿ ೧೯೧೭ ರ ಸಂಚಿಕೆಗಳಲ್ಲಿ ಭಾಗಶಃ ಪ್ರಕಟವಾಗಿ ಮುಂದೆ ಜನೆವರಿ ೧೯೨೦ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿತ್ತು. ಆಗ ಧಾರವಾಡದ ಸರಕಾರಿ ಟ್ರೇನಿಂಗ್ ಕಾಲೇಜಿನ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿ ಅಸಿಸ್ಟಂಟ್ ಮಾಸ್ತರರಾಗಿದ್ದ ಭೀ. ಜೀ. ಹುಲಿಕವಿಯವರ ಈ 'ಶ್ರೇಯಃಸಾಧನ'ದ ಬೆಲೆ ಆಗ ಹನ್ನೆರಡು ಆಣೆಯಾಗಿತ್ತು.

ಕರ್ನಾಟಕದ ಜನತೆ, ಸಾಹಿತ್ಯಾಸಕ್ತ ಸ್ನೇಹಿತರು, ಗ್ರಂಥಾಲಯಗಳ ಅಧಿಕಾರಿಗಳು ಪ್ರಾಚೀನ ಕೃತಿ ಸಂಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಕೃತಿಗಳ ಪ್ರತಿಗಳನ್ನು ಕೊಂಡು ಆರ್ಥಿಕವಾಗಿ ಸಹಾಯ ಮಾಡಿದಾಗ ಇನ್ನುಳಿದ ಕೃತಿಗಳನ್ನು ಬೇಗನೆ ಬೆಳಕಿಗೆ ತರುವ ನಮ್ಮ ಯೋಜನೆ ಬಹು ಬೇಗನೆ ಕಾರ್ಯಗತಗೊಳ್ಳುವಲ್ಲಿ ಸಂದೇಹವಿಲ್ಲ.

ಈ ಕೃತಿಯ ಪ್ರಕಟಣೆಗೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಸಹಾಯ ಸಲ್ಲಿಸಿದ ಎಲ್ಲ ಆತ್ಮೀಯರಿಗೆ ಹಾಗೂ ಮುದ್ರಣಾಲಯದ ಸಿಬ್ಬಂದಿಗೆ ಕೃತಜ್ಞತೆಗಳು.

೧-೮-೧೯೮೫ **ಸಿದ್ಧಲಿಂಗ ಪಟ್ಟಣಶೆಟ್ಟಿ** **ಪಾಟೀಲ ಪುಟ್ಟಪ್ಪ**
ಧಾರವಾಡ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷರು

# ಹೃದಯ ನಿವೇದನೆ

ಸುಪ್ರಸಿದ್ಧ ಅಮೇರಿಕನ್ ಗ್ರಂಥಕಾರರಾದ ಜೇಮ್ಸ್ ಆಲನ್ ಎಂಬವರಿಂದ ಬರೆಯಲ್ಪಟ್ಟ "Triumphant Life" ಎಂಬ ಪುಸ್ತಕವು ನಮ್ಮ ಭಗವದ್ಗೀತೆಯೊಳಗಿನ ವಿಚಾರಗಳಿಂದ ತುಂಬಿ ಹೋಗಿದೆ. ಆದರೆ ಭಗವದ್ಗೀತೆಯೊಳಗಿನ ತತ್ವಗಳನ್ನು ಪ್ರತಿಪಾದಿಸುವದಿಷ್ಟೇ ಅವರ ಉದ್ದೇಶವಾಗಿರದೆ, ವ್ಯವಹಾರದೊಳಗಿನ ಪ್ರಮೇಯಗಳನ್ನು ಉಚ್ಚಮನೋವೃತ್ತಿಯ ಒರೆಗಲ್ಲಿನಿಂದ ಪರೀಕ್ಷಿಸಬೇಕೆಂಬ ಉದ್ದೇಶದಿಂದ ಅವರು ಆ ಗ್ರಂಥವನ್ನು ಬರೆದಂತೆ ತೋರುತ್ತದೆ. ಅದೇ ಗ್ರಂಥವನ್ನು ಶ್ರೀಯುತ ರಾಮಚಂದ್ರ ಕೃಷ್ಣ ಚೌಕರ ಎಂಬವರು ಮಹಾರಾಷ್ಟ್ರ ಭಾಷೆಯಲ್ಲಿ ಭಾಷಾಂತರಿಸಿದ್ದು ಶ್ರೀಯುತ ಕಾಶೀನಾಥ ರಘುನಾಥ ಮಿತ್ರ, ಸಂಪಾದಕ 'ಮಾಸಿಕ ಮನೋರಂಜನ' ಇವರು ಅದನ್ನು ಪ್ರಸಿದ್ಧಪಡಿಸಿದ್ದಾರೆ. ಶ್ರೀಯುತ ಮಿತ್ರರ ಸಮ್ಮತಿಯನ್ನು ಪಡೆದು ನಾನು ಆ ಪುಸ್ತಕದ ಆಧಾರದಿಂದ ಇದನ್ನು ಬರೆದಿದ್ದೇನೆ. ತಾವು ಪ್ರಸಿದ್ಧ ಮಾಡಿದ ಎಲ್ಲ ಪುಸ್ತಕಗಳನ್ನೂ ಲೇಖನಗಳನ್ನೂ ಕನ್ನಡದಲ್ಲಿ ರೂಪಾಂತರಿಸಲು ಸಮ್ಮತಿಯನ್ನು ಕೊಟ್ಟು, ಎಂದೆಂದಿಗೂ ತೀರಿಸಲಿಕ್ಕಾಗದಷ್ಟು ಉಪಕಾರವನ್ನು ಮಾಡಿದ್ದಕ್ಕಾಗಿ ಶ್ರೀಯುತ ಮಿತ್ರರಿಗೆ ನಾನು ಎಷ್ಟು ಕೃತಜ್ಞನಾಗಿದ್ದರೂ ಸ್ವಲ್ಪವೇ ಇದೆ.

ಸಾಂಪ್ರತಕ್ಕೆ ಶಿಕ್ಷಣ ಕ್ರಮದಲ್ಲಿ ನೈತಿಕ ಶಿಕ್ಷಣವನ್ನು ಸಮಾವೇಶಗೊಳಿಸಬೇಕೆಂದು ಎಲ್ಲರೂ ಅಭಿಪ್ರಾಯವುಳ್ಳವರಾಗಿದ್ದಾರೆ. ಇಂತಹ ಶಿಕ್ಷಣಕ್ಕೆ ವಿಶಿಷ್ಟ ಧರ್ಮದ ತತ್ವಗಳನ್ನಾಗಲಿ ಮತಗಳನ್ನಾಗಲಿ ಊಹಾಪೋಹ ಮಾಡುವಂತಹ ಪುಸ್ತಕಗಳನ್ನು ನಿಯಮಿಸಿದರೆ ಅನ್ಯಧರ್ಮದವರು ಅದಕ್ಕೆ ಆಕ್ಷೇಪಣೆ ಮಾಡುವದು ಸಹಜವಾಗಿದೆ. ತ್ರಿಕಾಲಾಬಾಧಿತವಾದ ನೀತಿತತ್ವಗಳೂ ಸದಾಚರಣದ ನಿಯಮಗಳೂ ಸರ್ವಕಾಲದಲ್ಲಿಯೂ ಸರ್ವಧರ್ಮೀಯರಿಗೂ ಸರಿಯಾಗಿಯೇ ಅನುಕರಣೀಯಗಳಾಗಿರುವವು. ಆದುದರಿಂದ ಮೇಲಿನ ಆಕ್ಷೇಪಣೆಗೆ ಆಸ್ಪದವುಂಟಾಗದಂತೆ ಪ್ರತಿಯೊಂದು ಧರ್ಮದವರು ಈ ಪುಸ್ತಕದೊಳಗಿನ ನೀತಿಯನ್ನು ಕಲಿಯತಕ್ಕದ್ದಾಗಿರುವದೆಂದು ನೆನಿಸಿ ಇದನ್ನು ಬರೆದಿದ್ದೇನೆ. ಇದರೊಳಗಿನ ವಿಚಾರಸರಣಿಯು ಜೇಮ್ಸ್ ಆಲನ್ ಸಾಹೇಬರದು ! ಅವರ ವಿಚಾರವನ್ನು ನನ್ನಂತಹನಿಗೆ ತಿಳಿಯಪಡಿಸಿದ್ದು ಶ್ರೀಯುತ ಚೌಕರರ ಲೆಕ್ಕಣಿಕೆಯು ! ಮೂಲಗ್ರಂಥವು ಅತ್ಯುತ್ತಮವಾಗಿಯೂ ಸೂತ್ರಮಯವಾಗಿಯೂ ಸರಳವಾಗಿಯೂ ಇದೆ. ಇಂತಹ ಉಪಯುಕ್ತವಾದ ಗ್ರಂಥದ ಪರಿಚಯವು ನಮ್ಮ ಕರ್ನಾಟಕ ಬಂಧುಭಗಿನಿಯರಿಗೂ ಉಂಟಾಗಲೆಂದು ಇದನ್ನು ಕನ್ನಡದಲ್ಲಿ ಬರೆದಿದ್ದೇನೆ. ಮೂಲ ಗ್ರಂಥಕ್ಕೂ ಇದಕ್ಕೂ ಏನಾದರೂ ವ್ಯತ್ಯಾಸವು ಕಂಡುಬಂದಪಕ್ಷದಲ್ಲಿ ಸೂಜ್ಞವಾಚಕರು ದಯವಿಟ್ಟು ಅದನ್ನು ನನಗೆ ಸೂಚಿಸಿದರೆ ಎರಡನೆಯ ಆವೃತ್ತಿಯಲ್ಲಿ ತಿದ್ದಲು ಪ್ರಯತ್ನಮಾಡುವೆನು.

ಇದಲ್ಲದೆ ಇದನ್ನು ಬರೆದದ್ದಕ್ಕೆ ಇನ್ನೊಂದು ಕಾರಣವುಂಟು. ಚಿ. ಶಂಕರನು ನನ್ನೊಡನೆ ಬಂಧುಭಾವದಿಂದಲೂ ವಿಧೇಯತೆಯಿಂದಲೂ ನಡೆಯುತ್ತಲಿದ್ದಾನೆ. ನಮ್ಮ

ಬ್ಬರ ಪರಸ್ಪರ ನರ್ತನವನ್ನು ವರ್ಣಿಸುವದಕ್ಕೆ ಇದು ಸ್ಥಳವಲ್ಲ. ಪರಮದಯಾಶಾಲಿಯಾದ ಪರಮಾತ್ಮನ ಪ್ರೇರಣೆಯಿಂದಲೇ ನಮ್ಮಿಬ್ಬರಲ್ಲಿ ಬಂಧುಪ್ರೀತಿಯು ಹುಟ್ಟಿತೆಂದು ಇಬ್ಬರೂ ತಿಳಿದಿದ್ದೇವೆ. ಮತ್ತು ಆ ಭಗವಂತನ ಸಾಕ್ಷಿಯಿಂದಲೇ ಸಾಕ್ಷಾತ್ತಾಗಿ ಒಡಹುಟ್ಟಿದವರಾಗಿ ನಡೆಯುತ್ತಲಿದ್ದೇವೆ. ನನ್ನ ಸ್ವಭಾವಕ್ಕನುಸರಿಸಿ ಒಂದು ಸಮಯದಲ್ಲಿ ನೀತಿಯ ಮಾತುಗಳನ್ನು ಹೇಳುತ್ತಿದ್ದಾಗ ಚಿ|| ಶಂಕರನು–"ಅಣ್ಣಾ, ನೀನು ಈ ಪ್ರಕಾರದ ಒಳ್ಳೆಡೆಗಳನ್ನು ಬೋಧಿಸುವಂತಹ ಒಂದು ಉತ್ತಮವಾದ ಪುಸ್ತಕವನ್ನು ಕನ್ನಡದಲ್ಲಿ ಬರೆ," ಎಂದು ಹೇಳಿದನು. ಆಗ ನಾನು ಉತ್ತರವಾಗಿ ಹೇಳಿದ್ದೇನೆಂದರೆ–"ತಮ್ಮಾ, ಅಂತಹ ಪುಸ್ತಕವನ್ನು ಸ್ವತಂತ್ರವಾಗಿ ಬರೆಯುವದು ನನ್ನ ಯೋಗ್ಯತೆಯ ಮಾತೇ ? ನನಗೆ ತಿಳಿದ ಅನ್ಯ ಭಾಷೆಗಳಲ್ಲಿ ನೀನು ಹೇಳಿದಂತಹ ಪುಸ್ತಕವಾವದಾದರೂ ಸಿಕ್ಕರೆ ಅದರ ಆಧಾರದಿಂದ ಬರೆಯಲು ಪ್ರಯತ್ನಮಾಡುವೆನು." ತಮ್ಮನಿಗೆ ಕೊಟ್ಟ ಆ ವಚನವನ್ನು ಅಲ್ಪಾಂಶದಿಂದಾದರೂ ಪೂರ್ಣ ಮಾಡಬೇಕೆಂದು ಬಗೆದು ಇದನ್ನು ಬರೆದಿದ್ದೇನೆ; ಮತ್ತು ಮಂಗಲಾಶೀರ್ವಾದಪೂರ್ವಕವಾಗಿ ಇದನ್ನು ಅವನಿಗೆ ಒಪ್ಪಿಸಿದ್ದೇನೆ. ಈ ಸಂಗತಿಯನ್ನೋದಿ ಕೆಲವರು ನನಗೆ ಅಪಹಾಸ್ಯ ಮಾಡಬಹುದು! ನಗಬಹುದು! ಅವರಿಗೆ ನಾನಾದರೂ ಏನು ಉತ್ತರವನ್ನು ಕೊಡಲಿ! "ನಿಂದಂತು ನೀತಿನಿಪುಣಾಂ ಯದಿ ವಾ ಸ್ತುವತು |"

ಇದನ್ನು ಬರೆದು ಈಗ ಸುಮಾರು ಎರಡು ವರುಷಗಳಾಗಿಹೋದವು. ೧೯೧೭ನೆಯ ಇಸವಿಯ ವಾಗ್ಭೂಷಣದ ಸಂಚಿಕೆಗಳಲ್ಲಿ ಇದರ ಮೊದಲಿನ ಎರಡು ಪ್ರಕರಣಗಳು ಮುದ್ರಿತವಾಗಿದ್ದವು. ಆಗಿನಿಂದ ಇಲ್ಲಿಯವರೆಗೆ ಈ ಪುಸ್ತಕವು 'ಸಂಘ'ದಲ್ಲಿಯೇ ಬಿದ್ದಿತ್ತು. ಈಗ ವಾಗ್ಭೂಷಣದ ವ್ಯವಸ್ಥಾಪಕರಾದ ಮ. ರಾ. ರಾ. ಕೃಷ್ಣರಾವ ಅಂಕಲಿಗಿ ಇವರು ಇದನ್ನು ವಾಗ್ಭೂಷಣದಲ್ಲಿ ಅಚ್ಚುಹಾಕಿಸಿ ಪೂರ್ಣ ಮಾಡಿದ್ದಕ್ಕಾಗಿ ಅವರಿಗೆ ಆಭಾರಿಯಾಗಿದ್ದೇನೆ.

ಕಟ್ಟಕಡೆಗೆ, ಇದರೊಳಗಿನ ಪ್ರತಿಯೊಂದು ವಾಕ್ಯವನ್ನು ಮನಸ್ಸುಗೊಟ್ಟು ಓದಿ ಅದರಂತೆ ಆಚರಿಸುತ್ತ ಶ್ರೇಯಃಸಾಧನವನ್ನು ಮಾಡಿಕೊಳ್ಳಬೇಕೆಂದು ಕರ್ನಾಟಕ ಬಂಧುಭಗಿನಿಯರನ್ನು ಬೇಡಿಕೊಂಡು, ಸನ್ಮಾರ್ಗಗಾಮಿಯೆನಿಸಿಕೊಂಡು ಶ್ರೇಯೋಭಾಜನನಾಗೆಂದು ನನ್ನ ತಮ್ಮನನ್ನು ಆಶೀರ್ವದಿಸಿ, ಶ್ರೀಮದ್ವ್ಯಾಸಮಹರ್ಷಿಗಳ–

"ಏತಾವಜ್ಜನ್ಮಸಾಫಲ್ಯಂ ದೇಹಿನಾಮಿಹ ದೇಹಿಷು |
ಪ್ರಾಣೈರರ್ಥೈರ್ಧಿಯಾ ವಾಚಾ ಶ್ರೇಯ ಏವಾಚರೇತ್ಸದಾ ||೧||"

ಎಂಬ ಸೂಕ್ತಿಸುಧೆಯನ್ನು ಪ್ರಿಯವಾಚಕರ ಮುಂದಿರಿಸಿ ಈ ಹೃದಯನಿವೇದನೆಯನ್ನು ಮುಗಿಸುತ್ತೇನೆ.

ಸಜ್ಜನಸೇವಕ,

**ಭೀಮಾಜಿ ಜೀವಾಜಿ ಹುಲಿಕವಿ**

ಉದಾತ್ತ ನೀತಿತತ್ವಬೋಧಕವಾದ

ಈ ಚಿಕ್ಕ ಪುಸ್ತಕವನ್ನು

ನನ್ನ ಪ್ರೀತಿಯ ತಮ್ಮನಾದ

## ಚಿ.ರಾ.ರಾ. ಶಂಕರ ದತ್ತಾತ್ರೇಯ ಅಗ್ನಿಹೋತ್ರಿ

ಈತನಲ್ಲಿರುವ

ಸರಲವರ್ತನ, ಪ್ರೇಮಲಸ್ವಭಾವ, ನಿರ್ಮಲಹೃದಯ

ಮೊದಲಾದವುಗಳ ದ್ಯೋತಕ್ಕಾಗಿಯೂ,

ಇದರಲ್ಲಿ ಪ್ರತಿಪಾದಿತವಾದ ತತ್ವಗಳನ್ನು

ಆಕಲನ ಮಾಡಿಕೊಂಡು

ಅದರಂತೆ ಆತನು ಆಚರಿಸಬೇಕೆಂಬ

ಅಪೇಕ್ಷೆಯಿಂದಲೂ,

ನನ್ನಲ್ಲಿಯೂ ಅವನಲ್ಲಿಯೂ ಅನ್ಯೋನ್ಯವಾಗಿ ನೆಲಿಸಿರುವ

ಬಂಧುಪ್ರೇಮದ ಸ್ಮರಣಾರ್ಥವಾಗಿಯೂ

ಅತ್ಯಂತ ಪ್ರೀತಿಯಿಂದ

ಅವನಿಗೆ ಒಪ್ಪಿಸಿದ್ದೇನೆ.

—ಲೇಖಕ

## ವಿಷಯಗಳು


| | | | ಪುಟ |
|---|---|---|---|
| ೧ | ಭಕ್ತಿ ಮತ್ತು ಧೈರ್ಯ | .... | ೧ |
| ೨ | ಪುರುಷಾರ್ಥ ಮತ್ತು ಸದ್ಭಾವ | .... | ೯ |
| ೩ | ಕರ್ತೃತ್ವಶಕ್ತಿ ಮತ್ತು ಸಾಮರ್ಥ್ಯ | .... | ೧೭ |
| ೪ | ಆತ್ಮಸಂಯಮನ ಮತ್ತು ಸುಖ | .... | ೨೪ |
| ೫ | ನಿರುಪಾಧಿತ್ವ ಮತ್ತು ಮುಕ್ತಿ | .... | ೩೧ |
| ೬ | ಸದ್ವಿಚಾರ ಮತ್ತು ಚಿತ್ತಸ್ವಾಸ್ಥ್ಯ | .... | ೩೭ |
| ೭ | ಶಾಂತಿ ಮತ್ತು ಉಪಾಯಚಿಂತನ | .... | ೪೪ |
| ೮ | ಅಂತರ್ದೃಷ್ಟಿ ಮತ್ತು ಉದಾರಪ್ರವೃತ್ತಿ | .... | ೫೧ |
| ೯ | ಮನುಷ್ಯನ ಪ್ರಭುತ್ವ | .... | ೫೮ |
| ೧೦ | ಜ್ಞಾನ ಮತ್ತು ವಿಜಯ | .... | ೬೪ |

# ಶ್ರೇಯಃಸಾಧನ

# ೧. ಭಕ್ತಿ ಮತ್ತು ಧೈರ್ಯ

ಯಾವ ಮನುಷ್ಯರು ಪ್ರತಿಯೊಂದು ಪ್ರಸಂಗದಲ್ಲಿಯೂ ಹೆದರದೆ, ಧೈರ್ಯದಿಂದ ಎದೆಗೊಡುವರೋ, ಅವರೇ ಸಂಸಾರದೊಳಗಿನ ಎಡರುಗಳಿಂದ ಪಾರಾಗುವರು; ಅವರೇ ಸಂಕಟಸಮಯಗಳಲ್ಲಿ ಯಶಸ್ಸನ್ನು ಹೊಂದುವರು. ಈ ಮಾತಿನಲ್ಲಿ ಬೀಜರೂಪವಾಗಿರುವ ಸಿದ್ಧಾಂತಕ್ಕೆ ತ್ರಿಕಾಲಗಳಲ್ಲಿಯೂ ಅಪವಾದವು ಸಂಭವಿಸಲಾರದೆಂಬದರ ಪ್ರತ್ಯಯವು ನಮ್ಮ ವಾಚಕರಲ್ಲಿ ಉಂಟಾಗಬೇಕೆಂದು ಈ ಸಂಗತಿಯನ್ನು ನಾವು ಮೊಟ್ಟಮೊದಲೇ ಸೂಚಿಸಿರುತ್ತೇವೆ. ವ್ಯವಹಾರದೊಳಗಿನ ಸದಾಚಾರ ಹಾಗು ಸಚ್ಛೀಲ ವರ್ತನದಲ್ಲಿ ಯಾವ ಯಾವ ಮುಖ್ಯ ತತ್ವಗಳು ಅಂತರ್ಭೂತವಾಗುತ್ತವೆ? ಮತ್ತು ಯಾವಾಗಲೂ ಸಮಾಧಾನ ವೃತ್ತಿಯಿಂದಿರುವದರಿಂದ ಧೈರ್ಯವು ಪ್ರಾಪ್ತವಾಗಿ ತನ್ಮೂಲಕ ಉತ್ಕಟವಾದ ಯಶಸ್ಸನ್ನು ಹೇಗೆ ಸಂಪಾದಿಸಲಿಕ್ಕೆ ಬರುತ್ತದೆ? ಈ ಮಾತುಗಳ ದಿಗ್ದರ್ಶನವು ಮುಂದಿನ ವಿವೇಚನೆಯಲ್ಲಿ ಮಾಡಲ್ಪಡುವದು.

ಸತ್ಯವನ್ನಾಶ್ರಯಿಸಿ ಸರಳ ಮಾರ್ಗದಿಂದ ವರ್ತಿಸಬೇಕು; ಬೇಕಾದಂಥ ಪ್ರತಿಕೂಲ ಪರಿಸ್ಥಿತಿಯು ಪ್ರಾಪ್ತವಾದರೂ, ಸಂಕಟಪರಂಪರೆಗಳೊದಗಿದರೂ ಅವಿಶ್ರಾಂತ ಪರಿಶ್ರಮ ಮಾಡಿ ಜ್ಞಾನವನ್ನು ಸಂಪಾದಿಸಬೇಕು; ಬೇಕಾದಂಥ ಕಠಿಣ ಪ್ರಸಂಗವು ಬಂದರೂ ಧೈರ್ಯವನ್ನು ಕಳೆದುಕೊಂಡು ಕಿಂಕರ್ತವ್ಯತಾಮೂಢರಾಗಿ ಕೈಕಟ್ಟಿಕೊಂಡು ಕುಳಿತುಕೊಳ್ಳದೆ, ಮನೋವಿಕಾರವೆಂಬ ಅಂತಸ್ಥ ಶತ್ರುವನ್ನು ಗೆದ್ದು ಜನ್ಮಸಾಫಲ್ಯವನ್ನು ಮಾಡಿಕೊಳ್ಳಬೇಕು. ಅಂದರೆ ಶ್ರೇಯಸ್ಸನ್ನು ಸಾಧಿಸಬೇಕು, ಇದೇ ಮನುಷ್ಯನಾಗಿ ಹುಟ್ಟಿದವನ ಇತಿಕರ್ತವ್ಯತೆಯು. ಪ್ರತಿಯೊಬ್ಬ ಮನುಷ್ಯನು ಇದನ್ನೇ ತನ್ನ ಆಯುಷ್ಯದ ಉಚ್ಚತಮ ಧ್ಯೇಯವನ್ನಾಗಿಟ್ಟುಕೊಂಡು ವರ್ತಿಸಬೇಕು. ಇಂದಿನ ವರೆಗೆ ಆಗಿಹೋದ ಸಾಧುಸಂತರೂ, ಪರಮೇಶ್ವರನ ಅವತಾರಸ್ವರೂಪಿಗಳೂ ಆದ ಮಹಾತ್ಮರು ಇದೇ ಭಾವವನ್ನೇ ಉಪದೇಶ ಮಾಡುತ್ತ ಬಂದಿರುವರು. ಸಾಂಪ್ರತಕಾಲದಲ್ಲಿ ಈ ಧ್ಯೇಯವನ್ನು ಮುಟ್ಟುವ ಜನರು ತೀರ ಕಡಿಮೆಯಾಗಿರುವರು. ಸಕಲರೂ ಈ ಧ್ಯೇಯವನ್ನು ಸಾಧಿಸುವದಕ್ಕಾಗಿಯೇ ಪ್ರಯತ್ನಿಸುವದೇನೋ ನಿಜ; ಆದರೆ ಕೆಲವರು ಪುಣ್ಯಶ್ಲೋಕಿಗಳಾದ ಮಹಾತ್ಮರು ಮಾತ್ರ ಈ ಪದವಿಯನ್ನು ಹೊಂದುವರು. ಇಂತಹ ಮಹಾತ್ಮರ ಸ್ಫೂರ್ತಿದಾಯಕವಾದ ಚರಿತ್ರೆಗಳು ನಮಗೆ ಅವಗತವಾಗಿವೆ; ಮತ್ತು ಮನುಷ್ಯಮಾತ್ರರ ಕಲ್ಯಾಣಕ್ಕೋಸುಗವೇ ಇಂತಹ ವಿಭೂತಿಗಳ ಸಂಖ್ಯೆಯು ಪ್ರತಿಯೊಂದು ಯುಗದಲ್ಲಿಯೂ ಹೆಚ್ಚಾಗುತ್ತಲಿದೆ.

ಆಯುಷ್ಯವೆಂಬ ಸಾಲೆಯಲ್ಲಿ ಪ್ರತಿಯೊಬ್ಬ ಮನುಷ್ಯನು ವಿದ್ಯಾರ್ಥಿಯಾಗಿರುತ್ತಾನೆ. ಎಷ್ಟೋ ವಿದ್ಯಾರ್ಥಿಗಳು ಮೂಢತನದಲ್ಲಿ ಕಾಲಕಳೆದು ಸಾಲೆಯನ್ನು ಬಿಟ್ಟು

ಬಿಡುತ್ತಾರೆ. ಮತ್ತು ಜಾಣರಾದವರು ಚನ್ನಾಗಿ ಅಭ್ಯಾಸ ಮಾಡಿ ಯೋಗ್ಯವಾದ ಯಶಸ್ಸನ್ನು ಸಂಪಾದಿಸುತ್ತಾರೆ. ಆದರಂತೆ ಎಷ್ಟೋ ಜನರು ಅಜ್ಞಾನದಲ್ಲಿಯೇ ಇಡೀ ಆಯುಷ್ಯವನ್ನು ವೆಚ್ಚ ಮಾಡುತ್ತಾರೆ; ಮತ್ತು ಬೇರೆ ಕೆಲವರು ಅಜ್ಞಾನ, ದುಃಖ, ಸಂಕಟಗಳಿಗೆ ದೃಢನಿಶ್ಚಯದಿಂದಲೂ ಎದುರಾಗಿ ತಮ್ಮ ಆಯುಷ್ಯದ ಇತಿಕರ್ತವ್ಯತೆಯ ಸಮ್ಯಗ್-ಜ್ಞಾನವನ್ನು ಮಾಡಿಕೊಂಡು ಲೀಲೆಯಿಂದಲೇ ಈ ವಿದ್ಯಾರ್ಥಿದಶೆಯನ್ನು ಉತ್ತರಿಸುತ್ತಾರೆ. ಮನುಷ್ಯನಲ್ಲಿ ಇಚ್ಛಾಶಕ್ತಿಯೊಂದಿದ್ದರೆ ಸಾಕು. ಅಂದರೆ ದೃಢನಿಶ್ಚಯದಿಂದ ತನ್ನ ಮನಸ್ಸನ್ನು ಇತಿಕರ್ತವ್ಯತೆಯ ಕಡೆಗೆ ತೊಡಗಿಸಲಿಕ್ಕೆ ಬರುವದು. ಮತ್ತು ಅನುಭವದಿಂದ ಚಾತುರ್ಯವೂ ಜ್ಞಾನವೂ ಪ್ರಾಪ್ತವಾಗುವದು. ಹಾಗು ಆತ್ಮವಿಶ್ವಾಸದಿಂದ ಅಜ್ಞಾನ ಹಾಗು ದುಃಖಗಳು ನಾಶವನ್ನೈದುವವು; ಈ ಪ್ರಕಾರ ಶಾಂತಿಸುಖವು ಪ್ರಾಪ್ತವಾಗಿ ಆತನು ಸರ್ವೋತ್ತಮನಾಗುವನು. ಇದೆಲ್ಲವೂ ಮನುಷ್ಯನ ಆಧೀನದಲ್ಲಿಯೇ ಇದೆ. "ನರ್ ಜಬ್ ಕರನೀ ಕರೇ ತೋ ನರ್ ಕಾ ನಾರಾಯಣ್ ಹೋ ಜಾಯ್" ಎಂಬ ಕಬೀರದಾಸರ ವಚನವು ಮೇಲಿನ ತಾತ್ಪರ್ಯವನ್ನೇ ಹೇಳುತ್ತದೆ.

ನಮ್ಮ ಆಯುಷ್ಯದಲ್ಲಿ ದುಃಸಹವಾದ ಎಷ್ಟೋ ಕಷ್ಟದಾಯಕ ಸಂಕಟಗಳು ಒದಗುತ್ತವೆ. ಆದರೆ ಅವುಗಳ ಮೂಲಕಾರಣವನ್ನು ಶೋಧಿಸಿ, ಸಮೂಲವಾಗಿಯೇ ಅವುಗಳನ್ನು ನಾಶ ಮಾಡಬೇಕು. ಷಡ್ರಿಪುಗಳು, ಕರ್ಮೇಂದ್ರಿಯಗಳು; ವಾಸನೆಗಳು ಇವುಗಳನ್ನು ಶಮದಮಾದಿಗಳಿಂದ ನಿರೋಧಿಸದಿದ್ದರೆ, ಅವು ಪ್ರಬಲವಾಗಿ ದುಃಖದಾಯಕವಾಗುವವು. ಆದರೆ ಅವುಗಳನ್ನು ನಿಯಮನ ಪಡಿಸಿದರೆ, ಅವುಗಳಿಂದ ಅತ್ಯುತ್ತಮವಾದ ಫಲವು ಪ್ರಾಪ್ತವಾಗುವದು. ಆಯುಷ್ಯದೊಳಗಿನ ಸಂಕಟಗಳು ಭಯಂಕರವಾಗಿಯೂ, ಕರ್ತವ್ಯವು ದೊಡ್ಡದಾಗಿಯೂ, ಸಾಧ್ಯವು ಅನಿಶ್ಚಿತವಾಗಿಯೂ ಇರುವದರಿಂದ ಚಿಂತೆಯ ಮೂಲಕ ಎಷ್ಟೋ ಮನುಷ್ಯರು ಸಣ್ಣಾಗುವದನ್ನು ನಾವು ನಿತ್ಯಶಃ ನೋಡುತ್ತೇವೆ. ಆದರೆ ಈ ಸಂಕಟಪರಂಪರೆಯು ಕೇವಲ ಭಾಸಮಯವಾಗಿಯೂ ಕಾಲ್ಪನಿಕವಾಗಿಯೂ ಇದ್ದು, ಇದರ ಪ್ರತೀಕಾರವನ್ನು ಮಾಡುವದು ಪ್ರತಿಯೊಬ್ಬನಿಗೆ ಸಾಧ್ಯವಿದೆ. ಜಗತ್ತಿನಲ್ಲಿ ಸ್ವಯಂಸಿದ್ಧವಾದ ಹಾಗು ಚಿರಕಾಲಿಕವಾದ ದುಃಖವು ಇಲ್ಲವೆ ಇಲ್ಲ; ಮತ್ತು ಮನಸ್ಸಿಗೆ ದುಃಖದ ಸಂಪರ್ಕವೇ ಆಗುವ ಹಾಗಿಲ್ಲ. ಈ ಪ್ರಕಾರದ ಸ್ಥಿತಿಯನ್ನು ಪ್ರಾಪ್ತಮಾಡಿಕೊಳ್ಳುವುದು ಅಶಕ್ಯವಲ್ಲ. ಪರಮೇಶ್ವರನ ಅಕ್ಷಯವಾದ ಹಾಗು ಸಾರ್ವತ್ರಿಕವಾದ ನ್ಯಾಯದ ಮೇಲೆ ದೃಢವಾದ ವಿಶ್ವಾಸವನ್ನಿಡುವದೂ, ಯಾವತ್ತು ಜೀವಜಾತಿಗಳ ಕಲ್ಯಾಣವಾಗಬೇಕೆಂಬ ಸದ್ಭಾವನೆಯನ್ನು ಧಾರಣ ಮಾಡುವದೂ ಶಾಶ್ವತ ಸುಖದ ಗುರುಮಂತ್ರವಾಗಿದೆ. ಯಾವ ಮನುಷ್ಯನು ಧೈರ್ಯವಂತನೂ, ಗಂಭೀರನೂ, ದೃಢನಿಶ್ಚಯವುಳ್ಳವನೂ ಆಗಬೇಕೆಂದು ಇಚ್ಛಿಸುವನೋ, ಅವನು ಇಡೀ ಜಗತ್ತಿನ ಕಲ್ಯಾಣ ಮಾಡುವದೇ ತನ್ನ ಆಯುಷ್ಯದ ಮುಖ್ಯ ರಹಸ್ಯವೆಂಬದನ್ನು ದೃಢವಾಗಿ ನಂಬಿರಲಿಕ್ಕೆ ಬೇಕು. ಜಗತ್ತಿನೊಳಗಿನ ವ್ಯವಹಾರಗಳನ್ನು

ಯಥಾರೀತಿಯಾಗಿ ಜರುಗಿಸಿ, ಮೋಕ್ಷಸುಖದ ಆನಂದವನ್ನು ಸವಿಯಲಿಳಿಸುವವನು ಈ ಜಗತ್ತಿನಲ್ಲಿ ದುಃಖವೆಂಬದು ಇಲ್ಲವೇ ಇಲ್ಲವೆಂದೂ ಅದು ನಮ್ಮ ಕೃತಿಯ ಫಲವಾಗಿರುವವೆಂದೂ ಸಂಪೂರ್ಣವಾಗಿ ಲಕ್ಷ್ಯದಲ್ಲಿಡಬೇಕು. ಆದರೆ ಮನುಷ್ಯನ ಮನಸ್ಸು ತೀರ ದುರ್ಬಲವಾಗಿರುತ್ತದೆ. ಅವನು ತನಗೆ ತಾನೇ ಮುಂದಾಳುವಾಗಿ ತನ್ನ ಕೃತಿಗಳನ್ನು ಪ್ರತಿಪಾದಿಸುತ್ತ ದುಃಖದ ಕಾರಣವು ಬೇರೆಯಾಗಿರುವದೆಂದು ಅನ್ನುತ್ತಾನೆ. ಈ ತಿಳುವಳಿಕೆಯ ಮೂಲಕ ನನ್ನ ದುಃಖದ ಮೂಲವು ನಾನೇ ಆಗಿರುವೆನೆಂಬದು ಆತನ ಲಕ್ಷದಲ್ಲಿ ಬರುವದಿಲ್ಲ. ಆದರೆ "ಸ್ವಕರ್ಮ ಸೂತ್ರಗ್ರಥಿತೋ ಹಿ ಲೋಕಃ" ಎಂಬುದು ಸ್ವಲ್ಪ ವಿಚಾರದಿಂದ ಯಾರಿಗಾದರೂ ತಿಳಿಯುವಂತಿದೆ. ಯಾವನು ತನ್ನ ಜೀವಿತವನ್ನು ಸಾರ್ಥಕಗೊಳಿಸಲಿಚ್ಛಿಸುವನೋ, ಆತನು ಈ ಜ್ಞಾನವನ್ನು ಅವಶ್ಯವಾಗಿ ಸಂಪಾದಿಸಲಿಕ್ಕೆ ಬೇಕು. ಈ ಮಾತಿನ ಮೇಲೆ ಮೊದಲು ದೃಢವಾದ ವಿಶ್ವಾಸವನ್ನಿಡಬೇಕು. ನಂತರ ಅನುಭವದಿಂದ ನಿಶ್ಚಿತ ಜ್ಞಾನವಾಗಿ ಆ ತಿಳುವಳಿಕೆಯು ದೃಢವಾಗುವದು.

ಪರಮೇಶ್ವರನು ನಮ್ಮನ್ನು ಪರೀಕ್ಷಿಸುವದಕ್ಕೋಸರ ದುಃಖಗಳನ್ನನುಭವಿಸ ಹಚ್ಚುವನೆಂಬ ದೃಷ್ಟಿಯಿಂದ ಸಂಕಟಗಳನ್ನು ನೋಡಹತ್ತಿದರೆ, ಅವುಗಳ ತೀವ್ರತೆಯು ಕಡಿಮೆಯೆನಿಸುವದು. ಪರಮೇಶ್ವರನಲ್ಲಿ ನಿಷ್ಠೆಯುಳ್ಳ ಮನುಷ್ಯನು ಈ ದೃಷ್ಟಿಯಿಂದಲೇ ತನ್ನ ವರ್ತನಕ್ರಮವನ್ನಿಟ್ಟು ಅವುಗಳನ್ನು ನೀಗುವನು. ಜ್ಞಾನವಂತನು ಸರ್ವ ದುಃಖಗಳೊಳಗಿಂದಲೂ ಪಾರಾಗುವನು; ಅನುಭವದಿಂದ ಯಾವತ್ತು ದುಃಖಗಳ ಬೀಜವು ಯಾತರಲ್ಲಿ ಉಂಟೆಂಬುದು ಅವನಿಗೆ ಗೊತ್ತಾಗುವದು; ಈ ಅನುಭವಜನ್ಯ ಜ್ಞಾನದ ಮೂಲಕ ಮನುಷ್ಯನ ಶೀಲವು ಉತ್ತಮವಾಗುತ್ತ ನಡೆದು ಸಂಕಟಗಳಲ್ಲಿಯಾದರೂ ಅವನು ತನ್ನ ಉನ್ನತಿಯನ್ನೇ ಮಾಡಿಕೊಳ್ಳುವನು.

ಪರಮೇಶ್ವರನ ಮೇಲಿರುವ ಭಕ್ತಿಯು ಅರುಣೋದಯವು; ಮುಂದೆ ಜ್ಞಾನಪ್ರಾಪ್ತಿಯೇ ಸೂರ್ಯೋದಯವು. ಈಶ್ವರಭಕ್ತಿಯ ಹೊರತು ಮನುಷ್ಯನಲ್ಲಿ ಧೈರ್ಯವು ಪ್ರಾಪ್ತವಾಗುವದಿಲ್ಲ; ಅಥವಾ ಮನಸ್ಸಿಗೆ ಶಾಶ್ವತವಾದ ಶಾಂತಿಯು ಲಭಿಸುವದಿಲ್ಲ. ಸಂಕಟಗಳು ಪ್ರಾಪ್ತವಾಗಲು ಭಗವದ್ಭಕ್ತರು ಚಂಚಲಿತರಾಗುವದಿಲ್ಲ; ಅಥವಾ ನಿರಾಶರಾಗುವದಿಲ್ಲ. ಎದುರಿನ ಮಾರ್ಗವು ಎಷ್ಟೇ ಭಯಾನಕವಾಗಿಯೂ ಸಂಕಟಮಯವಾಗಿಯೂ ಕಂಡಾಗ್ಯೂ, ಆದರಾಚೆಯಲ್ಲಿರುವ ಶಾಶ್ವತ ಸುಖ ಹಾಗು ಪೂರ್ಣ ಜ್ಞಾನಗಳ ಆಗರವು ತನ್ನ ಕೈಸೇರತಕ್ಕದ್ದಿರುವದೆಂದು ಶ್ರದ್ಧಾಳುವಾದ ಮನುಷ್ಯನು ನಂಬುತ್ತಾನೆ.

ಸತ್ಯಕ್ಕೆ ಸಾವಿಲ್ಲ, ಅಥವಾ ಸದಾಚಾರಕ್ಕೆ ಎಲ್ಲಿ ಹೋದರೂ ವಿಜಯವು ಪ್ರಾಪ್ತವಾಗುವದೆಂಬ ಸಂಗತಿಯ ಮೇಲೆ ಯಾವ ಮನುಷ್ಯನ ವಿಶ್ವಾಸವಿರುವದಿಲ್ಲವೋ, ಅಂತಹನು ಯಃಕಶ್ಚಿತ ಸಂಕಟದಿಂದ ಸಹ ಗರ್ಭಗಳಿತನಾಗುವನು. ಇದರ ಕಾರಣವು ಸ್ಪಷ್ಟವೇ ಇದೆ. ಯಾವನು ಸದಾಚಾರದಿಂದ ವರ್ತಿಸುವದಿಲ್ಲವೋ, ಆತನು ದುರಾಚಾರದಿಂದ

ನಡೆಯುವನೆಂದು ಬೇರೆ ಹೇಳುವ ಕಾರಣವೇ ಇಲ್ಲ. ಇಡೀ ಜಗತ್ತು ದುಃಖಪೂರ್ಣವಾಗಿರುತ್ತದೆಂಬ ಭಾವನೆಯುಳ್ಳವನ ಪಾಲಿಗೆ ದುಃಖದ ಹೊರತು ಎರಡನೆಯವರಿಗೆ ಮನ ಬಂದಂತೆ ಮಾತನಾಡುವ ಎಷ್ಟೋ ಜನರನ್ನು ನಾವು ಕಾಣಬಹುದು. ಎರಡನೆಯವರು ನಮಗೆ ವಿಘ್ನವಾಗದಿದ್ದರೆ, ನಮ್ಮ ಕೆಲಸವು ಕೈಗೂಡದೆ ಎಂದೂ ಇರುತ್ತಿದ್ದಿಲ್ಲ; ಅದರಿಂದ ದೊರೆಯುವ ಫಲವನ್ನು ನಾವು ನಿಶ್ಚಯವಾಗಿ ಅನುಭವಿಸುತ್ತಿದ್ದೆವು. ಈ ಪ್ರಕಾರ ಅವರು ಭಾವಿಸುತ್ತಾರೆ. ಎರಡನೆಯವರು ಹೇಗೆ ತೊಂದರೆ ಕೊಟ್ಟರು ? ಹೇಗೆ ಮೋಸಗೊಳಿಸಿದರು ? ಹೇಗೆ ಘಾತ ಮಾಡಿದರು ? ಈ ಸಂಗತಿಗಳನ್ನು ಅವರು ಮೇಲಿಂದ ಮೇಲೆ ಬಡಬಡಿಸುತ್ತಾರೆ. ನಾವು ಸ್ವತಃ ತೀರ ನಿರುಪದ್ರವಿಗಳಿದ್ದು, ಸುಸ್ವಭಾವ ಮತ್ತು ಪ್ರಾಮಾಣಿಕತನಗಳು ನಮ್ಮಲ್ಲಿ ಪೂರ್ಣವಾಗಿ ನೆಲೆಗೊಂಡಿವೆಯೆಂದೂ, ಇತರರು ಮಾತ್ರ ಕಪಟಿಗಳೂ ಮತ್ಸರವುಳ್ಳವರೂ ಇರುವರೆಂದೂ ಅವರು ದೃಢವಾಗಿ ತಿಳಿದುಕೊಂಡಿರುತ್ತಾರೆ. ಇತರರಂತೆ ದುಃಸ್ವಾರ್ಥಿಗಳೂ, ಧೂರ್ತರೂ ಆಗಿದ್ದರೆ ನಾವಾದರೂ ಪ್ರಸಿದ್ಧರೂ ವೈಭವಶಾಲಿಗಳೂ ಆಗುತ್ತಿದ್ದವೆಂದು ಅನ್ನಲು ಸಹ ಅವರು ಹಿಂದೆ ಮುಂದೆ ನೋಡುವದಿಲ್ಲ. ನಾವು ವಿಶೇಷವಾಗಿ ಸ್ವಾರ್ಥತ್ಯಾಗಿಗಳಿದ್ದ ಮೂಲಕ ನಮ್ಮ ಉತ್ಕರ್ಷವಾಗದೆ ಅವನತಿಯೇ ಆಗುತ್ತ ನಡೆದಿದೆಯೆಂದೂ ಅವರು ನುಡಿಯುವರು. ಈ ಪ್ರಕಾರ ಜುಂಭಬಡಿಯುವ ಜನರಿಗೆ ಚಲೋದು ಮತ್ತು ಕೆಟ್ಟದು ಇವುಗಳೊಳಗಿನ ಭೇದವು ತಿಳಿಯುವದಾದರೂ ಹೇಗೆ ? ಯಾಕಂದರೆ, ಮನುಷ್ಯಸ್ವಭಾವದಲ್ಲಾಗಲಿ ಇಡೀ ಜಗತ್ತಿನಲ್ಲಾಗಲಿ ಚಲೋದೆಂಬದು ಸ್ವಲ್ಪಾದರೂ ಇರುವದೆಂದು ಅವರು ತಿಳಿದಿದ್ದರಷ್ಟೇ ಮುಂದಿನ ಮಾತು ? ಎರಡನೆಯವರ ದೋಷಗಳು ಮಾತ್ರ ಅವರಿಗೆ ಕಾಣುತ್ತವೆ. ಸ್ವತಃ ತಾವು ನಿರ್ದೋಷಿಗಳಾಗಿದ್ದು, ವಿನಾಕಾರಣ ದುಃಖದಿಂದ ಪೀಡಿತರಾಗಿರುವೆವೆಂದು ಅವರು ತಿಳಿದುಕೊಳ್ಳುತ್ತಾರೆ. ಸ್ವಂತ ದೋಷವನ್ನು ಒಪ್ಪಿಕೊಳ್ಳದೆ ಇಡೀ ಜಗತ್ತನ್ನೇ ದುಷ್ಟವೆಂದು ಭಾವಿಸುತ್ತಾರೆ. ಅವರ ಅಂತರ್ಯಾಮದಲ್ಲಿ ಪಾಪವು ತುಂಬಿಕೊಂಡಿರುವ ಮೂಲಕ ಇಡೀ ಜಗತ್ತು ದುಷ್ಕೃತ್ಯಗಳ ಸಾಮ್ರಾಜ್ಯವೆಂದೇ ಅವರಿಗೆ ಭಾಸವಾಗುತ್ತದೆ. ಮತ್ತು 'ಸತ್ಯ' ಹಾಗು 'ಅಸತ್ಯ'ಗಳ ಹೋರಾಟದಲ್ಲಿ 'ಅಸತ್ಯ'ಕ್ಕೇ ವಿಜಯವು ಪ್ರಾಪ್ತವಾಗುತ್ತದೆಂದು ಅವರು ನಿಃಸಂದೇಹವಾಗಿ ತಿಳಿದುಕೊಂಡಿರುತ್ತಾರೆ. ಸ್ವಂತದ ಮೌರ್ಖ್ಯ, ಅಜ್ಞಾನ, ದುರ್ಬಲತೆ ಮೊದಲಾದವುಗಳ ಜ್ಞಾನವು ಅವರಿಗೆ ಇರುವದಿಲ್ಲಾದ ಕಾರಣ, ನಾವು ದುರ್ದೈವಿಗಳೆಂದೂ, ದುಃಖ ದುರ್ಭಾಗ್ಯಗಳೇ ನಮ್ಮ ಹಣೇಬರಹದಲ್ಲಿವೆಯೆಂದೂ ಅವರಿಗೆ ಅನಿಸಹತ್ತುತ್ತದೆ.

ತನ್ನ ಜೀವಿತವನ್ನು ಸಾರ್ಥಕ ಮಾಡಿಕೊಂಡು ಯಶಸ್ವಿಯಾಗಬೇಕೆಂದೂ, ತನ್ನ ಆಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಂಡು ಆತ್ಯಂತಿಕ ಕಲ್ಯಾಣವನ್ನು ಮಾಡಿಕೊಳ್ಳಬೇಕೆಂದೂ ಇಚ್ಛಿಸುವ ಪ್ರತಿಯೊಬ್ಬ ಮನುಷ್ಯನು ಯಾವದರ ಮೂಲಕ ಉತ್ತಮವಾದದ್ದೂ ನಿಷ್ಪಾಪವಾದದ್ದೂ ಯಾವದೂ ಇಲ್ಲವೆಂದೂ ಜಗತ್ತಿನಲ್ಲೆಲ್ಲ ಪಾಪವೂ ದುರಾಚ

ರಣವೂ ತುಂಬಿರುವದೆಂದೂ ಭಾಸಮಾನವಾಗುವದೋ, ಅಂತಹ ಮನೋದೌರ್ಬಲ್ಯವನ್ನು ಸಂಪೂರ್ಣವಾಗಿ ಪರಿತ್ಯಜಿಸಬೇಕು. ಅಪ್ರಾಮಾಣಿಕತೆ, ಪರಮಾಚನ ಮತ್ತು ಸ್ವಾರ್ಥಸಾಧಕತೆ ಇವುಗಳಿಂದ ತಮಗೆ ವಿಜಯವು ಪ್ರಾಪ್ತವಾಗುವದೆಂದು ಯಾರು ಭಾವಿಸುವರೋ, ಅವರ ಪಾಲಿಗೆ ದಾರಿದ್ರ್ಯ, ದುಃಖ ಮತ್ತು ಅಪಯಶಗಳು ನಿಶ್ಚಯವಾಗಿ ಬರತಕ್ಕವೆಂದೇ ಭಾವಿಸಬೇಕು. ಯಾವನು ಬೇರೊಬ್ಬರ ಸಮತೆಯನ್ನು ಸಂಪಾದಿಸುವದಕ್ಕಾಗಿ ಯಾವಾಗಲೂ ಆತ್ಮವಂಚನೆಯನ್ನು ಮಾಡಿಕೊಂಡು ತನ್ನ ಉಚ್ಚತಮ ಮನೋವಿಕಾರಗಳನ್ನು ಒತ್ತಿ ಇಡುವನೋ, ಅವನಲ್ಲಿ ಧೈರ್ಯವು ಎಷ್ಟರ ಮಟ್ಟಿಗಿರಬಹುದೆಂಬಪೂ, ಸುಖ–ಶಾಂತಿಗಳು ಆತನಿಗೆ ಎಷ್ಟರಮಟ್ಟಿಗೆ ಪ್ರಾಪ್ತವಾಗಬಹುದೆಂಬದೂ ಸ್ಪಷ್ಟವೇ ಇದೆ. 'ಅಸತ್ಯ'ವು 'ಸತ್ಯ'ಕ್ಕಿಂತ ಬಲವತ್ತರವಾಗಿರುವದೆಂದೂ, ದುಷ್ಟ ಮನುಷ್ಯರು ಸುಖಿಗಳಾಗಿಯೂ ಜನಸ್ತುತಿಗೆ ಪಾತ್ರರಾಗಿಯೂ ಜೀವಿಸುವರೆಂದೂ ಯಾವನು ತಿಳಿದುಕೊಂಡಿರುವನೋ, ಆ ಮನುಷ್ಯನು ಇನ್ನೂ ಪಾಪಾತ್ಮನಾಗಿರುವನೆಂದೂ ಆತನಿಗೆ ಎಂದೂ ಜಯವು ಪ್ರಾಪ್ತವಾಗಲಾರದೆಂದೂ ನಿಶ್ಚಯವಾಗಿ ತಿಳಿದುಕೊಳ್ಳಬೇಕು. ಇಡೀ ಜಗತ್ತು ದುಷ್ಕೃತ್ಯಗಳಲ್ಲಿ ಮುಳುಗಿ ಹೋಗಿದೆಯೆಂದೂ ಎಲ್ಲ ಕಡೆಯಲ್ಲಿಯೂ 'ಕೆಟ್ಟ'ದರ ಉತ್ಕರ್ಷವು ನಡೆದಿದ್ದು, 'ಚಲೋ'ದನ್ನು ಯಾರೂ ಕೇಳುವದಿಲ್ಲವೆಂದೂ ಸಕೃದ್ದರ್ಶನಕ್ಕೆ ಒಂದು ವೇಳೆ ಕಂಡುಬರಬಹುದು. ಆದರೆ ಈ ಭಾವನೆಯು ನಿಜವಾದದ್ದೆಂದು ಮಾತ್ರ ಯಾರೂ ತಿಳಿಯಬಾರದು! ತೋರಿಕೆಯ ಸ್ಥಿತಿಯಿಂದ ನಿಜವಾದ ಸ್ಥಿತಿಯು ಭಿನ್ನವಾಗಿದೆ ! ಜಗತ್ತಿನ ವಸ್ತುಸ್ಥಿತಿಯು ಇದ್ದಕ್ಕಿದ್ದ ಹಾಗೆ ಗೋಚರವಾಗುವದಿಲ್ಲ. ಜಗತ್ತಿನೊಳಗಿನ ಕ್ರಾಂತಿಕರವಾದ ಕಾರ್ಯಕಾರಣ ಸಂಬಂಧವನ್ನು ಚನ್ನಾಗಿ ತಿಳಿದುಕೊಂಡು, ನಿರ್ಮಲವಾದ ಅಂತಃಕರಣದಿಂದಲೂ ಶುದ್ಧವಾದ ಮನಸ್ಸಿನಿಂದಲೂ ಜಗತ್ತಿನ ನಿರೀಕ್ಷಣ ಮಾಡಿದರೆ ಈಶ್ವರನ ನ್ಯಾಯಪ್ರಿಯತೆಯು ಗೋಚರವಾಗದೆ ಎಂದೂ ಇರಲಾರದು. ಈ ಪ್ರಕಾರ ರಹಸ್ಯವನ್ನು ತಿಳಿದುಕೊಂಡು ಸುಸಂಸ್ಕೃತ ದೃಷ್ಟಿಯಿಂದ ಜಗತ್ತನ್ನು ನೋಡಹತ್ತಿದರೆ, 'ಕೆಟ್ಟ'ದರ ಸ್ಥಳದಲ್ಲಿ 'ಚಲೋ'ದೂ, ಅಸ್ವಸ್ಥತೆಯ ಸ್ಥಳದಲ್ಲಿ ಸ್ವಸ್ಥತೆಯೂ, ಅನ್ಯಾಯದ ಸ್ಥಳದಲ್ಲಿ ನ್ಯಾಯವೂ ಕಂಡುಬರಹತ್ತುವದು. ಪರಮೇಶ್ವರನ ಇಚ್ಛಾಮಾತ್ರದಿಂದ ಒಮ್ಮೆ ಪ್ರಳಯವಾದನಂತರವೇ ಬ್ರಹ್ಮಾಂಡದ ಉತ್ಪತ್ತಿಯಾಗಿರುತ್ತದೆ. ಆದರಲ್ಲಿ ಈಗ ದುಃಖವೆಂಬುದೇ ಇಲ್ಲ. ಪ್ರಳಯ ಸಮಯದಲ್ಲಿ ಯಾವತ್ತು ದುಷ್ಟ ಸಂಗತಿಗಳು ನಾಶ ಹೊಂದಿರುತ್ತವೆ; ಇನ್ನು ಮೇಲೆ 'ಕೆಟ್ಟ'ದರ ಉತ್ಕರ್ಷವು ಆಗುವಂತಿಲ್ಲ. ಇದೆಲ್ಲವೂ ಸುಖಮಯ ಸ್ವಪ್ನವೆಂಬದು ಮಾತ್ರ ನಿಜ. ಯಾಕಂದರೆ, ಜಗತ್ತಿನಲ್ಲಿ ಇನ್ನೂ ಎಷ್ಟೋ ಪಾಪವು ತುಂಬಿಕೊಂಡಿದೆ. ಹೀಗಿಲ್ಲದಿದ್ದರೆ ನೈತಿಕ ಧ್ಯೇಯದ ಆವಶ್ಯಕತೆಯೇ ಇರುತ್ತಿರಲಿಲ್ಲ. ಜಗತ್ತಿನೊಳಗೆ ಇನ್ನೂ ಎಷ್ಟೋ ದುಃಖವಿದೆ; ಪಾಪ ಹಾಗು ದುಃಖಗಳ ಕಾರ್ಯಕಾರಣ ಸಂಬಂಧವಿದೆ. ಆದರಂತೆಯೇ ಜಗತ್ತಿನಲ್ಲಿ 'ಉತ್ತಮ'ವಾದದ್ದೂ ಬಹಳವಿದೆ; ಅವಿನಾಶಿಯಾದ ಆನಂದವಿದೆ; ಮತ್ತು ಚಲೋದು ಹಾಗು ಆನಂದಗಳ ಕಾರ್ಯಕಾರಣ ಸಂಬಂಧವೂ ಇದೆ.

'ಚಲೋ'ದಕ್ಕೆ ಯಾವಾಗಲೂ ವಿಜಯವು ಪ್ರಾಪ್ತವಾಗುವದು; 'ಚಲೋ'ದೇ ಅಕ್ಷಯವಾದದ್ದು. ಈ ಪ್ರಕಾರ ಯಾವನ ಅಂತರ್ಯಾಮದಲ್ಲಿ ವಿಶ್ವಾಸವಿರುವದೋ, ಮತ್ತು ಅಲ್ಪವಾದ ತೋರಿಕೆಯ ದುಃಖ ಹಾಗು ಅನ್ಯಾಯಗಳಿಂದ ಆ ವಿಶ್ವಾಸವು ವಿಚಲವಾಗುವದಿಲ್ಲವೋ, ಅವನೇ ಸಂಶಯ ಹಾಗು ನಿರಾಶೆಗಳ ಉಚ್ಛೇದ ಮಾಡಿ ಯಾವತ್ತು ಸಂಕಟಗಳೊಳಗಿಂದ ಒಳ್ಳೇ ಧೈರ್ಯದಿಂದ ಪಾರಾಗುವನು. ಆತನಿಗೆ ಯಾವತ್ತು ಸಂಗತಿಗಳಲ್ಲಿ ಯಶಸ್ಸು ಬಂದೇ ಬರುವದೆಂಬ ನಿಯಮವಿಲ್ಲದಿದ್ದರೂ, ಅಪಯಶಸ್ಸಿನಿಂದ ಅವನು ಚಂಚಲಿತನೂ ಅಸಮಾಧಾನಿಯೂ ಆಗದೆ ಉಚ್ಚತಮವಾದ ಹೊಸ ಹೊಸ ಧ್ಯೇಯಗಳ ಆಕಾಂಕ್ಷೆಯನ್ನು ಮನಸ್ಸಿನಲ್ಲಿ ಹಿಡಿದು ತನ್ನ ಉನ್ನತಿಯನ್ನು ಮಾಡಿಕೊಳ್ಳುವನು. ಅಪಯಶಸ್ಸಿನಿಂದ ಆತನು ಹತವೀರ್ಯನಾಗುವದಿಲ್ಲ. ಇಷ್ಟೇ ಅಲ್ಲ; ಅಸಾಧ್ಯವಾದ ಕಾರ್ಯಗಳನ್ನು ಸಹ ಸಾಧ್ಯಮಾಡಿಕೊಳ್ಳಲಿಕ್ಕೆ ಆತನಲ್ಲಿ ನವೀನ ಧೈರ್ಯವು ಉತ್ಪನ್ನವಾಗುವದು. ಆಯುಷ್ಯರೂಪವಾದ ಈ ಗಟ್ಟಿಮುಟ್ಟ ಸರಪಳಿಯೊಳಗಿಂದ ಅಪಯಶೋರೂಪವಾದ ದುರ್ಬಲ ಕಳಿಗೆಗಳನ್ನು ತೆಗೆದು ಬಿಟ್ಟರೆ, ಉತ್ತಮವಾದ ಹಾಗು ಬಲವಾದ ಸರಪಳಿಯೇ ಉಳಿಯುವದು. ಈ ಪ್ರಕಾರ ಅಪಯಶಸ್ಸೂ ಒಂದು ಬಗೆಯ ಸಹಾಯಕಾರಿಯಾಗುವದು; ಒಂದು ವೇಳೆ ಈಶ್ವರೀ ಸಂಕೇತವೇ ಹೀಗಿದ್ದರೂ ಇರಬಹುದು.

ಯಾವನೊಬ್ಬ ಮನುಷ್ಯನು ರಣಕ್ಷೇತ್ರದಲ್ಲಿ ಬಲಾಢ್ಯನಾದ ಶತ್ರುವಿನ ಅಸಹ್ಯವಾದ ಮದ್ದು ಗುಂಡುಗಳ ಹೊಡತಕ್ಕೆ ಶಾಂತತನದಿಂದ ಎದುರಾಗಬಹುದು; ಅಥವಾ ಪ್ರಕ್ಷುಬ್ಧವಾದ ಯಾವದೊಂದು ಭಯಂಕರವಾದ ಕ್ರೂರ-ಶ್ವಾಪದದ ಮುಂದೆ ಆನಂದದಿಂದ ಹೋಗಬಹುದು; ಆದರೆ ಅವನೇ ಈ ಸಂಸಾರ ಸಾಗರವನ್ನು ದಾಟಲಿಕ್ಕೆ ತೀರ ಅಸಮರ್ಥನಾಗಿರುವನೆಂದು ನಮಗೆ ಕಂಡು ಬರಬಹುದು. ಅವನು ಅಂತಸ್ಥ ಮನೋವಿಕಾರವೆಂಬ ಶತ್ರುವಿನ ಕೈಯಲ್ಲಿ ಸಿಕ್ಕು ಹಣ್ಣಾಗಿ ಹೋಗುವನು. ರಣಕ್ಷೇತ್ರದ ಮೇಲೆ ಭಯಂಕರವಾದ ಸಂಗ್ರಾಮದಲ್ಲಿ ಧೈರ್ಯದಿಂದ ಕಾದಾಡಲಿಕ್ಕೆ ಬೇಕಾಗುವ ಸಾಮರ್ಥ್ಯಕ್ಕಿಂತ, ಸರಸವಾದ ಹಾಗು ದೈವಿಕ ಸಾಮರ್ಥ್ಯವು ಸಂಕಟ ಸಮಯದಲ್ಲಿ ಮನಸ್ಸಿನ ಶಾಂತತೆಯನ್ನು ಕಾಯ್ದುಕೊಳ್ಳಲಿಕ್ಕೆ ಬೇಕಾಗುತ್ತದೆ. ಎರಡನೆಯವರನ್ನು ಗೆಲ್ಲುವದಕ್ಕಿಂತ ತನ್ನನ್ನು ತಾನು ಗೆಲ್ಲಲಿಕ್ಕೆ ಹೆಚ್ಚು ಸಾಮರ್ಥ್ಯವು ಬೇಕು. ಈ ಮನೋಧೈರ್ಯವೇ ಭಕ್ತಿಯ ಸಹಚಾರಿಯು. ದೇವರ ಮೇಲೆ ಕೇವಲ ವಿಶ್ವಾಸವನ್ನಿಟ್ಟರೆ ತೀರಲಿಲ್ಲ. ಪರಮೇಶ್ವರನ ಅಸ್ತಿತ್ವದ ಮೇಲೂ ಆತನ ಜಗತ್-ಕರ್ತೃತ್ವದ ಮೇಲೂ ಶ್ರದ್ಧೆಯನ್ನಿಡುವದು ಕೇವಲ ಮೇಲುಪಚಾರವು. ಅದರಿಂದ ನಿಜವಾದ ಭಕ್ತಿಯು ಉತ್ಪನ್ನನಾಗಲಾರದು. ಈಶ್ವರ ವಿಷಯಕವಾದ ಅಭಿಪ್ರಾಯಗಳು ಹಾಗೂ ಭಕ್ತಿ ಇವುಗಳ ಏಕತ್ರ ಸಹವಾಸವಿದ್ದರೂ ಇವು ಪರಸ್ಪರ ಭಿನ್ನವಾಗಿವೆ. ಈಶ್ವರ, ಧರ್ಮಪ್ರಣೀತ ಪುಸ್ತಕಗಳು ಮತ್ತು ಅವತಾರ ಇವುಗಳ ವಿಷಯವಾಗಿ ಗೊತ್ತು ಮಾಡಿದ ಅಭಿಪ್ರಾಯಗಳನ್ನು ಯಾರು ಒಳ್ಳೇ ಅಸ್ತಿಕ್ಯಬುದ್ಧಿಯಿಂದ ಪ್ರತಿಪಾದಿಸುತ್ತಿರುತ್ತಾರೋ, ಅಂತಹ ಎಷ್ಟೋ ಜನರಲ್ಲಿ ನಿಜವಾದ ಭಕ್ತಿಯು ಇಲ್ಲದಿರುವದು

ಕಂಡುಬರುತ್ತದೆ. ಯಾಕಂದರೆ ಅಲ್ಪ ಸ್ವಲ್ಪ ಸಂಕಟಗಳಿಂದ ಸಹ ಅವರು ಸಂತಾಪಗೊಂಡು, ದೇಹಭಾನವನ್ನು ಮರೆತು, ದುಃಖಾರ್ಣವದಲ್ಲಿ ಮುಳುಗಿ ಹೋಗುತ್ತಾರೆ. ಮನುಷ್ಯನು ಅಲ್ಪ ಸ್ವಲ್ಪ ಅಪಯಶಸ್ಸಿನಿಂದ ಕೂಡ ಕ್ಷುಬ್ಧನೂ, ಚಿಂತಾತುರನೂ, ನಿರಾಶನೂ, ದುಃಖಿಯೂ ಆಗುತ್ತಿದ್ದರೆ, ಅವನು ಧಾರ್ಮಿಕನಿದ್ದರೂ ಪರಮೇಶ್ವರನ ಮೇಲೆ ಆತನ ನಿಷ್ಠೆಯಿಲ್ಲವೆಂದೇ ಅನ್ನಬೇಕಾಗುತ್ತದೆ. ಯಾವನಲ್ಲಿ ಭಕ್ತಿಯಿರುವದೋ ಅವನಲ್ಲಿ ಸಂಪತ್ತು, ಧೈರ್ಯ, ಕೀರ್ತಿ ಮತ್ತು ವಿಜಯ ಇವೆಲ್ಲವುಗಳು ಇದ್ದೇ ಇರುತ್ತವೆ. ಮನುಷ್ಯನ ಅಭಿಪ್ರಾಯಗಳು ವಿಚಾರವಾಯುವಿನ ಸಂಪರ್ಕವಾದಂತೆ ಬದಲಾಗುತ್ತಿರುತ್ತವೆ. ವಸ್ತುಸ್ಥಿತಿಯು ನಿಜವಾದ ಜ್ಞಾನವು ಅವುಗಳಿಂದಾಗುವದಿಲ್ಲ. ಅವೆಲ್ಲವೂ ಮಾನವೀಹೃದಯವೆಂಬ ಒಂದೇ ಸ್ಥಾನದಿಂದಲೇ ಉಗಮಹೊಂದುವವು. ಯಾವನು ನಾನು ಇಂತಹ ಧರ್ಮದವನೆಂದು ಹೇಳಿಕೊಳ್ಳುವನೋ, ಹಾಗು ಸ್ವಲ್ಪವರೂ ಸತ್ಕಾರ್ಯಗಳನ್ನು ಮಾಡಲಾರನೋ ಅಂತಹನು ಈಶ್ವರಪರಾಙ್ಮುಖನೆಂದು ಅನ್ನಲಿಕ್ಕೆ ಏನೂ ಬಾಧಕವಿಲ್ಲ. ಯಾವನು ಸತ್ಕೃತ್ಯಗಳಲ್ಲಿ ಮಗ್ನನಿರುವನೋ, ಅಂತಹನು ನಾನು ಯಾವ ಧರ್ಮದವನೂ ಅಲ್ಲವೆಂದು ಹೇಳಿದರೂ ಆತನು ಈಶ್ವರ ಭಕ್ತನೆಂದೇ ತಿಳಿಯಬೇಕು. ಯಾರು ಈಶ್ವರನ ಮೇಲೆ ಭಕ್ತಿಯನ್ನಿಡುವದಿಲ್ಲವೋ ಹಾಗು ಈಶ್ವರನ ಅಸ್ತಿತ್ವವನ್ನೇ ನಂಬುವದಿಲ್ಲವೋ ಅಂತಹರೇ ಯಾವಾಗಲೂ ದುಃಖಿಗಳೂ ಅಸಂತುಷ್ಟಿಗಳೂ ಆಗಿರುತ್ತಾರೆ. ಯಾರು 'ಚಲೋ'ದನ್ನು ಪ್ರೀತಿಸುವದಿಲ್ಲವೋ 'ಕೆಟ್ಟ'ದ್ದನ್ನೇ ಯಾವಾಗಲೂ ಆಶ್ರಯಿಸುವರೋ ಅವರೇ ನಾಸ್ತಿಕರೆಂದು ಹೇಳಬಹುದು. ಈಶ್ವರ ಭಕ್ತಿಯಿಂದ ಮನಸ್ಸಿಗೆ ಧೈರ್ಯ ಬಂದು ಸಂಕಟದೊಳಗಿಂದ ಪಾರಾಗುವ ಶಕ್ತಿಯು ಬರುತ್ತದೆ. ಅಪಯಶಸ್ಸು ಬಂದರೂ ಅದು ಯಶಸ್ಸಿನ ಸೋಪಾನವೆಂದು ಭಾವಿಸುವಷ್ಟು ಮನಸ್ಸಿನ ಸಿದ್ಧತೆಯಾಗುತ್ತದೆ. ಸಹನಶೀಲತೆ ಹಾಗು ಆಘಾತಗಳನ್ನು ತಡಕೊಳ್ಳುವ ಸಾಮರ್ಥ್ಯಗಳು ಬರುತ್ತವೆ; ಯಾವತ್ತು ವಸ್ತುಜಾತಗಳಲ್ಲಿ 'ಸತ್ಯ'ವು ತುಂಬಿಕೊಂಡಿರುವದೆಂದು ಮನಸ್ಸಿಗೆ ಹೊಳೆಯಹತ್ತುತ್ತದೆ; ಮತ್ತು ಅಂತಃಕರಣವು ಪ್ರಫುಲ್ಲವಾಗಿ ಮನಸ್ಸಿನ ನಿಜವಾದ ಯೋಗ್ಯತೆಯು ತಿಳಿಯಹತ್ತುತ್ತದೆ.

ಆದುದರಿಂದ ಎಲೈ ಮನುಷ್ಯನೇ, ನಿನ್ನ ಅಂತಃಕರಣದಲ್ಲಿ ಭಕ್ತಿಯ ದೀಪವನ್ನು ಪ್ರಜ್ವಲಿತವಾಗಿಡು. ಅದರ ಸಹಾಯವನ್ನು ಹೊಂದಿ ಸಂಕಟಗಳ ಅಂಧಃಕಾರಮಯವಾದ ಮಾರ್ಗದೊಳಗಿಂದ ಪಾರಾಗು. ಆ ದೀಪದ ಬೆಳಕು ಅಂಧುಕವಾಗಿದೆ; ಜ್ಞಾನಜ್ಯೋತಿಯ ಪ್ರಕಾಶದಂತೆ ಅದು ಪ್ರಖರತೇಜಸ್ವಿಯಾಗಿಲ್ಲ. ಆದರೂ ಸಂಶಯ ಹಾಗು ನಿರಾಶಗಳೆಂಬ ಮಂಜು–ಇಬ್ಬನಿಗಳೊಳಗಿಂದ ಪಾರಾಗಲು ಅದು ನಿನಗೆ ಸಾಕಷ್ಟು ಸಹಾಯ ಮಾಡುವದು. ಆಧಿವ್ಯಾಧಿ, ಶೋಕ, ಮೋಹ ಮೊದಲಾದವುಗಳ ಸಂಕಟಮಯ ಮಾರ್ಗದೊಳಗಿಂದ ಅದು ನಿನ್ನನ್ನು ಸುರಕ್ಷಿತವಾಗಿ ದಾಟಿಸುವದು; ಮತ್ತು ನಿನ್ನ ಅಂತಃಕರಣವೆಂಬ ಅರಣ್ಯದಲ್ಲಿ ಸ್ವಚ್ಛಂದದಿಂದ ತಿರುಗುತ್ತಿರುವ ಮನೋವಿಕಾರಗಳೆಂಬ ಶ್ವಾಪದಗಳನ್ನು ಹೊಡೆದೋಡಿಸಿ, ಈ ಭಕ್ತಿದೀಪವು ನಿನ್ನನ್ನು ಶುದ್ಧವಾದ

ಆಯುಷ್ಯಕ್ರಮ ಹಾಗು ಉಚ್ಚತಮ ಧ್ಯೇಯಗಳ ಸಪಾಟಪ್ರದೇಶಕ್ಕೆ ಮುಟ್ಟಿಸುವದು. ಇಷ್ಟು ಸಿದ್ಧತೆಯು ನಿನ್ನಲ್ಲಿ ಉಂಟಾದ ಬಳಿಕ ಮುಂದೆ ಪ್ರಕಾಶದ ಆವಶ್ಯಕತೆಯೇ ಉಳಿಯುವದಿಲ್ಲ. ನಿನ್ನ ಸಂಬಂಧದ ಆಧಿವ್ಯಾಧಿ, ಲೋಭ, ಮೋಹ, ಶೋಕ, ಪರಿತಾಪ ಮೊದಲಾದವುಗಳೆಲ್ಲವೂ ನಾಶವಾಗಿ ನವೀನ ಜಾಗ್ರತಿಯು ನಿನ್ನಲ್ಲಿ ಉತ್ಪನ್ನವಾಗುವದು. ಆ ಮೇಲೆ ಶ್ರೇಷ್ಠ ವಿಚಾರಗಳು, ಉಚ್ಚತಮ ಧ್ಯೇಯಗಳು, ಹಾಗು ಶ್ರೇಷ್ಠ ಕರ್ತವ್ಯ ಕರ್ಮಗಳು ಇವುಗಳ ನಿದಿಧ್ಯಾಸವೇ ನಿನಗೆ ಹತ್ತುವದು; ಈ ರೀತಿಯಿಂದ ಪ್ರಾಪ್ತವಾದ ಜ್ಞಾನದ ತೇಜಸ್ಸಿನಿಂದ ನೀನು ಪೂರ್ಣ ಸುಖಿಯಾಗಿ, ಅಕ್ಷಯವಾದ ಶಾಂತಿಯನ್ನೂ ಅವಿನಾಶಿಯಾದ ಆನಂದವನ್ನೂ ಯಥೇಚ್ಛವಾಗಿ ಉಪಭೋಗಿಸುವಿ.

೦

# ೨. ಪುರುಷಾರ್ಥ ಮತ್ತು ಸದ್ಭಾವ

ಮನುಷ್ಯನು ಪುರುಷಾರ್ಥಯುಕ್ತನಾಗಿದ್ದರೇ ಮಾತ್ರ ಅವನಿಂದ ಸದಾಚರಣವು ಸಂಭವಿಸುವದು. ಇದರಂತೆಯೇ ನಿಜವಾದ ಸ್ತ್ರೀ ಧರ್ಮವು ನೆಲೆಗೊಂಡ ಹೊರತು ಸ್ತ್ರೀಯು ಸತ್ವಶೀಲೆಯಾಗಲಾರಳು. ಮತ್ತು ನೀತಿಧೈರ್ಯವಿದ್ದ ಹೊರತು ಸದ್ಭಾವವೂ ಉತ್ಪನ್ನವಾಗಲಾರದು. ನೀತಿಯೂ ಸದ್ಭಾವವೂ ಒಂದೇ ಆಗಿವೆ. ಕ್ಷುಬ್ಧತೆ, ಡಾಂಭಿಕತೆ, ಮುಖಸ್ತುತಿ ಮಾಡುವ ಸ್ವಭಾವ ಇವೆಲ್ಲವುಗಳನ್ನು ಮನಸ್ಸಿನೊಳಗಿಂದ ತೆಗೆದುಹಾಕಬೇಕು; ದುರ್ಬುದ್ಧಿಯು ಸ್ವಭಾವತಃ ದುರ್ಬಲವೂ ಭೀರುವೂ ಆಗಿದ್ದು ಅದರಿಂದ ಎಂದೂ ಸತ್ಪರಿಣಾಮವಾಗಲಾರದು. ಆದರೆ ಸದ್ಬುದ್ಧಿಯು ಸ್ವತಃ ಸಬಲವೂ ತೇಜಸ್ವಿಯೂ ಪರಿಣಾಮಕಾರಿಯೂ ಆಗಿದೆ. ಸ್ತ್ರೀಯರೂ ಪುರುಷರೂ ಒಳ್ಳೆದರಾಗಬೇಕೆಂದು ನಾವು ಅನ್ನುವದರ ಅರ್ಥವೇನಂದರೆ— ಅವರು ಧೈರ್ಯಶಾಲಿಗಳೂ, ಸರಳ ಮನಸ್ಕರೂ, ಆತ್ಮವಿಶ್ವಾಸಿಗಳೂ ಆಗಬೇಕು. ಸುಶೀಲತೆಯನ್ನೂ, ಸಾತ್ವಿಕತನವನ್ನೂ, ಧೈರ್ಯವನ್ನೂ ತಮ್ಮಲ್ಲಿ ತಂದುಕೊಳ್ಳಬೇಕೆಂದು ನಾವು ಹೇಳುವದರ ಅರ್ಥವನ್ನು, ನಾವು ಭೀರುಗಳೂ ಪ್ರಸಂಗದಲ್ಲಿ ಕೈಕಾಲು ಸಹ ಕದಲಿಸದವರೂ ಆಗಬೇಕೆಂದು ಮಾಡುವವರಿಗೆ ನಾವು ಹೇಳುವದರ ರಹಸ್ಯವು ತಿಳಿಯಲಿಲ್ಲವೆಂದೂ, ಅವರು ನಮ್ಮ ಅಭಿಪ್ರಾಯದ ವಿಪರ್ಯಾಸಮಾಡುವರೆಂದೂ ನಾವು ತಿಳಿಯುತ್ತೇವೆ. ನಿಜವಾದ ಪುರುಷಾರ್ಥ, ನಿಜವಾದ ಸ್ತ್ರೀಧರ್ಮ ಇವುಗಳ ಯೋಗ್ಯವಾದ ತಿಳಿವಳಿಕೆಯಿದ್ದವರಿಗೇ ಈ ದೈವೀ ಗುಣಗಳ ಅರ್ಥವು ತಿಳಿಯುವದು; ಅಂತಹರೇ ಶ್ರೇಷ್ಠವಾದ ಆಯುಷ್ಯಕ್ರಮದ ಪರಿಚಯವನ್ನು ಪಡೆಯುವರು. ಯಾರ ನೈಸರ್ಗಿಕ ಮನೋವೃತ್ತಿಗಳು ತೀವ್ರವಾಗಿರುವವೋ, ಯಾರು ಶುದ್ಧಾಚರಣೆಗಳಾಗಿದ್ದು ಉದಾರಮನಸ್ಕರಾಗಿರುವರೋ, ಯಾರ ನೀತಿಮತ್ತೆಯು ಅತ್ಯಂತ ಶ್ರೇಷ್ಠವಾಗಿರುವದೋ ಅಂತಹ ಜನರಿಗೇ ಶ್ರೇಯಃಸಾಧನವು ಸಾಧ್ಯವಾಗುವದು. ಪ್ರಿಯ ಬಂಧುಭಗಿನಿಯರೇ, ಯಾವದು ಪ್ರಸಂಗವಶದಿಂದ ನಿಮ್ಮ ದೇಹಭಾನವನ್ನು ಮರೆಯಿಸುವದೋ, ಯಾವದರ ದೆಸೆಯಿಂದ ನಿಮ್ಮ ಸಾತ್ವಿಕ ವೃತ್ತಿಯನ್ನೂ, ಪಾವಿತ್ರ್ಯವನ್ನೂ, ಪೌರುಷವನ್ನೂ, ನೀವು ಮರೆಯುವಿರೋ, ಅಂತಹ ತಾಮಸೀ ವೃತ್ತಿಯನ್ನು ನಿರೋಧಿಸಿ ನಿಯಮನಪಡಿಸಿ ಯೋಗ್ಯಮಾರ್ಗಕ್ಕೆ ಹಚ್ಚಿರಿ. ಅಂದರೆ ಅದು ನಿಮ್ಮನ್ನು ದೈವೀಸಂಪತ್ತಿಯ ಒಡೆಯರನ್ನಾಗಿ ಮಾಡಿ, ಶ್ರೇಷ್ಠ ಪದಕ್ಕೆ ಮುಟ್ಟಿಸಿ, ಆಯುಷ್ಯದ ಇತಿ ಕರ್ತವ್ಯತೆಯನ್ನು ಸಾಧಿಸಲು ಸಮರ್ಥರನ್ನಾಗಿ ಮಾಡುವದು.

ತಮೋಗುಣವೆಂಬ ರಾಕ್ಷಸನನ್ನು ಪ್ರತಿಯೊಬ್ಬನು ತನ್ನ ವಶದಲ್ಲಿಟ್ಟುಕೊಳ್ಳಬೇಕು. ತನ್ನ ಮನಸ್ಸಿನ ಮೇಲೂ, ಅಂತಃಕರಣದ ಮೇಲೂ ಆತ್ಮದ ಮೇಲೂ ತನ್ನ ಸ್ವಾಮಿತ್ವವಿರಬೇಕೇ ಹೊರತು, ತಮೋಗುಣದ ಅಧಿಕಾರವು ಅವುಗಳ ಮೇಲೆ ನಡೆ

ಯುತ್ತಿರಬಾರದು. ಮನುಷ್ಯನು ಉಚ್ಚ ಮನೋವೃತ್ತಿಗಳಿಂದ ಚ್ಯುತನಾಗಿ ಕ್ಷುದ್ರ ಮನೋವೃತ್ತಿಗಳ ಅಧೀನನಾದನೆಂದರೆ, ಅವನು ಕ್ಷುದ್ರನೂ ದುರ್ಬಲನೂ ಎಂದು ತಿಳಿಯಬೇಕು. ಮನೋವಿಕಾರಗಳು ನಮ್ಮ ಸೇವಕರೇ ಹೊರತು ಯಜಮಾನರಲ್ಲ. ಭೃತ್ಯರನ್ನು ಯೋಗ್ಯ ಕೆಲಸಗಳಲ್ಲಿಯೇ ನಿಯೋಜಿಸಲಿಕ್ಕೆಬೇಕು. ಅವರ ಮೇಲೆ ಅಧಿಕಾರವನ್ನು ನಡೆಸುತ್ತ ಕೈಯಲ್ಲಿಟ್ಟುಕೊಂಡರೆ, ಅವರು ನಮಗೆ ಒಳ್ಳೇ ಉಪಯೋಗಕ್ಕೆ ಬೀಳುವರು.

ಮನುಷ್ಯನ ಜೀವಿತವು ನಿರುಪಯೋಗಿಯಲ್ಲ; ಅವನ ಶರೀರದ ಇಲ್ಲವೆ ಮನಸ್ಸಿನ ಯಾವ ಭಾಗವೂ ನಿರುಪಯುಕ್ತವಾದದ್ದಿಲ್ಲ. ಸೃಷ್ಟಿಯ ನಿಯಮದಲ್ಲಿ ಕಿಂಚಿತ್ತಾದರೂ ವ್ಯತ್ಯಾಸವುಂಟಾಗುವದಿಲ್ಲ. ಯಾವತ್ತು ಜಗತ್ತು ಸತ್ಯದ ತಳಹದಿಯ ಮೇಲೆ ನಿಂತಿರುತ್ತದೆ. ದೇಹಧರ್ಮಗಳೂ, ಮನೋವೃತ್ತಿಗಳೂ, ಇಚ್ಛಾಶಕ್ತಿಗಳೂ ಉತ್ತಮವಾಗಿದ್ದು, ಅವುಗಳನ್ನು ಸರಿಯಾಗಿ ಉಪಯೋಗಿಸುವದರಲ್ಲಿಯೇ ಪವಿತ್ರತೆಯೂ, ಜಾಣತನವೂ, ಯಾವತ್ತು ಸೌಖ್ಯದ ಗುರುಮಂತ್ರವೂ ಇರುತ್ತದೆ. ಆದರೆ ಅವುಗಳನ್ನು ಯೋಗ್ಯ ಮಾರ್ಗಕ್ಕೆ ಹಚ್ಚದೆ ದುರುಪಯೋಗ ಮಾಡಿದರೆ ಮಾತ್ರ ಅತ್ಯಂತ ಪಾಪವೂ ಮೂರ್ಖತನವೂ ಆಗುವದಲ್ಲದೆ, ಯಾವತ್ತು ದುಃಖಗಳ ಬೀಜಾರೋಪಣ ಮಾಡಿಕೊಂಡಂತಾಗುತ್ತದೆ.

ಮನುಷ್ಯನ ಪ್ರವೃತ್ತಿಯು ಸಾಮಾನ್ಯವಾಗಿ ದ್ವೇಷ ಮಾಡುವದರ ಕಡೆಗೂ, ಜಿಹ್ವಾಲೌಲ್ಯದಿಂದ ತಾಮಸೀ ಆಹಾರಗಳನ್ನು ಯಥೇಚ್ಛವಾಗಿ ಉಪಯೋಗಿಸುವದರ ಕಡೆಗೂ ಇರುತ್ತದೆ. ಅದಕ್ಕನುಸರಿಸಿ ಅವುಗಳ ಅತಿರೇಕದಿಂದ ಕಷ್ಟವು ಪ್ರಾಪ್ತವಾಯಿತೆಂದರೆ, ಜೀವಿತವು ವ್ಯರ್ಥವಾಗಿದೆಯೆಂದು ಜನರು ಅನ್ನಹತ್ತುತ್ತಾರೆ. ಇಂತಹರು ಜೀವಿತಕ್ಕೆ ದೋಷವನ್ನಿಡುವದಕ್ಕಿಂತ ಸ್ವಂತದ ಸ್ವೈರವರ್ತನಕ್ಕೆ ದೋಷಕೊಡುವದು ಉಚಿತವಾದದ್ದು. ತಮ್ಮ ಅಸ್ತಿತ್ವವನ್ನು ಮನಬಂದಂತೆ ದುರುಪಯೋಗ ಮಾಡುವದರಲ್ಲಿ ಮಗ್ನರಾಗದೆ, ತಮ್ಮ ಜೀವಿತಕ್ಕೆ ಯಾವದೋ ಒಂದು ಉಚ್ಚಹೇತುವು ಇರುವದೆಂದು ನಿಷ್ಠಾಪೂರ್ವಕವಾದ ಅಭಿಮಾನವನ್ನು ತಾಳಬೇಕು. ಮನಸ್ಸನ್ನು ಯಾವಾಗಲೂ ಅಧೀನದಲ್ಲಿಟ್ಟುಕೊಳ್ಳಬೇಕು. ಸುಮ್ಮಸುಮ್ಮನೆ ಕ್ರೋಧ, ಭ್ರಮ ಇವುಗಳ ಕೈವಶವಾಗದೆ ಕ್ರೋಧವನ್ನು ನಿಗ್ರಹಿಸುವದರ ಕಡೆಗೆ ಲಕ್ಷ್ಯಕೊಡಬೇಕು. ಬೇರೆಯವರ ಕೃತಿಗಳಿಗಾಗಲಿ, ಅಭಿಪ್ರಾಯಗಳಿಗಾಗಲಿ ಕಠೋರನಾಗದೆ ಸಹನಶೀಲತೆಯಿಂದಿರಬೇಕು. ಅಪಶಬ್ದ–ಭದ್ರಿ(?)ಭಾಷಣಗಳನ್ನಾಡುವವನೊಡನೆ ವ್ಯರ್ಥವಾಗಿ ವಿತಂಡವಾದವನ್ನು ಮಾಡುತ್ತ ಕೂಡ್ರಬಾರದು.

ಮನಸ್ಸಿನ ಶಾಂತಿ, ಎರಡನೆಯವರ ಗೊಂದಲಕ್ಕೆ ಹೋಗದಿರೋಣ, ಪರರಿಗೆ ಪೀಡೆಯನ್ನುಂಟು ಮಾಡದಿರೋಣ ಇವು ನಿಜವಾದ ಮನುಷ್ಯತ್ವದ ಲಕ್ಷಣಗಳು. ಎರಡನೆಯವರಿಗೆ ಉಚಿತವಾದ ಮಾನವನ್ನು ಕೊಡಬೇಕು; ಮತ್ತು ತನ್ನ ಸಲುವಾಗಿ ಯೋಗ್ಯ

ನಾವ ಅಭಿಮಾನವನ್ನು ವಹಿಸಬೇಕು. ತಮ್ಮ ದಾರಿಯನ್ನು ನಿಶ್ಚಿತಮಾಡಿಕೊಂಡು ಸರಳವಾಗಿಯೂ ಹೆದರದೆಯೂ ನಡೆಯಬೇಕು; ಮತ್ತು ಅವ್ಯಾಪಾರೇಷು ವ್ಯಾಪಾರವನ್ನು ಮಾಡುವ ಗೊಡವೆಗೆ ಹೋಗಬಾರದು. ಸಜ್ಜನರಲ್ಲಿ ಭಿನ್ನ ಭಿನ್ನ ಗುಣಗಳು ಏಕತ್ರ ವಾಸಮಾಡುವವು ಕಂಡುಬರುತ್ತದೆ. "ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ" ಕಠೋರ ಸ್ವಭಾವದಂತೆಯೇ ಮನಸ್ಸಿನ ಅತ್ಯಂತ ಕೋಮಲತೆಯಾದರೂ ಸಜ್ಜನರಲ್ಲಿರುತ್ತದೆ. ಸಜ್ಜನರು ತಮ್ಮ ತತ್ತ್ವದ ಘೋಷಣವನ್ನು ಬಿಡದೆ ಇತರರೊಡನೆ ಅವರ ಯೋಗ್ಯತೆಗನುಸಾರವಾದ ಸೌಜನ್ಯದಿಂದಲೂ ಯುಕ್ತಿಯಿಂದಲೂ ವರ್ತಿಸುತ್ತಾರೆ. ಸತ್ಯದಿಂದ ತಿಲಪ್ರಾಯವಾದರೂ ಚ್ಯುತನಾಗುವ ಪ್ರಸಂಗವು ಪ್ರಾಪ್ತವಾದರೆ, ಸತ್ಯವನ್ನು ಬಿಡದೆ ಮೃತ್ಯುವನ್ನು ಅಂಗೀಕರಿಸುವಷ್ಟು ಮನಸ್ಸಿನ ಕಠೋರತೆಯೂ, ಪ್ರಸಂಗದಲ್ಲಿ ತಪ್ಪಿಸಿದಂಥ ಘಾತುಕನಾದ ಹಾಗು ದುರ್ಬಲನಾದ ಶತ್ರುವಿನ ಮೇಲೆ ದಯ ತೋರಿಸುವಷ್ಟು ಮನಸ್ಸಿನ ಕೋಮಲತೆಯೂ ಲೋಕೋತ್ತರ ವ್ಯಕ್ತಿಗಳಲ್ಲಿ ಕಂಡುಬರುತ್ತದೆ.

ಸ್ವಂತದ ಸದಸದ್ವಿಚಾರಬುದ್ಧಿಗೆ ಯೋಗ್ಯವೆಂದು ಕಂಡ ಮೇರೆಗೆ ವರ್ತಿಸಬೇಕು; ಹಾಗು ಈ ಪ್ರಕಾರ ನಡೆಯುವವರ ಧರ್ಮವೂ ನಡೆವಳಿಕೆಯೂ ನಮಗಿಂತ ಭಿನ್ನವಾಗಿದ್ದರೂ ಅವರಿಗೆ ಮಾನ ಕೊಡಬೇಕು. ಇನ್ನೊಬ್ಬ ಮನುಷ್ಯನು ನಮಗಿಂತ ಭಿನ್ನ ಧರ್ಮದವನೂ, ಭಿನ್ನಮತದವನೂ ಇರುವನೆಂದು ತಿಳಿದು ಅವನ ವಿಷಯವಾಗಿ ಸಹಾನುಭೂತಿಯನ್ನು ತೋರ್ಪಡಿಸದಿರುವ ಪ್ರವೃತ್ತಿಯು ಮನುಷ್ಯತ್ವಕ್ಕೆ ಶೋಭಿಸತಕ್ಕಂಥದ್ದಲ್ಲ. ಯಾವನೊಬ್ಬ ಮನುಷ್ಯನು ಅಜ್ಞೇಯವಾದಿಯಾಗಲಿ, ನಿರೀಶ್ವರವಾದಿಯಾಗಲಿ, ಬೌದ್ಧನಾಗಲಿ, ಕ್ರಿಸ್ತನಾಗಲಿ, ಮುಸಲ್ಮಾನನಾಗಲಿ ಇರುವನೆಂದು ಆತನ ವಿಷಯಕ್ಕೆ ನಾವು ಖೇದವನ್ನೇಕೆ ಎಣಿಸಬೇಕು? ಬಲಿಷ್ಠರ ವಿಷಯವಾಗಿಯೂ, ಆತ್ಮವಿಶ್ವಾಸದಿಂದ ನಡೆಯುವವರ ವಿಷಯವಾಗಿಯೂ, ಸರಳ ಮಾರ್ಗದಿಂದ ನಡೆಯುವ ಧೀರೋದಾರ ಪುರುಷರ ವಿಷಯವಾಗಿಯೂ ಅಥವಾ ಹಿಂದೆ ಹೇಳಿದ ಪ್ರಕಾರ ಸದಸದ್ವಿವೇಕ ಬುದ್ಧಿಯಿಂದ ನಡೆಯುವವರ ವಿಷಯವಾಗಿಯೂ ಮೇಲೆ ಹೇಳಿದಂತೆ ನಡೆಯುವದೆಂದರೆ ಕೇವಲ ಜಂಭವೇ ಎಂಬದರಲ್ಲಿ ಸಂದೇಹವಿಲ್ಲ. ಎರಡನೆಯವರು ತಾವಾಗಿ ಕೇವಲ ನಮ್ಮಂತೆಯೇ ಭಾವಿಸಬೇಕೆಂದೂ ನಮ್ಮೊಡನೆ ಯಾರೂ ವಿರೋಧವನ್ನು ಮಾಡಬಾರದೆಂದೂ ಬಯಸುವದೆಂದರೆ, ದುರಾಗ್ರಹವೇ ಸರಿ. ನಾವು ನುಡಿಯುವ ಮಾತಿನ ಸತ್ಯತೆಯು ಎರಡನೆಯವರ ನಿದರ್ಶನಕ್ಕೆ ಬಂದು, ಅದು ಯೋಗ್ಯವಾಗಿರುವದೆಂದು ಅವರ ಪ್ರತ್ಯಯಕ್ಕೆ ಬಂದರೆ, ಅವರು ನಮ್ಮಂತೆಯೇ ಅಭಿಪ್ರಾಯಗಳುಳ್ಳವರಾಗಿ ಮನೋಭಾವದಿಂದ ನಮ್ಮ ಕೆಲಸಕ್ಕೆ ನೆರವಾಗುವರು. ನಮ್ಮ ಕೆಲಸವೇ ಅವರ ಕೆಲಸವೆಂದು ಅವರು ಒಂದು ವೇಳೆ ಮಾತಿನಿಂದ ವ್ಯಕ್ತಪಡಿಸದಿದ್ದರೂ, ನಾವು ಸತ್ಯವಂತರೆಂದೂ, ಸದಸದ್ವಿವೇಕ ಬುದ್ಧಿಯನ್ನನುಸರಿಸಿ ವರ್ತಿಸುವವರೆಂದೂ ಅವರು ತಿಳಿದರೆ ಸಾಕು. ನಮ್ಮ ಕೆಲಸವನ್ನು ಅವರು ಮಾಡಲೇಬೇಕೆಂಬ ನಿಯಮವಿಲ್ಲ. ಅವರ ಕರ್ತವ್ಯವು ಅವ

ರಿಗೆ ಇದ್ದೇ ಇರುತ್ತದೆ. ಆತ್ಮಪ್ರತ್ಯಯಿಯೂ, ಸ್ವಂತ ಅಭಿಮಾನಪೂರ್ಣನೂ, ವಿಚಾರವಂತನೂ, ಜ್ಞಾನಿಯೂ ಆದ ಮಹಾತ್ಮನು ಅನ್ಯಧರ್ಮದವನಾದರೇನಾಯಿತು? ಆತನು ಸದಸದ್ವಿವೇಕ ಬುದ್ಧಿಯಿಂದ ನಡೆಯುತ್ತಿದ್ದರೆ ಸಾಕು; ಆತನ ವಿಷಯಕ್ಕೆ ಯಃಕಿಂಚಿತ್ತಾದರೂ ತಿರಸ್ಕಾರವನ್ನು ವಹಿಸದೆ, ಆತನಿಗೆ ವಂದಿಸಲಿಕ್ಕೆಬೇಕು. ಎರಡನೆಯವರ ಮತವನ್ನು ಆದರಿಸುವದೆಂದರೆ ಇದೆ.

ಪ್ರಮಾಣಬದ್ಧವಾದ ಈ ಯಾವತ್ತು ಜಗತ್ತಿನಲ್ಲಿ ನಾವು ಕರ್ತೃತ್ವಶಾಲಿಗಳೂ ಆತ್ಮಜ್ಞಾನಿಗಳೂ ಆಗಬೇಕಾಗಿದ್ದರೆ ಮೊದಲು 'ಮನೋಜಯ'ವನ್ನು ಸಂಪಾದಿಸಲಿಕ್ಕೆ ಬೇಕು; ಮತ್ತು ಯಾರು 'ಮನೋಜಯ'ವನ್ನು ಸಂಪಾದಿಸುವರೋ ಅಂತಹರಿಗೆ ಸನ್ಮಾನ ಮಾಡಲಿಕ್ಕೆಬೇಕು. ನಾವು ದೃಢನಿಶ್ಚಯಿಗಳೂ ಪುರುಷಾರ್ಥಯುಕ್ತರೂ ಆಗಬೇಕಾದರೆ, ಉದಾರತನವೂ ವಿಶ್ವಬಂಧುವೃತ್ತಿಯೂ ನಮ್ಮಲ್ಲಿ ಜಾಗ್ರತವಾಗಿರಲಿಕ್ಕೆ ಬೇಕು. ಸಂಸಾರದೊಳಗಿನ ದುಃಖಸಮುಚ್ಚಯಗಳ ಬಾಧೆಯಾಗದೆ, ಸ್ವಾರ್ಥಪರಾಯಣತೆಯನ್ನು ಪರಿತ್ಯಜಿಸಲಿಕ್ಕೆಬೇಕು.

ಮನುಷ್ಯನು ಮನೋದೌರ್ಬಲ್ಯದಿಂದ ಹತವೀರ್ಯನಾಗುತ್ತಾನೆ; ಮತ್ತು ಆತನ ಹೃದಯವೂ ಮನಸ್ಸೂ ದುರ್ಬಲವಾಗುವದರಿಂದ ಅನನ್ಯಗತಿಕನಾಗಿ ದುಃಖವನ್ನು ಅನುಭವಿಸಹತ್ತುತ್ತಾನೆ. ಆದುದರಿಂದ ಶ್ರೇಯಃಸಾಧನದ ಮಾರ್ಗವನ್ನು ಶೋಧಿಸುವದು ಉಚಿತವಲ್ಲವೆ? ಶ್ರೇಯಃಸಾಧನದ ಆನಂದವು ಎಷ್ಟು ಶ್ರೇಷ್ಠವಾದದೆ, ನೋಡಿರಿ! ಆದುದರಿಂದ ಪ್ರಿಯ ಬಂಧುಭಗಿನಿಯರೇ, ಮನೋಜಯವನ್ನು ಸಂಪಾದಿಸಿರಿ, ಮನಸ್ಸಿನ ದುರ್ಬಲತೆಯನ್ನು ಹೊಡೆದುಹಾಕಿರಿ; ಮತ್ತು ಆಧಿವ್ಯಾಧಿ ಮೊದಲಾದವುಗಳ ಮೂಲ ಬೀಜವಾದ ಸ್ವಾರ್ಥವೆಂಬ ಪಿಶಾಚಿಗೆ ಸ್ಥಳವನ್ನು ಕೊಡಬೇಡಿರಿ. ಮನಸ್ಸಿಗೆ ಬೇಕಾದ್ದನ್ನು ಭೋಗಿಸುವ ಇಚ್ಛೆಯನ್ನೂ ಸ್ವಾರ್ಥಸಾಧಿಸುವ ಕುತೂಹಲವನ್ನೂ ಬಿಟ್ಟುಬಿಡಿರಿ. ಅವುಗಳಿಗೆ ನಿಮ್ಮಲ್ಲಿ ಅವಕಾಶಕೊಡದೆ ಕಠೋರವಾದ ದೃಷ್ಟಿಯಿಂದಲೂ, ಸ್ಥಿರವಾದ ಮನೋಧೈರ್ಯದಿಂದಲೂ ಅವುಗಳನ್ನು ಹೊಡೆದೋಡಿಸಿರಿ. ಮನುಷ್ಯನು ತನ್ನ ಮನಸ್ಸನ್ನು 'ಕರತಲಾಮಲಕ'ವಾಗಿ ತಿಳಿದುಕೊಳ್ಳಬೇಕು; ಮತ್ತು ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಳ್ಳಬೇಕಲ್ಲದೆ, ಅವುಗಳಿಗೆ ಅಧೀನನಾಗಬಾರದು. ಮನುಷ್ಯನು ಸುಖಲಾಲಸೆಯ ದಾಸನಾಗಲಿ, ಪ್ರತಿಯೊಂದು ಇಚ್ಛಿತ ವಿಷಯದ ಗುಲಾಮನಾಗಲಿ ಆಗಬಾರದು. ಸ್ಥಿತಪ್ರಜ್ಞನೂ ಸಮಾಧಾನಿಯೂ ಆಗಿ ಎಂತಹ ಪ್ರಸಂಗ ಬಂದರೂ ಮನಸ್ಸಿನ ಸಮತೆಯನ್ನು ಕಾಯ್ದುಕೊಳ್ಳಬೇಕು. ತನ್ನ ಇಚ್ಛಾಶಕ್ತಿಯನ್ನು 'ಆತ್ಮಜಯ'ದ ಕಡೆಗೆ ತಿರುಗಿಸಬೇಕು. ಆ ಶಕ್ತಿಯು ಒಮ್ಮೆ ಕೈವಶವಾಯಿತೆಂದರೆ ಮುಂದೆ ಅದು ಅನುಕೂಲ ಪ್ರವೃತ್ತಿಯನ್ನೇ ಧಾರಣ ಮಾಡುವದು. ಸೃಷ್ಟಿನಿಯಮಗಳ ವಿರುದ್ಧವಾಗಿ ಆಚರಣೆ ಮಾಡುವ ಪ್ರವೃತ್ತಿಯು ಮನುಷ್ಯಸ್ವಭಾವದೊಳಗಿನ ಒಂದು ಮುಖ್ಯ ದೋಷವು; ಹಾಗು ಈ ಪಾಪಪ್ರವೃತ್ತಿಯು ಯಾವತ್ತು ದುಃಖಗಳ ಮೂಲವಾಗಿದೆ. ಮನುಷ್ಯನು ಅಜ್ಞಾನದ ಮೂಲಕ ಸೃಷ್ಟಿ

ನಿಯಮಗಳನ್ನು ಲಕ್ಕಿಸದೆ ಎರಡನೆಯವರ ಮೇಲೆ ತನ್ನ ಸ್ವಾಮಿತ್ವವನ್ನು ಕೂಡ್ರಿಸ ಬಹುದೆಂದು ಭಾವಿಸುತ್ತಾನೆ. ಆದರೆ ಅದು ಎಂದೂ ಸಾಧ್ಯವಾಗುವದಿಲ್ಲ. ಇದರಿಂದ ಸೃಷ್ಟಿನಿಯಮಗಳೊಡನೆ ಹೋರಾಡುವವನ ಸಾಮರ್ಥ್ಯವು ಮಾತ್ರ ಹ್ರಾಸಹೊಂದುತ್ತದೆ. ಮನುಷ್ಯನು ತನ್ನಲ್ಲಿರುವ ಈ ದೋಷವನ್ನು ತೆಗೆದು ಹಾಕುವದು ಅಶಕ್ಯವಲ್ಲ. ಅಜ್ಞಾನ ವನ್ನು ನಾಶಗೊಳಿಸುವದೂ, ಅಹಂಮನ್ಯತೆಯನ್ನೂ ಪಾಪವಾಸನೆಯನ್ನೂ ಬಿಟ್ಟು ಬಿಡುವದೂ, ಸ್ವೈರಪ್ರವೃತಿಯನ್ನು ಪ್ರತಿಬಂಧದಲ್ಲಿಡುವದೂ, ಆತ್ಮಜಯವನ್ನು ಸಂಪಾ ದಿಸುವದೂ ಪ್ರತಿಯೊಬ್ಬನಿಗೆ ಸಾಧ್ಯವಿದೆ. ಅಂತಹ ಇಚ್ಛೆಯು ಮಾತ್ರ ಅವನಲ್ಲಿ ಬೇಕು. ಮೇಲೆ ಹೇಳಿದ ಈ ಎಲ್ಲ ಕೃತಿಗಳಲ್ಲಿಯೇ ಮನುಷ್ಯನ ಪುರುಷಾರ್ಥವೂ, ದೈವೀ ಸಾಮ ರ್ಥ್ಯವೂ ಕಂಡುಬರುತ್ತವೆ. ಮನುಷ್ಯನು ಯಾವ ನಿಯಮದ ಮೂಲಕ ತನ್ನ ಅಸ್ತಿತ್ವವು ಜಗತ್ತಿನಲ್ಲಿ ಉಂಟಾಗಿದೆಯೆಂಬುದನ್ನು ತಿಳಿದುಕೊಂಡು, ಆಜ್ಞಾಧಾರಕನಾದ ಬಾಲಕನು ತಂದೆಯ ಅಪ್ಪಣೆಯನ್ನು ಪರಿಪಾಲಿಸುವಂತೆ ಆ ನಿಯಮವನ್ನು ಅನುಸರಿಸಬೇಕು. ಈ ಪ್ರಕಾರ ನಡೆಯುವದರಿಂದ ಅವನು ಇಂದ್ರಿಯಗಳಿಗೂ ಇಚ್ಛಾಶಕ್ತಿಗೂ ಅಧಿಪತಿಯಾಗಿ, ಅವುಗಳ ಉಪಯೋಗವನ್ನು ಆತ್ಮಕಾರ್ಯದ ಕಡೆಗೆ ಮಾಡಿಕೊಳ್ಳದೆ, ಒಳ್ಳೇ ಜಾಣ ತನದಿಂದ ಅವುಗಳನ್ನು ಲೋಕಕಲ್ಯಾಣಕ್ಕಾಗಿ ವಿನಿಯೋಗಿಸುವ ಶಕ್ತಿಯುಳ್ಳವನಾಗು ವನು. ಜಗತ್ತಿನಲ್ಲಿ ಪೂರ್ಣವಾಗಿ ನಾಶಮಾಡಲಿಕ್ಕೆ ಬಾರದಂಥ ದುಷ್ಟರೂಢಿಯಾಗಲಿ, ಪಾಪಬುದ್ಧಿಯಾಗಲಿ, ದುಃಖಸ್ಥಿತಿಯಾಗಲಿ ಇಲ್ಲವೇ ಇಲ್ಲ. ಆದುದರಿಂದ ಪ್ರತಿಯೊಬ್ಬನು ತನ್ನ ಸಾಮರ್ಥ್ಯವನ್ನರಿತು ಮನೋಜಯವನ್ನು ಸಂಪಾದಿಸಬೇಕು. ಈ ಜಗತ್ತು ಮನುಷ್ಯನಿಗೋಸ್ಕರವೇ ನಿರ್ಮಿತವಾಗಿದ್ದು, ಅತನು ಒಬ್ಬಾನೊಬ್ಬ ದೀನದುರ್ಬಲನಂತೆ ಯಾಗಲಿ, ಹೊಸಬನಂತೆಯಾಗಲಿ ವರ್ತಿಸದೆ ಅದರ ಯೋಗ್ಯ ಉಪಯೋಗವನ್ನು ಮಾಡಿ ಕೊಳ್ಳಬೇಕೆಂಬುದೇ ಸೃಷ್ಟಿಕರ್ತನ ಉದ್ದೇಶವಾಗಿದೆ.

ಸ್ಥಿರವಾದ ಆತ್ಮವಿಶ್ವಾಸವೂ ವಿನಯವೂ ಒಂದೇ ಕಡೆಯಲ್ಲಿರುವದು ಅಸಂಭವ ನೀಯವಲ್ಲ. ಎರಡನೆಯವರ ಮೇಲೆ ಅಧಿಕಾರ ನಡಿಸುವಾಗ ಮನುಷ್ಯನು ನಿರ್ದಾಕ್ಷಿ ಣ್ಯನೂ ಅಹಂಮನ್ಯನೂ ಆಗುತ್ತಾನೆ. ಆದರೆ ತನ್ನ ಮೇಲೆ ಮಾತ್ರ ಅವಶ್ಯವಾದ ಸ್ವಾಮಿತ್ವವನ್ನಾಗಲಿ ಅಧಿಕಾರವನ್ನಾಗಲಿ ಕೂಡ್ರಿಸಲು ಅವನು ಶಕ್ತನಿರುವದಿಲ್ಲ. ತನ್ನ ವಿಷಯವಾಗಿ ಸಂಪೂರ್ಣ ಸ್ವಾಮಿತ್ವ ಹಾಗು ಎರಡನೆಯವರ ವಿಷಯವಾಗಿ ಯೋಗ್ಯ ವಾದ ಆದರ ಬುದ್ಧಿ ಇವುಗಳ ಸಮ್ಮಿಶ್ರಣದಿಂದ ನಿಜವಾದ ಮನುಷ್ಯತ್ವವು ಪ್ರಾಪ್ತ ವಾಗುತ್ತದೆ.

ಆದುದರಿಂದ ಮನುಷ್ಯನು ಪ್ರಾಮಾಣಿಕನೂ, ನಿಷ್ಕಪಟಿಯೂ, ಸದ್ಭಾವ ಯುಕ್ತನೂ ಆಗಬೇಕು. ಕಪಟವು ಮೂರ್ಖತನದ ಶಿಖರವು; ಹಾಗು ಡಾಂಭಿಕತೆಯು ಜಗತ್ತಿನೊಳಗಿಂದ ಅತ್ಯಂತ ಹೇಡಿತನದ ಕುರುಹು. ಎರಡನೆಯವರನ್ನು ಮೋಸ ಗೊಳಿಸುವಾಗ ಮನುಷ್ಯನು ತಾನೇ ಮೋಸಹೋಗುತ್ತಾನೆ. ಮನುಷ್ಯನ ಕಪಟ,

ಕ್ಷುದ್ರತೆ, ಮೋಸಗಾರಿಕೆ ಇವುಗಳಿಂದ ತೀರ ನಿರ್ಲಿಪ್ತನಾಗಿರಬೇಕು. ಇದು ನಿಷ್ಕಪಟ ವರ್ತನದ ಹೊರತು ಸಾಧ್ಯವಾಗಲಾರದು. ಸದ್ಭಾವನೆಯಿಲ್ಲದ ಮನುಷ್ಯನ ಅಸ್ತಿತ್ವವು ಕೇವಲ ವೇಷವೆಂದು ಹೇಳಬಹುದು. ಸದ್ಭಾವನೆಯಿಲ್ಲದ ಮನುಷ್ಯನು ಯಾವ ಕೆಲಸವನ್ನು ಕೈಯಲ್ಲಿ ತೆಗೆದುಕೊಂಡರೂ ಅದು ಪರಿಣಾಮಕಾರಿಯಾಗಲಾರದು. ಅದರಂತೆ ನಿಷ್ಕಪಟತನವಿಲ್ಲದಲ್ಲಿ ಶಬ್ದದ ಆಡಂಬರದ ಹೊರತು ಅನ್ಯ ಪರಿಣಾಮವು ಒಂದೂ ಆಗದು.

ಕೆಲವು ಜನರು ಮಾತ್ರ ಈ ಕಪಟವನ್ನು ಅಥವಾ ಡಾಂಭಿಕತೆಯನ್ನು ತಿಳಿದೂ ತಿಳಿದೂ ಆಚರಿಸದೆ, ಅಜ್ಞಾನದ ಮೂಲಕ ಈ ಅಡ್ಡಮಾರ್ಗದಲ್ಲಿ ಬೀಳುತ್ತಾರೆ ಆದರಿಂದ ಅವರ ಸಚ್ಛೀಲವು ಮಣ್ಣುಪಾಲಾಗಿ ಅವರು ಕೊನೆಗೆ ದುಃಖವನ್ನನುಭವಿಸಬೇಕಾಗುತ್ತದೆ. ಇಂತಹ ಜನರು ಕೀರ್ತನ ಪುರಾಣಗಳಿಗೆ ಹೋಗುತ್ತಿರಬಹುದು. ದೇವರು ತಮಗೆ ಸದ್ಬುದ್ಧಿಯನ್ನು ಕೊಡಲೆಂದೂ, ನಮ್ಮಿಂದ ಸದ್ವರ್ತನದ ಕಾರ್ಯಗಳು ಸಂಘಟಿಸುವಂತೆ ಮಾಡಲೆಂದೂ ಅವರು ಪ್ರಾರ್ಥಿಸುತ್ತಿರಬಹುದು. ಆದರೆ ಸದ್ಭಾವದಿಂದ ನಡೆಯುವದು ಮಾತ್ರ ಇವರಿಂದಾಗುವದಿಲ್ಲ. ಪುರಾಣದೊಳಗಿನ ಬದನೇಕಾಯಿ ಪುರಾಣದಲ್ಲಿಯೇ ಎಂಬಂತೆ ಇಂತಹರ ಸ್ಥಿತಿಯಿರುತ್ತದೆ. ಮನೆಗೆ ಬಂದೊಡನೆಯೇ ತನ್ನ ಶತ್ರುಗಳ ಮೇಲೆ ಬೈಗಳದ ಮಳೆ ಸುರಿಸುವದನ್ನು ಪ್ರಾರಂಭಿಸುವರು. ಇದಕ್ಕೂ ನೀಚತನವೆಂದರೆ, ತಮ್ಮ ಮಿತ್ರನೊಬ್ಬನು ಪ್ರತ್ಯಕ್ಷ ಭೆಟ್ಟಿಯಾಗಲು ಅವನ ಎದುರಿಗೆ ಆದರಭಾವವನ್ನು ತೋರಿಸಿ, ನಂತರ ಅವನ ಕುಚೇಷ್ಟೆಯನ್ನು ಮಾಡುವದು! ಅಂತಹ ಜನರಿಗೆ ತಮ್ಮ ಆಚರಣೆಯ ಪೂರ್ಣ ಕಲ್ಪನೆಯೂ ಕೂಡ ಇರದಿರುವದು ಆಶ್ಚರ್ಯಕರವಾಗಿದೆ. ಇಂತಹ ಜನರಿಗೂ ಈ ಮಿತ್ರರಿಗೂ ಒಮ್ಮೆ ದ್ವಿಧಾಭಾವವು ಉತ್ಪನ್ನವಾಯಿತೆಂದರೆ— ಅದು ಒಮ್ಮೊಮ್ಮೆ ಆಗತಕ್ಕದ್ದೇ— ಜಗತ್ತಿನ ಕಪಟಪಟುತ್ವದ ವಿಷಯಕ್ಕೂ, ವಾಚಾಳತೆಯ ವಿಷಯಕ್ಕೂ ಈ ಜನರು ವ್ಯಾಖ್ಯಾನಗಳನ್ನು ಕೊಡಹತ್ತುವರು; ಮತ್ತು 'ಏನು ಮಾಡತಕ್ಕದ್ದು? ಜಗತ್ತಿನಲ್ಲಿ ನಿಜವಾದ ಮಿತ್ರರು ಸಿಗುವದೇ ದುರ್ಲಭ!' ಎಂಬ ಉದ್ಗಾರಗಳನ್ನು ತೆಗೆಯಹತ್ತುವರು.

ನಿಜವಾಗಿಯೂ ಇಂತಹ ಜನರಿಗೆ ಸ್ಥಿರವಾದ ಮಿತ್ರನು ದೊರೆಯುವದು ಕಠಿಣವದೆ. ಯಾಕಂದರೆ, ಡಾಂಭಿಕತನವು ಕಣ್ಣಿಗೆ ಕಾಣಿಸದಿದ್ದರೂ ಅದರ ತಿಳುವಳಿಕೆಯು ಮನಸ್ಸಿಗಾಗುತ್ತದೆ. ಯಾರು ಎರಡನೆಯವರ ಮೇಲೆ ವಿಶ್ವಾಸವನ್ನಿಡುವದಿಲ್ಲವೋ, ಯಾರಿಗೆ ಎರಡನೆಯವರ ಸದ್ಭಾವ ಅಥವಾ ನಿಷ್ಕಪಟ ವರ್ತನವು ತಿಳಿಯುವದಿಲ್ಲವೋ ಅಂತಹರ ಮೇಲೆ ಎರಡನೆಯವರು ವಿಶ್ವಾಸ ಇಲ್ಲವೆ ಸದ್ಭಾವವನ್ನಿಡುವದು ಅಶಕ್ಯವಾಗಿದೆ. ಎರಡನೆಯವರೊಡನೆ ಸದ್ಭಾವದಿಂದ ನಡೆದರೆ ಅವರಾದರೂ ಸಮ್ಮೊಡನೆ ಅದರಂತೆಯೇ ವರ್ತಿಸುವರು. ಶತ್ರುವಿನ ಸ್ವಭಾವವನ್ನು ಎಲ್ಲ ಬಗೆಯಿಂದಲೂ ನಿರೀಕ್ಷಿಸಬೇಕು; ಮತ್ತು ತನ್ನ ಮಿತ್ರನ ಪಕ್ಷವನ್ನು ಕಾಯಬೇಕು. ಮನುಷ್ಯಸ್ವಭಾವದಲ್ಲಿ ಉತ್ತಮವಾದದ್ದು

ಯಾವದೂ ಇಲ್ಲವೆಂಬ ಭಾವನೆಯು ಉತ್ಪನ್ನವಾದ ಕೂಡಲೇ ನಮ್ಮ ತಿಳುವಳಿಕೆಯಲ್ಲಿ ಎಲ್ಲಿಯೋ ತಪ್ಪಾಗಿರುವದೆಂದು ನಿಃಸಂದೇಹವಾಗಿ ತಿಳಿದುಕೊಳ್ಳಬೇಕು; ಮತ್ತು ಆ ತಪ್ಪನ್ನು ಶೋಧಿಸಿ ತಿದ್ದಿಕೊಳ್ಳಲು ಪ್ರಯತ್ನ ಮಾಡಬೇಕು.

ಚೀನೀ ಜನರ ಧರ್ಮಗುರುವಾದ ಕಾನ್ಫ್ಯೂಶಿಯಸನು ನಿಷ್ಕಪಟತೆಯ ವಿಷಯವಾಗಿ ಹೀಗೆ ಬರೆದಿಟ್ಟಿದ್ದಾನೆ : "ನಿಷ್ಕಪಟತೆ ಅಥವಾ ಸದ್ಭಾವವು ಐದು ಮುಖ್ಯವಾದ ಸದ್ಗುಣಗಳಲ್ಲಿ ಒಬ್ಬಾಗಿದೆ." ಅವನು ಮತ್ತೊಂದೆಡೆಯಲ್ಲಿ ಅನ್ನುವದೇನಂದರೆ— "ಸದ್ಭಾವದಿಂದ ನಿಮ್ಮ ಜೀವಿತವು ಸಾರ್ಥಕವಾಗುವದು. ಸದ್ಭಾವವಿಲ್ಲದಿದ್ದರೆ ನಿಮ್ಮ ಯಾವತ್ತು ಕೃತ್ಯಗಳು ವ್ಯರ್ಥವಾಗುವವು. ಸದ್ಭಾವವಿಲ್ಲದೆ ಹೊರಗಿನಿಂದ ಸದ್ಗುಣಗಳ ಪ್ರತಿಮೆಗಳಂತೆ ಕಾಣುವ ಜನರು ದಾಂಭಿಕರೆಂದು ತಿಳಿಯಿರಿ. ಅದರಂತೆ ನಿಮ್ಮಲ್ಲಿರುವ ಜ್ಞಾನವು ಸದ್ಭಾವಯುಕ್ತವಾಗಿಲ್ಲದಿದ್ದರೆ ಅದು ಮನೋವಿಕಾರ ವಾಯುವಿನ ತರಂಗದೊಡನೆ ನಂದಿಹೋಗುವ ನಿರ್ಜೀವ ಜ್ಯೋತಿಯೆಂದು ಭಾವಿಸಿರಿ. ಮನಸ್ಸು ಶುದ್ಧವಾಗಬೇಕಾದರೆ ಆತ್ಮವಂಚನೆಯನ್ನು ಬಿಟ್ಟುಬಿಡಬೇಕು. ಮಲಿನವಾದ ವಸ್ತುಗಳನ್ನು ತ್ಯಾಗ ಮಾಡಿ ರಮಣೀಯವಾದವುಗಳನ್ನು ಪರಿಗ್ರಹಿಸುವಂತೆ, ದುರ್ಗುಣಗಳನ್ನು ಪರಿತ್ಯಜಿಸಿ ಸದ್ಗುಣಗಳನ್ನು ಸ್ವೀಕರಿಸಬೇಕು. ಸದ್ಗುಣಗಳ ಹೊರತು ಸ್ವಾಭಿಮಾನವು ಉತ್ಪನ್ನವಾಗಲಾರದು. ಆದುದರಿಂದ ಸದ್ಗುಣಿಯಾದವನು ಕುವಿಚಾರಗಳಿಗೆ ಮನಸ್ಸಿನಲ್ಲಿ ಎಂದೂ ಆಸ್ಪದ ಕೊಡಬಾರದು.

"ನೀಚ ಮನುಷ್ಯನು ತನ್ನ ವೇಳೆಯನ್ನು ಗುಪ್ತವಾಗಿ ದುಷ್ಕೃತ್ಯಗಳನ್ನು ಮಾಡುವದರಲ್ಲಿ ಕಳೆಯುತ್ತಾನೆ. ಆತನ ದುಷ್ಟತನದ ಸೀಮೆಯು ಇಂತಿಷ್ಟೇ ಎಂದು ಹೇಳಲಾಗುವದಿಲ್ಲ. ಶುದ್ಧಾಚರಣಿಯಾದ ಮನುಷ್ಯನ ಸಮ್ಮುಖದಲ್ಲಿ ಆತನು ಕಪಟತನದ ವರ್ತನದಿಂದ ನಡೆದು, ತನ್ನ ಚಲೋ ಸ್ವಭಾವವನ್ನೇ ಆತನ ನಿದರ್ಶನಕ್ಕೆ ತಂದುಕೊಡುತ್ತಾನೆ. ಆದರೆ ಅವನ ಈ ಹಂಚಿಕೆಯು ಆತನ ಸ್ವಭಾವವನ್ನರಿತವನ ಮುಂದೆ ಎಷ್ಟರ ಮಟ್ಟಿಗೆ ನಡೆದೀತು? ಒಮ್ಮಿಲ್ಲೊಮ್ಮೆ ಅದು ಹೊರಬೀಳತಕ್ಕದ್ದೇ."

"ನೂರಾರು ಜನರು ಯಾವನ ಮೇಲೆ ದೃಷ್ಟಿಯನ್ನಿಟ್ಟಿರುವರೋ, ಅಥವಾ ನೂರಾರು ಜನರು ಯಾವನ ಕಡೆಗೆ ಬೆರಳು ಮಾಡಿ ತೋರಿಸುವರೋ ಅಂತಹ ಶ್ರೇಷ್ಠ ಮನುಷ್ಯನು ಯಾವಾಗಲೂ ಜಾಗರೂಕನಾಗಿರಬೇಕು. ಅವನಿಂದ ಅಲ್ಪ ಸ್ವಲ್ಪಾದರೂ ಕೆಟ್ಟ ಕೆಲಸಗಳು ಸಂಭವಿಸಿದರೆ ಆ ಮಾತು ಜನರಲ್ಲಿ ಹರಡುತ್ತದೆ. ಆದುದರಿಂದ ಸದ್ಗುಣಿಯಾದವನು ಏಕಾಕಿಯಾಗಿದ್ದರೂ ಒಳ್ಳೇ ಜಾಗರೂಕನಾಗಿರಬೇಕು."

ಯಾವದೊಂದು ಸಂಗತಿಯು ಪರಿಸ್ಫೋಟವಾದೊಡನೆಯೇ ಲಜ್ಜೆಯಿಂದ ಕೆಳಗೆ ಮೋರೆ ಹಾಕಬೇಕಾಗುವಂತಹ ಕೃತಿಯನ್ನಾಗಲಿ; ಶಬ್ದೋಚ್ಚಾರಣವನ್ನಾಗಲಿ ನಿಷ್ಕಪಟಿಯಾದವನು ಎಂದೂ ಮಾಡಬಾರದು. ನಿಷ್ಕಪಟ ವರ್ತನವುಳ್ಳವನು ಯಾವನ ಹಂಗೂ ಇಲ್ಲದೆ ನಿಶ್ಶಂಕೆಯಿಂದ ವರ್ತಿಸಬಹುದು. ಆತನ ಆಗಮನದಿಂದ ಜನರಿಗೆ ಒಂದು ತರದ

ಧೈರ್ಯ ಬರುತ್ತದೆ. ಆತನ ಶಬ್ದಗಳು ಹಿತಕರವಾಗಿಯೂ, ಯೋಗ್ಯವಾಗಿಯೂ, ಸತ್ಯವಾಗಿಯೂ ಇರುವದರಿಂದ ಪರಿಣಾಮಕರವಾಗಿರುತ್ತವೆ. ಆವನು ಯಾವ ಕೆಲಸವನ್ನು ಕೈಕೊಂಡರೂ ಅದರಲ್ಲಿ ಅವನಿಗೆ ವಿಜಯವೇ ಆಗುತ್ತದೆ. ಅವನ ಭಾಷಣವು ಯಾವಾಗಲೂ ರುಚಿಕರವಾಗಿಯೇ ಇರದಿದ್ದರೂ ಆತನ ಮಾತಿನಿಂದ ಜನರ ಮೇಲೆ ಒಂದು ತರದ ಸ್ವಾಮಿತ್ವವು ಕೂಡ್ರುತ್ತದೆ. ಜನರು ಆತನನ್ನು ತಮ್ಮ ನಾಯಕನೆಂದು ಭಾವಿಸಿ ಅವನಿಗೆ ಸನ್ಮಾನ ಮಾಡುತ್ತಾರೆ.

ಧೈರ್ಯ, ಆತ್ಮನಿಷ್ಠೆ, ಸದ್ಭಾವ, ಔದಾರ್ಯ ಇವುಗಳ ಯೋಗದಿಂದ ಮನುಷ್ಯನಲ್ಲಿ ಮನುಷ್ಯತ್ವವು ಬರುತ್ತದೆ. ಈ ಗುಣಗಳ ಅಭಾವದಿಂದ ಮನುಷ್ಯನು ಪರಿಸ್ಥಿತಿಯ ಆಘಾತಗಳನ್ನು ತಿನ್ನುವ ಮಣ್ಣಿಗೆ ಗೊಂಬೆಯಂತಾಗುವನು. ಇಂತಹ ದುರ್ಬಲನೂ ಭ್ರಾಂತನೂ ಆದ ಮನುಷ್ಯನಿಗೆ ಜೀವಿತದ ನಿಜವಾದ ರುಚಿಯೂ ಆನಂದವೂ ಹೇಗೆ ದೊರೆಯಬೇಕು? ಮುಂದೆ ಬೇಲಿಚ್ಛಿಸುವ ಪ್ರತಿಯೊಬ್ಬ ಮನುಷ್ಯನು ಈ ಗುಣಗಳನ್ನು ತನ್ನಲ್ಲಿ ತಂದುಕೊಳ್ಳುವ ಪ್ರಯತ್ನ ಮಾಡಬೇಕು. ಈ ಗುಣಗಳು ಸಾಧ್ಯವಾದಂತೆ ಆತನಿಗೆ ಶ್ರೇಯಃಸಾಧನದ ಮಾರ್ಗವು ಸುಲಭವಾಗಹತ್ತುವದು.

ಈ ಜಗತ್ತಿನಲ್ಲಿ ನೂತನ ಪ್ರಕಾರದ ಸ್ತ್ರೀ ಪುರುಷರು ಹುಟ್ಟಬೇಕಾಗಿದೆ. ಪುರುಷರು ಗಂಭೀರಮನಸ್ಕರೂ, ಸದ್ಭಾವಯುಕ್ತರೂ, ಉದಾರರೂ, ಕ್ರೋಧ ಅಶುದ್ಧಾಚರಣ ದುರಾಚಾರ ಹಾಗು ದ್ವೇಷಗಳಿಲ್ಲದವರೂ ಆಗಿದ್ದು 'ಮಾನವ'ರೆಂಬ ತಮ್ಮ ಹೆಸರನ್ನು ಸಾರ್ಥಕಗೊಳಿಸುವಂಥವರಿರಬೇಕು. ಅದರಂತೆ ಸ್ತ್ರೀಯರು ನಿಜವಾಗಿಯೂ ಸ್ತ್ರೀ ಜಾತಿಗೆ ಭೂಷಣಭೂತರಾಗಬೇಕು. ಮರ್ಯಾದಶೀಲರೂ, ಸತ್ಯಪ್ರಿಯರೂ, ಪವಿತ್ರರೂ, ಅನೃತ ಸಾಹಸಾದಿ ದುರ್ಗುಣಗಳಿಲ್ಲದವರೂ, ಸಾಧುಗಳೂ ಆದಂಥ ಸ್ತ್ರೀಪುರುಷರ ಹೊಟ್ಟೆಯಲ್ಲಿ ಮನುಷ್ಯ ಜಾತಿಗೆ ಲಲಾಮಭೂತವಾದ ಅಪತ್ಯಗಳೇ ಜನಿಸುವವು. ಇಂತಹರನ್ನು ನೋಡಿದ ಕೂಡಲೇ ದುಷ್ಟರೂ, ಶಠರೂ ಯಃಪಲಾಯನ ಮಾಡುವರು. ಈ ಪ್ರಕಾರ ಸೃಷ್ಟಿಯು ಪುನರುಜ್ಜೀವನವನ್ನು ಹೊಂದಲಿ ಮತ್ತು ಮನುಷ್ಯ ಜಾತಿಯ ಶ್ರೇಷ್ಠತ್ವವು ಬೆಳೆದು ಸೃಷ್ಟಿಯ ಘನತೆಯು ಸ್ಥಿರವಾಗಲಿ; ಹಾಗು ಯಾವತ್ತು ಮನುಷ್ಯ ಜಾತಿಯಲ್ಲಿ ಪ್ರೇಮ, ಸುಖ ಶಾಂತಿಗಳು ವೃದ್ಧಿಯಾಗಿ ಅವುಗಳ ಯೋಗದಿಂದ ಸೃಷ್ಟಿಯಲ್ಲಿದ್ದ ಪಾಪ, ದುಃಖಗಳು ನಾಶ ಹೊಂದಿ ಸರ್ವತ್ರವೂ ಸದ್ಗುಣಗಳ ಅಧಿರಾಜ್ಯವಾಗಲಿ.

೦

# ೩. ಕರ್ತೃತ್ವಶಕ್ತಿ ಮತ್ತು ಸಾಮರ್ಥ್ಯ

ಈ ಯಾವತ್ತು ಜಗತ್ತನ್ನು ವ್ಯಾಪಿಸಿರುವ 'ಶಕ್ತಿ'ಯು ಎಷ್ಟೊಂದು ಆಶ್ಚರ್ಯ ಕರವಾಗಿರುವದಲ್ಲವೇ? ಅದರ ಕಾರ್ಯಕ್ಕೆ ವಿಘ್ನಗಳೇ ಇಲ್ಲ; ಮತ್ತು ಅದು ಎಂದೂ ಮುಗಿಯುವಂತಿಲ್ಲ. ಅದರ ಕಾರ್ಯವು ಅವಿನಾಶಿಯಾಗಿರುವದೆಂದು ಭಾಸವಾಗುವದು; ಮತ್ತು ಅಣುರೇಣು ಮೊದಲಾಗಿ ಬ್ರಹ್ಮಾಂಡವನ್ನೆಲ್ಲ ವ್ಯಾಪಿಸಿರುವದು. ಈ ಅತರ್ಕ್ಯ ವಾದ ಶಕ್ತಿಯ ಪ್ರಭಾವವು ಗತಿಸುತ್ತಿರುವ ಪ್ರತಿನಿಮಿಷಮಾತ್ರದ ಮೇಲೆಯೂ ನಡೆ ಯುವದು.

ಮನುಷ್ಯಪ್ರಾಣಿಯು ಈ ಆದಿಕಾರಣ ಶಕ್ತಿಯ ಒಂದು ಅಂಶವಾಗಿದ್ದಾನೆ. ಆ ಶಕ್ತಿಯು ಅವನಲ್ಲಿ ಮಾಯಾಮಮತೆ, ಕೋಪ, ಬುದ್ಧಿ, ಲೋಭ, ನೀತಿ, ವಿಚಾರಶಕ್ತಿ, ಧಾರಣಾಶಕ್ತಿ ಮೊದಲಾದ ರೂಪಗಳಿಂದ ಭಾಸಮಾನವಾಗುತ್ತದೆ. ಮನುಷ್ಯನು ಕೇವಲ ಅಂಧತೆಯಿಂದ ಅವುಗಳ ಉಪಯೋಗಮಾಡದೆ, ಜಾಣತನದಿಂದ ಅವುಗಳನ್ನು ತನ್ನ ವಶದಲ್ಲಿಟ್ಟುಕೊಂಡು ಅವುಗಳಿಂದ ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಾನೆ. ಮನು ಷ್ಯನು ಸಾವಕಾಶವಾಗಿಯೇ ಆದರೂ ನಿಶ್ಚಯವಾಗಿ ಬಾಹ್ಯಶಕ್ತಿಯ ಮೇಲೆ ತನ್ನ ಅಧಿಕಾರವನ್ನು ಕೂಡ್ರಿಸಿ ಅದನ್ನು ತನ್ನ ಇಚ್ಛಿತ ಕಾರ್ಯವನ್ನು ಮಾಡುವದರಲ್ಲಿ ತೊಡಗಿಸುತ್ತಾನೆ. ಅವನು ತನ್ನ ಅಂತಃಶಕ್ತಿಯ ಮೇಲೆ ಅಥವಾ ಅವುಗಳ ಸಮುಚ್ಚ ಯದ ಮೇಲೆ ಹೇಗೆ ಹೇಗೆ ಅಧಿಕಾರವನ್ನು ನಡಿಸಿ ವಶಕ್ಕೆ ತೆಗೆದುಕೊಳ್ಳಹತ್ತುವನೋ, ಅದರಂತೆ ಅವನ ವಿಚಾರಶಕ್ತಿಯು ಏಕತಂತ್ರಿಯಾಗುತ್ತ ನಡೆದು ಸುಖಪ್ರವಣವಾಗುವ ದೆಂಬಲ್ಲಿ ಸಂದೇಹವಿಲ್ಲ.

ಮನುಷ್ಯನು ಈ ಜಗತ್ತಿನೊಳಗಿನ ಅಶೇಷವಸ್ತುಜಾತಗಳ ಸ್ವಾಮಿಯೇ ಹೊರತು ದಾಸನಲ್ಲ. ಇಂತಹ ಯೋಗ್ಯತೆಯು ಅವನಲ್ಲಿರಲಿಕ್ಕೆಬೇಕು. ಸನ್ಮಾರ್ಗದಿಂದ ನಡೆದು 'ನಾಯಕ'ನಾಗಬೇಕಲ್ಲದೆ, ದುರ್ಮಾರ್ಗದಿಂದ ವರ್ತಿಸಿ ಸೇವಕನಾಗಬಾರದು. ಇದೇ ಅವನ ಇತಿಕರ್ತವ್ಯತೆಯು. ಮನುಷ್ಯನು ತನ್ನ ಶರೀರ ಹಾಗು ಮನಸ್ಸುಗಳೆಂಬ ಎರಡೂ ಪ್ರದೇಶಗಳ ರಾಜನಾಗಿರತಕ್ಕದ್ದು. ಆದುದರಿಂದ ಆತನು ಸತ್ಯವ್ರತವನ್ನು ಆಚರಿಸಲಿಕ್ಕೆ ಬೇಕು. ಮತ್ತು ಸಂಪೂರ್ಣವಾಗಿ ಆತ್ಮಜಯವನ್ನು ಸಂಪಾದಿಸಲಿಕ್ಕೆಬೇಕು. ಹಾಗು ಶುದ್ಧವೂ, ಶಾಶ್ವತವೂ ಆದ ಉತ್ಪಾದಕ ಶಕ್ತಿಯನ್ನು ಜಾಣತನದಿಂದ ಉಪಯೋಗಿಸ ಲಿಕ್ಕೆಬೇಕು. ಆತನು ಜಗತ್ತಿನಲ್ಲಿ ಧೈರ್ಯವಂತನೂ, ಪರಾಕ್ರಮಿಯೂ, ಕೃಪಾಳುವೂ, ಉದಾರನೂ, ನಿಶ್ಶಂಕಿಯೂ ಆಗಿ ವರ್ತಿಸತಕ್ಕದ್ದು. ಸ್ವತಃ ಅಧೋಗತಿಗಿಳಿಯದೆ ಮನು ಷ್ಯತ್ವದ ಪೂರ್ಣ ಐಶ್ವರ್ಯವನ್ನು ಸಂಪಾದಿಸಲಿಕ್ಕೆಬೇಕು. ಸ್ವಾರ್ಥಪರಾಯಣತೆ

ಹಾಗು ಪಶ್ಚಾತ್ತಾಪಗಳಲ್ಲಿ ಸಿಲುಕಿ, ಕ್ಷಮೆ ಮತ್ತು ದಯೆಗಳಿಗೆ ಪಾತ್ರನಾಗದೆ ಶುದ್ಧವಾದ ಆಯುಷ್ಯಕ್ರಮದ ತೇಜದಿಂದ ಜಗತ್ತಿನಲ್ಲಿ ಸಂಚರಿಸಲಿಕ್ಕೆಬೇಕು.

ಮನುಷ್ಯನು ಬಹು ಪ್ರಾಚೀನ ಕಾಲದಿಂದ ತನ್ನನ್ನು ಕ್ಷುದ್ರನೆಂದೂ, ದುರ್ಬಲನೆಂದೂ, ಅಪಾತ್ರನೆಂದೂ ತಿಳಿಯುತ್ತ ಬಂದಿರುತ್ತಾನೆ. ಆದುದರಿಂದ ಇದೇ ಸ್ಥಿತಿಯಲ್ಲಿರುವದರಿಂದಲೇ ಅವನಿಗೆ ಸಮಾಧಾನವೆನಿಸುತ್ತದೆ. ಆದರೆ ಸದ್ಯಕ್ಕೆ ಪ್ರಾಪ್ತವಾಗಿರುವ ಶುಭಕಾಲದಲ್ಲಿ ನಾನು ಶುದ್ಧನೂ, ಸಾಮರ್ಥ್ಯವಂತನೂ, ಉದಾರನೂ ಆಗಿದ್ದು, ಶತ್ರುವಿಗೆ ಎದುರಾಗಿ ಸದ್ಗುಣಿಯಾಗಲು ಸಾಧ್ಯವಿದೆಯೆಂದು ಪ್ರಾಯಶಃ ಪ್ರತಿಯೊಬ್ಬನಿಗೂ ತಿಳಿಯಹತ್ತಿದೆ. ಆ ಶತ್ರುವು ಬೇರೆ ಯಾವನೂ ಆಗಿರದೆ ನಮ್ಮ ಮನಸ್ಸನ್ನು ಆವರಿಸುವ ಅಜ್ಞಾನ ಹಾಗು ದುಃಖಗಳಿಂದಲೇ ದೀನನಾಗುತ್ತಾನೆ. ಆದರೆ ಜ್ಞಾನ ಹಾಗು ಚಾತುರ್ಯ ಇವುಗಳಿಂದ ಆತನ ಪದವಿಯು ಆತನಿಗೆ ಪ್ರಾಪ್ತವಾಗುತ್ತದೆ. ಮನುಷ್ಯನು ದುರ್ಬಲನೂ ಪಂಗುವೂ ಆಗಿದ್ದು ಆತನಿಂದ ಪುರುಷಾರ್ಥದ ಯಾವ ಕಾರ್ಯವೂ ಸಂಭವಿಸಲಾರದೆಂದು ಅನ್ನುವವರು ಬೇಕಾದಂತೆ ಅನ್ನಲಿ. ಆದರೆ ನಾವು ಹೇಳುವದೇನಂದರೆ, ಮನುಷ್ಯನು ಪರಾಕ್ರಮಿಯೂ ಕರ್ತೃತ್ವಶಾಲಿಯೂ ಆಗಿದ್ದಾನೆ. ಪ್ರಸ್ತುತ ಪುಸ್ತಕದೊಳಗಿನ ಈ ವಿಚಾರಮಾಲಿಕೆಯು ಕರ್ತೃತ್ವದ ಅಭಿಮಾನವೂ ಜಿಜ್ಞಾಸೆಯೂ ಇದ್ದು, ಜಗತ್ತಿನ ಕಲ್ಯಾಣಕ್ಕೋಸುಗ ಸ್ವಾರ್ಥವನ್ನೂ, ಕ್ಷುದ್ರಮನೋವೃತ್ತಿಗಳನ್ನೂ ಬದಿಗೊತ್ತಿ ಸಂತುಷ್ಟರೂ ಅನನುತಪ್ತರೂ ಆಗಿರಲಪೇಕ್ಷಿಸುವವರ ಸಲುವಾಗಿಯೇ ಬರೆಯಲ್ಪಟ್ಟಿದೆ. ಮೂರ್ಖರೂ ವಿಚಾರಶೂನ್ಯರೂ ಆದವರು ಸತ್ಯಮಾರ್ಗವನ್ನು ಹೇಗೆ ಆಕಲನ ಮಾಡಿಯಾರು? ಮತ್ತು ಸಂಶಯಿಗಳೂ, ಅಡನಾಡಿಗಳೂ ಆದವರಿಗೆ ಶ್ರೇಷ್ಠವಾದ ಆಯುಷ್ಯಕ್ರಮದ ಮಹತ್ವವು ಹೇಗೆ ತಿಳಿಯುವದು?

ಮನುಷ್ಯನು 'ಅಧಿಪತಿ'ಯಾಗಿರದಿದ್ದರೆ ಅವನಿಗೆ ಸೃಷ್ಟಿನಿಯಮಗಳ ಉಲ್ಲಂಘನವನ್ನು ಮಾಡಲು ಬರುತ್ತಲೇ ಇರಲಿಲ್ಲ. ಆತನ ದುರ್ಗುಣಗಳೇ ಅವನ ಸಾಮರ್ಥ್ಯದ ದ್ಯೋತಕವಾಗಿವೆ. ಆತನ ಪಾಪ ಬುದ್ಧಿಯೆಂದರೆ ಶುದ್ಧಾಚರಣೇಚ್ಛೆಯ ವ್ಯುತ್ಕ್ರಮ ಸ್ಥಿತಿಯು. ಆತನ ದುರ್ಗುಣ ಹಾಗು ಪಾಪಗಳೆಂದರೆ, ತನ್ನ ಶಕ್ತಿಯ ದುರುಪಯೋಗವಲ್ಲದೆ ಮತ್ತೇನು? ಈ ದೃಷ್ಟಿಯಿಂದ ದುರಾಚಾರಿಯೂ ಸಾಮರ್ಥ್ಯವಂತನೆಂದೇ ಹೇಳಬೇಕಾಗುವದು. ಅವನು ಅಜ್ಞಾನದ ಮೂಲಕ ತನ್ನ ಶಕ್ತಿಯನ್ನು ಸತ್ಕಾರ್ಯದಲ್ಲಿ ವಿನಿಯೋಗಿಸುವದರ ಬದಲು ದುಷ್ಕಾರ್ಯಗಳಲ್ಲಿ ಉಪಯೋಗಿಸುತ್ತಾನೆ. ಶಕ್ತಿಯ ಅಪವ್ಯಯದ ಪ್ರಾಯಶ್ಚಿತ್ತವೇ ದುಃಖವು. ದುರ್ಜನನು ತನ್ನ ವರ್ತನಕ್ರಮವನ್ನು ಬದಲು ಮಾಡುವದರಿಂದ ಸಜ್ಜನನಾಗುವನು. ಪಾಪಾಚರಣದ ಬಗ್ಗೆ ಪಶ್ಚಾತ್ತಾಪ ಪಡುವವರು ಪಾಪಮಾರ್ಗವನ್ನು ಬಿಟ್ಟುಕೊಟ್ಟು, ಮನಸ್ಸಿನೊಳಗಿನ ಪಾಪಪ್ರವೃತ್ತಿಯನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು. ಈ ಪ್ರಕಾರ ನಡೆಯುವದರಿಂದ ದುರ್ಬಲತನವು ನಷ್ಟವಾಗಿ, ಸಾಮರ್ಥ್ಯವು ಪ್ರಾಪ್ತವಾಗುವದಲ್ಲದೆ, ದುಃಖವು ಇಲ್ಲ

ದಂತಾಗಿ ಆನಂದವು ಲಭಿಸುವದು. ದುಷ್ಟ ಪ್ರವೃತ್ತಿಗಳನ್ನು ಪರಿತ್ಯಜಿಸಿ ಸನ್ಮಾರ್ಗವರ್ತಿಯಾಗುವದರಿಂದ ದುಷ್ಟ ಮನುಷ್ಯನೂ ಕೂಡ ಸಜ್ಜನನಾಗುತ್ತಾನೆ. ವಿಶ್ವವನ್ನೆಲ್ಲ ವ್ಯಾಪಿಸಿದ ಈ 'ಕರ್ತೃತ್ವಶಕ್ತಿ'ಯು ಅಮರ್ಯಾದಿತವಾಗಿದ್ದರೂ ವಿಶಿಷ್ಟವಾದ ಆಕಾರಗಳಿಂದ ಅದಕ್ಕೆ ಮರ್ಯಾದೆಯೂ ಉಂಟು. ಮನುಷ್ಯನಿಗೆ ಅವನ ಆಕಾರವಾನದಂತೆ ಕೆಲವು ವಿವಕ್ಷಿತ ಪ್ರಮಾಣದಲ್ಲಿ ಈ ಶಕ್ತಿಯು ದೊರಕಿರುತ್ತದೆ. ಅವನು ತನಗೆ ಬೇಕಾದಂತೆ ಅದರ ಉಪಯೋಗವನ್ನು ಮಾಡಿಕೊಳ್ಳಬೇಕು. ಅದನ್ನು ಜಾಗರೂಕತೆಯಿಂದ ಖರ್ಚು ಮಾಡಿ ಏಕಾಗ್ರಗೊಳಿಸಬಹುದು; ಇಲ್ಲವೆ ಅಸದ್ವ್ಯಯ ಮಾಡಿ ಅದನ್ನು ಮಣ್ಣುಪಾಲು ಮಾಡಬಹುದು. ಏಕಾಗ್ರಗೊಳಿಸಿದ 'ಕರ್ತೃತ್ವ ಶಕ್ತಿ'ಯೇ ಸಾಮರ್ಥ್ಯವು. ಈ ಶಕ್ತಿಯನ್ನು ಯೋಗ್ಯ ರೀತಿಯಿಂದ ಉಪಯೋಗಿಸುವದೇ ಜ್ಞಾನ ಅಥವಾ ಚಾತುರ್ಯವು. ಯಾವನು ತನ್ನ ಯಾವತ್ತು ಕರ್ತೃತ್ವಶಕ್ತಿಯನ್ನು ಒಟ್ಟುಗೂಡಿಸಿ ಅದರ ಉಪಯೋಗವನ್ನು ಯಾವದೊಂದು ಮಹತ್ಕಾರ್ಯವನ್ನು ಸಾಧಿಸುವದರಲ್ಲಿ ಮಾಡುವನೋ, ಮತ್ತು ಶಾಂತತೆಯಿಂದ ಕೆಲಸ ಮಾಡಿ ಆ ಕಾರ್ಯದ ಫಲವನ್ನು ನಿರೀಕ್ಷಿಸುತ್ತ ಕೂಡ್ರುವನೋ, ಹಾಗು ತನ್ನ ಇಚ್ಛೆಗಳನ್ನು ಯಾವಾಗಲೂ ಸತ್ಕಾರ್ಯಗಳಲ್ಲಿಯೇ ಉಪಯೋಗ ಮಾಡುವನೋ ಅವನೇ ಸಾಮರ್ಥ್ಯವಂತನೂ ಪ್ರಭಾವಶಾಲಿಯೂ ಆದ ಮನುಷ್ಯನೆಂದು ಹೇಳಬಹುದು. ಅದರಂತೆ ಯಾವನು ಪ್ರಸಂಗ ಪ್ರಾಪ್ತವಾದ ವಾಸನೆಯ ಶಾಂತ್ಯರ್ಥವಾಗಿಯೂ ಕ್ಷಣಿಕ ಸುಖದ ಲಾಲಸೆಯಿಂದಲೂ ವಿವೇಕಭ್ರಷ್ಟನಾಗಿ ಮನಸ್ಸಿನ ಅಧೀನನಾಗುವನೋ ಅವನೇ ಮೂರ್ಖನೂ ದುರ್ಬಲನೂ ಆದ ಮನುಷ್ಯನೆಂದು ಹೇಳಬಹುದು.

ಒಂದು ಕೆಲಸವನ್ನು ಮಾಡುವದರ ಕಡೆಗೆ ಹಚ್ಚಿದ 'ಶಕ್ತಿ'ಯನ್ನು ಇನ್ನೊಂದು ಕಾರ್ಯದ ಕಡೆಗೆ ತೊಡಗಿಸಲಿಕ್ಕೆ ಬರುವದಿಲ್ಲವೆಂಬ ನಿಯಮವು ಸೃಷ್ಟಿಯಲ್ಲಿ 'ಜಡ'ಗಳಲ್ಲಿಯೂ 'ಜೀವ'ಗಳಲ್ಲಿಯೂ ಅಪ್ರತಿಹತವಾಗಿದೆ. ಇಮರ್ಸನನು ಈ ನಿಯಮಕ್ಕೆ ವಿನಿಮಯದ ನಿಯಮವೆನ್ನುವನು. ಒಂದು ವಿವಕ್ಷಿತಕಾರ್ಯದಲ್ಲಿ ಲಾಭವಾದರೆ ಇನ್ನೊಂದು ಕಾರ್ಯದಲ್ಲಿ ಹಾನಿಯಾಗಲಿಕ್ಕೆಬೇಕು. ತಕ್ಕಡಿಯ ಒಂದು ಪರಡಿಯ ಮೇಲೆ ಭಾರವನ್ನಿಟ್ಟರೆ ಇನ್ನೊಂದು ಪರಡಿಯು ಮೇಲಕ್ಕೇಳಲೇ ಬೇಕು. ಎಲ್ಲ ಕಡೆಯಲ್ಲಿಯೂ ಸಮತೋಲತೆಯನ್ನು ಕಾಯುವದು ನಿಸರ್ಗದ ಪ್ರವೃತ್ತಿಯಾಗಿದೆ. ನಿರುದ್ಯೋಗದಲ್ಲಿ ಉಪಯೋಗಿಸಲ್ಪಟ್ಟ ಶಕ್ತಿಯಿಂದ ಆವ ಪ್ರಯೋಜನವಾಗುವದು? ಅದು ವ್ಯರ್ಥವಾಗಿ ಹೋಗತಕ್ಕದ್ದೇ. ಸುಖದ ಬೆನ್ನುಹತ್ತುವವನಿಗೆ ತತ್ವಬೋಧವಾಗುವದು ಹೇಗೆ? ಕೋಪ ಭರದಲ್ಲಿ ಮಾಡಲ್ಪಟ್ಟ ಶಕ್ತಿಕ್ಷೇಪವು ಸದ್ಗುಣಗಳ ಸಂಗ್ರಹದೊಳಗಿಂದ— ವಿಶೇಷವಾಗಿ ಶಾಂತಿಯ ಸಮುಚ್ಚಯದೊಳಗಿಂದ ವೆಚ್ಚಮಾಡಲ್ಪಟ್ಟಿರುತ್ತದೆ. ಪಾರಮಾರ್ಥಿಕ ಭಾಷೆಯಲ್ಲಿ ಹೇಳುವದಾದರೆ ವಿನಿಮಯದ ನಿಯಮವನ್ನು ತ್ಯಾಗವೆಂದು ಹೇಳಬೇಕು. ಪವಿತ್ರತೆಯನ್ನು ಸಂಪಾದಿಸಬೇಕಾದರೆ ವ್ಯಕ್ತಿ-ಸುಖದ ಇಚ್ಛೆಯನ್ನು ತ್ಯಾಗ ಮಾಡಲಿಕ್ಕೆಬೇಕು. ಪ್ರೇಮವನ್ನು ದೊರಕಿಸಬೇಕಾಗಿದ್ದರೆ

ದುಷ್ಟತನವನ್ನು ತ್ಯಾಗ ಮಾಡಬೇಕು, ಸದ್ಗುಣಾರ್ಜವನ್ನು ಮಾಡಬೇಕಾಗಿದ್ದರೆ ದುರ್ಗುಣಗಳನ್ನು ತ್ಯಾಗಮಾಡಬೇಕು.

ತನ್ನ ಉನ್ನತಿಯನ್ನು ಬಯಸುವ ಪ್ರತಿಯೊಬ್ಬ ಮನುಷ್ಯನಿಗೂ ಸಕ್ಕಾರ್ದರ್ಶನಕ್ಕೇ ಕಂಡುಬರುವದೇನೆಂದರೆ :- ಆಧ್ಯಾತ್ಮಿಕ, ಆಧಿದೈವಿಕ ಅಥವಾ ಆಧಿಭೌತಿಕ ಮಾರ್ಗದಲ್ಲಿ ನಮಗೆ ಏನಾದರೂ ಫಲಪ್ರಾಪ್ತಿಯಾಗಬೇಕಾಗಿದ್ದರೆ ವಾಸನಾನಿಗ್ರಹದಿಂದ ಮೋಹಕ ವಿಷಯಗಳನ್ನಷ್ಟೇ ಅಲ್ಲವೆ, ಅವಶ್ಯವೆಂದು ತೋರುವ ವಿಷಯಗಳನ್ನು ಕೂಡ ಪರಿತ್ಯಜಿಸಲಿಕ್ಕೆ ಬೇಕು. ಉಚ್ಚ ಧ್ಯೇಯವನ್ನು ಸಾಧಿಸುವದರಲ್ಲಿ ತತ್ಪರನಾದ ಮನುಷ್ಯನು ದೃಢಮೂಲನಾದ ರೂಢಿಗಳನ್ನೂ, ಅನೇಕ ಪ್ರಕಾರದ ವ್ಯಸನಗಳನ್ನೂ, ದುಷ್ಟ ಚಟಗಳನ್ನೂ ಇದೇ ಪ್ರಕಾರ ತನ್ನ ಧ್ಯೇಯಕ್ಕೆ ಬಾಧಕವಾದ ಯಾವತ್ತೂ ಕೃತಿಗಳನ್ನೂ ಬಿಟ್ಟುಬಿಡಬೇಕು. ಕಾಲ ಹಾಗು ಶಕ್ತಿ ಇವು ಮರ್ಯಾದಿತವಾಗಿದ್ದು ಇವುಗಳನ್ನು ಬಹಳೇ ಜಾಗರೂಕತೆಯಿಂದ ಉಪಯೋಗ ಮಾಡಲಿಕ್ಕೆಬೇಕು. ಮೂರ್ಖರಾದವರು ತಮ್ಮ ಶಕ್ತಿಯನ್ನು ಆಲಸ್ಯದಲ್ಲಿಯೂ, ನಿದ್ರೆಯಲ್ಲಿಯೂ, ವಿಲಾಸದಲ್ಲಿಯೂ ವೆಚ್ಚ ಮಾಡುತ್ತಾರೆ, ಅಥವಾ ವ್ಯರ್ಥವಾದ ಹರಟೆಗಳನ್ನು ಕೊಚ್ಚುವದರಲ್ಲಿ ಉಪಯೋಗಿಸುತ್ತಾರೆ; ಇಲ್ಲವೆ ವಿಪರೀತವಾದ ಶುಷ್ಕವಾದಗಳಲ್ಲಾಗಲಿ, ಅಲ್ಲದೆ ಕೆಲಸಗಳಲ್ಲಾಗಲಿ ವಿನಿಯೋಗಿಸುತ್ತಾರೆ. ಮತ್ತು ಇತರರಂತೆ ಲೋಪಕಾರಿಗಳೂ, ಯಶಸ್ವಿಗಳೂ, ಸದ್ಗುಣ ಮಂಡಿತರೂ ಆಗುವಷ್ಟು ನಾವು ದೈವವಂತರಿಲ್ಲವೆಂದು ಬಾಯಿಂದ ಬಡಬಡಿಸುತ್ತಾರೆ. ಇದರಂತೆಯೇ ಯಾರು ತಮ್ಮ ಕರ್ತೃತ್ವಶಕ್ತಿಯನ್ನು ಕರ್ತವ್ಯಕರ್ಮಕ್ಕೋಸುಗ ಸ್ವಾರ್ಥತ್ಯಾಗ ಮಾಡುವದರಲ್ಲಿಯೂ, ತಮ್ಮ ಉಚ್ಚಧ್ಯೇಯವನ್ನು ಸಾಧ್ಯಮಾಡಿಕೊಳ್ಳುವದರಲ್ಲಿಯೂ ವೆಚ್ಚಮಾಡುತ್ತಿರುವರೋ ಅಂತಹ ಪೂಜ್ಯರನ್ನು ಅಸೂಯಾ ದೃಷ್ಟಿಯಿಂದ ನೋಡುತ್ತಾರೆ. ಯಾವನು ಸರಳಮಾರ್ಗದಿಂದ ನಡೆಯುವನೋ, ಯಾವನು ಸತ್ಯ ಮಾತಾಡುವನೋ, ಯಾವನು ' ತನ್ನ ಕೆಲಸವೇನೋ ತಾನೇನೋ ' ಎಂಬಂತೆ ವರ್ತಿಸುವನೋ ಅವನಿಗೆ ಜನರು ಮಾನ ಕೊಡುತ್ತಾರೆ. ಪ್ರತಿಯೊಬ್ಬನು ತನ್ನ ತನ್ನ ಕೆಲಸಗಳಲ್ಲಿ ತೊಡಗಿರಬೇಕು. ತನ್ನ ಯಾವತ್ತು ಜ್ಞಾನಶಕ್ತಿಯನ್ನೂ ಕರ್ತೃತ್ವಶಕ್ತಿಯನ್ನೂ ಏಕಾಗ್ರಗೊಳಿಸಿ, ಆಯುಷ್ಯದ ಇತಿಕರ್ತವ್ಯತೆಯ ಕಡೆಗೆ ಅದನ್ನು ಸಂಪೂರ್ಣವಾಗಿ ಉಪಯೋಗಿಸಬೇಕು. ಎರಡನೆಯವರ ಒಣ ಉಸಾಬರಿಯನ್ನು ಮಾಡುವದರಲ್ಲಾಗಲಿ, ಎರಡನೆಯವರಿಗೆ ಹೆಸರಿಡುವದರಲ್ಲಾಗಲಿ ಮಗ್ನನಾಗಬಾರದು. ಅಂದರೆ ಜೀವಿತದ ಉದ್ದೇಶವು ಉಚ್ಚವಾಗಿದ್ದು ಅದು ಸರಳವಾಗಿಯೂ ಸುಖಾವಹವಾಗಿಯೂ ಇರುವದೆಂದು ಪ್ರತಿಯೊಬ್ಬನಿಗೂ ಅನುಭವಕ್ಕೆ ಬರುವದು.

ಯಾವತ್ತು ವಿಶ್ವದಲ್ಲಿ ಸದ್ಗುಣಗಳ ಹಾಗು ಸಾಮರ್ಥ್ಯದ ಕವಚವಿದ್ದು, ಅದು ಸಚ್ಚರಿತರೂ ಸುವೃತ್ತರೂ ಆದ ಜನರ ರಕ್ಷಕನಾಗಿದೆ. ಪಾಪ ಮತ್ತು ದುರ್ಗುಣಗಳು ಆತ್ಮನಾಶವನ್ನುಂಟುಮಾಡುತ್ತವೆ. ವಿಷಯಲೋಲುಪತೆಯು ಮನುಷ್ಯನನ್ನು ಅಧೋ

ಗತಿಗೆ ಮುಟ್ಟಿಸುತ್ತದೆ. ಸಾಮರ್ಥ್ಯವು ಸೃಷ್ಟಿಗೆ ಪ್ರಿಯಕರವಾದುದಾಗಿದೆ. "ಬಳಿ ತೋಕಾನ್ ಪಿಳೀ" ಎಂಬದರಲ್ಲಿ ಸರಿಯಾದದ್ದಲ್ಲವೆಂಬುದೇನೂ ನಮಗೆ ಗೋಚರವಾಗುವದಿಲ್ಲ. ಈ ನಿಯಮವು ಸೃಷ್ಟಿಯಲ್ಲಿ ಹೇಗೋ ಹಾಗೆ ಪಾರಮಾರ್ಥಿಕ ಜ್ಞಾನಕ್ಕೂ ಸಂಬಂಧಿಸುತ್ತದೆ. ಪಶುವೃತ್ತಿಯು ಮನುಷ್ಯನಲ್ಲಿರುವ ಪ್ರಬಲವಾದ ಮನೋವೃತ್ತಿಗಳಿಂದಲೇ ಆತನ ಉನ್ನತಿಯೂ ಆಗುವ ಸಂಭವವಿರುತ್ತದೆ. ಉದಾತ್ತವಾದ ನೈತಿಕ ಪ್ರವೃತ್ತಿಗಳ ಮೂಲಕ ಮನುಷ್ಯನು ದುಃಖಗಳಿಂದ ಮುಕ್ತತೆಯನ್ನು ಪಡೆಯುವನು. ಆ ಪ್ರವೃತ್ತಿಗಳ ವರ್ಚಸ್ಸಿನಿಂದಲೇ ಕ್ಷುದ್ರಪ್ರವೃತ್ತಿಗಳು ಸಮೂಲವಾಗಿ ನಾಶವನ್ನೈದುವವು. ಯಾವನು ಕ್ಷುದ್ರಮನೋವೃತ್ತಿಗಳ ಅಧೀನನಾಗಿರುವನೋ ಅವನು ತನ್ನ ಕೈಯಿಂದಲೇ ತನ್ನ ನಾಶವನ್ನು ಮಾಡಿಕೊಳ್ಳುವನು. ಅವನು ತಲೆಯೆತ್ತಬೇಕೆನ್ನುವ ಆಶೆಯನ್ನೇ ಹಿಡಿಯುವ ಕಾರಣವಿಲ್ಲ. ಐಹಿಕ ಹಾಗು ಪಾರಮಾರ್ಥಿಕಗಳೆರಡರ ಲಾಭಕ್ಕೂ ಆತನು ಎರವಾಗುವನು. ಪಶುತುಲ್ಯಪ್ರವೃತ್ತಿಗಳಲ್ಲಿ ಯಾವನು ತನ್ನ ಜೀವಿತವನ್ನು ವಿನಿಯೋಗಿಸುವನೋ, ಅವನು ಉಚ್ಚಪ್ರವೃತ್ತಿಗಳಿಗೆ ಸಂಪೂರ್ಣವಾಗಿ ಎರವಾಗಲಿಕ್ಕೆಬೇಕೆಂಬುದು ಸಹಜವೇ ಇದೆ. ಇಷ್ಟೇ ಅಲ್ಲದೆ ನೀಚಪ್ರವೃತ್ತಿಗಳಲ್ಲಾದರೂ ಆತನಿಗೆ ಲಭ್ಯಾಂಶವು ತಿಲಮಾತ್ರ ಇಲ್ಲ. ಯಾಕಂದರೆ, ಅಸನ್ಮಾರ್ಗದ ಅವಲಂಬನವೇ ಮೊದಲು ಭ್ರಮೆಯ ಕುಂಬಳಕಾಯಿಯಂತಿದೆ. ಆದರೆ ಸನ್ಮಾರ್ಗಪ್ರವೃತ್ತಿಯಿಂದ ಆಯುಷ್ಯಕ್ರಮಣಮಾಡಿದರೆ ಯಾವ ತರದಿಂದಲೂ ಹಾನಿಯಾಗುವದಿಲ್ಲ. ಜಗತ್ತಿನ ದೃಷ್ಟಿಯಿಂದ ಸದಾಚಾರಿಯಾದ ಮನುಷ್ಯನು ಎಷ್ಟೋ ಉತ್ತಮೋತ್ತಮ ವಿಷಯಗಳನ್ನು ಪರಿತ್ಯಜಿಸಬೇಕಾಗುತ್ತದೆಂದು ತೋರಿದರೂ, ತತ್ವತಃ ಉತ್ತಮ ವಿಷಯಗಳನ್ನು ತ್ಯಾಗ ಮಾಡುವ ಪ್ರಸಂಗವು ಆತನಿಗೆ ಬರುವದಿಲ್ಲ. ಮತ್ತು ಸದಾಚಾರಿಯಾದ ಮನುಷ್ಯನ ಚರಿತ್ರವು ಸರ್ವರಿಗೂ ಅನುಕರಣೀಯವಾಗಿ ಅವನ ಸ್ಮೃತಿಯು ಅನಂತ ಕಾಲದ ವರೆಗೂ ನಿಲ್ಲುತ್ತದೆ. ಆದರೆ ಕ್ಷುದ್ರ ಹಾಗು ನೀಚಪ್ರವೃತ್ತಿಯ ಜನರು ನಾಶವಾಗಲಿಕ್ಕೇ ಬೇಕು. ಇನ್ನು ಯಾವನ ಪ್ರವೃತ್ತಿಯು ಯಾವಾಗಲೂ ಸತ್ಯ ಹಾಗು ಸದಾಚಾರ ಇವುಗಳ ಕಡೆಗಿರುವದೋ, ಆತನು ಉತ್ತರೋತ್ತರ ಪ್ರಗತಿ ಹೊಂದುತ್ತ ನಡೆದು ಯಾವ ವಿಷಯವನ್ನೂ ತ್ಯಜಿಸಬೇಕಾದ ಪ್ರಸಂಗವು ಆತನಿಗೆ ಬರದೆ, ಸರ್ವ ಸಂಗತಿಗಳು ಅನುಕೂಲವಾಗಿ ಜಗತ್ತಿನೊಳಗಿನ ಯಾವತ್ತು ಬಾಹ್ಯಕೃತಿಗಳಲ್ಲಿ ಆತನಿಗೆ ಯಶಸ್ಸು ಪ್ರಾಪ್ತವಾಗುವದಲ್ಲದೆ ಮಾನಸಿಕ ಉನ್ನತಿಯೂ ಉತ್ತಮತರದಿಂದಾಗುವದು.

ಆದುದರಿಂದ ಪ್ರತಿಯೊಬ್ಬನು ದೃಢನಿಶ್ಚಯಿಯಾಗುವ ಯತ್ನ ಮಾಡಬೇಕು. ದೃಢನಿಶ್ಚಯದ ಅಸ್ತಿವಾರದ ಮೇಲೆಯೇ ಶ್ರೇಯಃಸಾಧನ ಮಂದಿರವು ಕಟ್ಟಲ್ಪಡತಕ್ಕದ್ದು. ಆಯುಷ್ಯದಲ್ಲಿ ವಿವಕ್ಷಿತವಾದ ಧ್ಯೇಯವೂ ತತ್ಪ್ರೀತ್ಯರ್ಥವಾಗಿ ದೃಢವಾದ ಕರ್ತವ್ಯನಿಷ್ಠೆಯೂ ಇಲ್ಲದಿದ್ದರೆ ಜೀವಿತವು ಬೇಸರದ್ದಾಗಿಯೂ, ಚಂಚಲವಾಗಿಯೂ ಕ್ಷುದ್ರವಾಗಿಯೂ ಎನಿಸಹತ್ತುವದು. ಪ್ರತಿಯೊಂದು ಕ್ಷಣದ ಉದ್ಯೋಗವು ಒಂದು ವಿವಕ್ಷಿತ

ಹೇತುವಿನ ಸಿದ್ಧ್ಯರ್ಥವಾಗಿಯೇ ಮಾಡಲ್ಪಡತಕ್ಕದ್ದು. ಬೇರೆ ಬೇರೆ ಪ್ರಸಂಗದೊಳಗಿನ ವರ್ತನವು ಬೇರೆ ಬೇರೆ ಇರಬಹುದಾದರೂ ಹೃದಯವು ಯೋಗ್ಯ ಮಾರ್ಗದಲ್ಲಿ ಮಗ್ನವಾದ ಹಿದ್ದರೆ ಅಕಾರ್ಯವಾಗಲಿ ದುಷ್ಕಾರ್ಯವಾಗಲಿ ಎಂದೂ ಘಟಿಸಲಿಕ್ಕಿಲ್ಲ. ಮತ್ತು ಬಿಕ್ಕಟ್ಟಿನ ಪ್ರಸಂಗದಲ್ಲಿ ಕ್ಷಣಮಾತ್ರ ಮನಸ್ಸು ಚಂಚಲಿತವಾದರೂ, ಕೂಡಲೇ ಅದು ಪೂರ್ವದ ಶಾಂತಸ್ಥಿತಿಗೆ ಬಂದು ಪ್ರಾಪ್ತ ಪ್ರಸಂಗದೊಳಗಿಂದ ಮನುಷ್ಯನು ಪಾರಾಗುವನು. ಈ ಪ್ರಕಾರ ಅನುಭವದಿಂದ ಜ್ಞಾನವು ಬೆಳೆಬೆಳೆದಂತೆ ಅವನು ಹೆಚ್ಚು ಹೆಚ್ಚು ದೂರದರ್ಶಿಯೂ ಸಾಮರ್ಥ್ಯವಂತನೂ ಆಗುವನು. ಆದುದರಿಂದ ಪ್ರತಿಯೊಬ್ಬನು ಅಂತಸ್ಥ ವಿಚಾರಶಕ್ತಿ ಯೆಂಬ ಹೋಕಾಯಂತ್ರದ ಸಹಾಯದಿಂದ ತನ್ನ ಆಯುಷ್ಯರೂಪವಾದ ಹಡಗವನ್ನು ನಡಿಸಬೇಕು. ಸದಸದ್ವಿಚಾರಶಕ್ತಿಯನ್ನು ಅಲ್ಲಗಳೆದು, ಮನಬಂದಂತೆ ತಿರುಗುವದು ಉಚಿತವಲ್ಲ. ಸದಸದ್ವಿಚಾರಶಕ್ತಿಗೆ ಸರಿಯೆನಿಸಿದ ಮಾರ್ಗದಿಂದ ವರ್ತಿಸಬೇಕು. ಯಾವ ದೊಂದು ಪ್ರಸಂಗವು ಪ್ರಾಪ್ತವಾಗಲು ಭ್ರಾಂತಚಿತ್ತರೂ, ಕಿಂಕರ್ತವ್ಯತಾಮೂಢರೂ ಆಗದೆ ಮನಸ್ಸಿಗೆ ಯೋಗ್ಯವೆನಿಸಿದ ಮೇರೆಗೆ ಆಚರಿಸಬೇಕು. ಒಂದಾನೊಂದು ಸಂದರ್ಭ ದಲ್ಲಿ ಮನುಷ್ಯನು ಕರ್ತವ್ಯಕರ್ಮದಲ್ಲಿ ದಕ್ಷನಾಗಿದ್ದರೂ ಕಾರ್ಯಸಿದ್ಧಿಗೋಸ್ಕರ ಕೆಲ ವೊಂದು ಕಠೋರವಾದ ಉಪಾಯವನ್ನು ಯೋಜಿಸಬೇಕಾಗುವದೆಂದು ಅವನ ಮನಸ್ಸಿಗೆ ಅನಿಸಿದರೆ ಅದರಂತೆ ಆಚರಿಸಲು ಎಂದೂ ಹಿಂದುಮುಂದಾಗಬಾರದು. ಅಂಜುಬುರುಕ ತನದಿಂದಿರುವದಕ್ಕಿಂತ ಜನರಿಂದ ಕಠೋರನೆನ್ನಿಸಿಕೊಳ್ಳುವದು ನೆಟ್ಟಗೆ. ತತ್ಕಾಲದಲ್ಲಿ ಮಾಡಲ್ಪಡುವ ಉಪಾಯಯೋಜನೆಯು ಸರ್ವೋತ್ಕೃಷ್ಟವಿರಲಿಕ್ಕಿಲ್ಲ; ಆದರೂ ತನಗೆ ಗೊತ್ತಿದ್ದ ಉಪಾಯಗಳಲ್ಲಿ ಇದೇ ಉತ್ತಮವಾದುದೆಂದು ಮನಸ್ಸಿನಲ್ಲಿ ನಂಬುಗೆಯಿದ್ದರೆ, ಅದನ್ನು ಅವಲಂಬಿಸುವದೇ ಅವನ ಕರ್ತವ್ಯವು. ಆದರಿಂದ ಜ್ಞಾನವಾಗಲಿ ಜಾಣತನ ವಾಗಲಿ ಪ್ರಾಪ್ತವಾಗಬೇಕೆಂಬ ಉತ್ಕಂಠೆಯಿದ್ದರೆ, ಒಂದಾನೊಂದು ಉತ್ತಮವಾದ ಉಪಾಯವು ಸಹಜರೀತಿಯಿಂದ ಅವಗತವಾಗಬಹುದು. ಯಾವದೊಂದು ಕೆಲಸಕ್ಕೆ ಕೈಹಾಕುವ ಮೊದಲೇ ಎಲ್ಲ ಬಗೆಯಿಂದಲೂ ವಿಚಾರ ಮಾಡಬೇಕು. ಒಮ್ಮೆ ಕೆಲಸವನ್ನು ಕೈಕೊಂಡ ಬಳಿಕ ಮುಂದೆ ಎಷ್ಟೇ ವಿಘ್ನಗಳು ಬಂದರೂ ಹಿಂಜರಿಯಬಾರದು. ಕಾಮ, ಕ್ರೋಧ, ಲೋಭ, ದುರಾಗ್ರಹಗಳನ್ನು ಬಿಟ್ಟುಬಿಡಬೇಕು. ಕ್ರೋಧವಶನಾದ ಮನು ಷ್ಯನು ದುರ್ಬಲನೇ. ಯಾವನು ತನ್ನ ವರ್ತನಕ್ರಮವನ್ನು ಬದಲಿಸಲು ಅಸಮರ್ಥನೋ, ಮತ್ತು ಜ್ಞಾನಪ್ರಾಪ್ತಿಯನ್ನು ಮಾಡಿಕೊಳ್ಳಲಿಚ್ಛೆ ಇಲ್ಲದವನೋ ಅವನು ಮೂರ್ಖ ನೆಂದೇ ತಿಳಿಯಬೇಕು. ಇಂತಹ ಮನುಷ್ಯನ ಆಯುಷ್ಯವು ಮೂರ್ಖತನದಲ್ಲಿಯೇ ಮುಗಿದು ಹೋಗುತ್ತದೆ; ಮತ್ತು ಆತನ ಕೂದಲುಗಳು ಹಣ್ಣಾದರೂ ಆತನಿಗೆ ಸನ್ಮಾನವಾಗಲಿ ದೊಡ್ಡಸ್ತಿಕೆಯಾಗಲಿ ಪ್ರಾಪ್ತವಾಗುವದಿಲ್ಲ. ಕಾಮುಕನ ಕರ್ತೃತ್ವಶಕ್ತಿಯು ಕೇವಲ ಸುಖೋಪಭೋಗದ ಮಟ್ಟಿಗೇ ಜಾಗ್ರತವಾಗಿರುತ್ತದೆ. ಆದುದರಿಂದ ಪುರುಷಾರ್ಥದ ಕೃತ್ಯಗಳನ್ನಾಗಲಿ ಆತ್ಮೋನ್ನತಿಯ ಕಾರ್ಯಗಳನ್ನಾಗಲಿ ಮಾಡಲು ಅವನು ಅಸ ಮರ್ಥನಾಗುತ್ತಾನೆ. ಮನುಷ್ಯ ಸ್ವಭಾವದ ಉಚ್ಚ ಮನೋವೃತ್ತಿಗಳ ಇಲ್ಲವೆ ಸಚ್ಛ

ರಿತದ ಮಹತ್ವದ ಕಲ್ಪನೆಯೂ ಕೂಡ ಲೋಭಿಯಾದ ಮನುಷ್ಯನಲ್ಲಿರುವದಿಲ್ಲ. ಆತನು ದಿವ್ಯಸುಖಾನುಭವವನ್ನು ಪಡೆಯುವ ಬದಲು ದುಃಖಭಾರವನ್ನು ಹೆಚ್ಚಿಸುವ ವಿಷಯಗಳ ಚಿಂತನದಲ್ಲಿಯೇ ಇರುತ್ತಾನೆ.

ನಿಮ್ಮ ಸಾಮರ್ಥ್ಯವು ನಿಮ್ಮಲ್ಲಿಯೇ ಇದೆ. ನೀವು ಅದನ್ನು ನಿಮ್ಮ ಉನ್ನತಿಯನ್ನಾಗಲಿ ಅಧೋಗತಿಯನ್ನಾಗಲಿ ಮಾಡಿಕೊಳ್ಳುವದರಲ್ಲಿ ಉಪಯೋಗ ಮಾಡಿಕೊಳ್ಳಬಹುದು. "ಉದ್ಧರೇದಾತ್ಮನಾತ್ಮಾನಮ್ | ನಾತ್ಮಾನಮವಸಾದಯೇತ್ ||" ನೀವು ನಿಮ್ಮ ಕರ್ತೃತ್ವಶಕ್ತಿಯನ್ನು ಸತ್ಕಾರ್ಯದಲ್ಲಾಗಲಿ, ಸ್ವಾರ್ಥಪರಾಯಣತೆಯಲ್ಲಾಗಲಿ ಉಪಯೋಗಿಸಬಹುದು. ಒಂದೇ ಶಕ್ತಿಯು ಉಪಯೋಗಪರತ್ವದಿಂದ ನಿಮ್ಮನ್ನು ದೇವರನ್ನಾಗಲಿ, ಪಶುಗಳನ್ನಾಗಲಿ ಮಾಡುವದು. ನನ್ನ ಮನಸ್ಸು ದುರ್ಬಲವಾಗಿದೆಯೆಂಬ ವಿಚಾರವನ್ನೂ ಕೂಡ ಮನಸ್ಸಿನಲ್ಲಿ ತರಬಾರದು. ವಿಚಾರಗಳನ್ನು ಯೋಗ್ಯವಾದ ಮಾರ್ಗಕ್ಕೆ ಹಚ್ಚಿ ದುರ್ಬಲತೆಯ ಶಕ್ತಿಯಲ್ಲಿಯೂ, ಶಕ್ತಿಯು ಪರಾಕ್ರಮದಲ್ಲಿಯೂ ಪರ್ಯವಸಾನವನ್ನು ಹೊಂದುವಂತೆ ಮಾಡಿರಿ. ನಿಮ್ಮ ವಿಚಾರಗಳನ್ನು ಉಚ್ಚಮಾರ್ಗಕ್ಕೆ ಹಚ್ಚಿರಿ. ಭ್ರಾಮಕ ಸಂಗತಿಗಳನ್ನೂ, ಮೂರ್ಖತನದ ವಾಸನೆಗಳನ್ನೂ ಬಿಟ್ಟು ಬಿಡಿರಿ. ಆತ್ಮಸ್ತುತಿಯನ್ನೂ, ಪರನಿಂದೆಯನ್ನೂ ಬಿಟ್ಟುಕೊಟ್ಟು, ಅಸತ್ಪ್ರವೃತ್ತಿಯಲ್ಲಿ ಆಸಕ್ತರಾಗದೆ ಇರ್ರಿ. ತಲೆಯನ್ನು ಕೆಳಗೆ ಮಾಡದೆ, ಮೇಲೆ ಮಾಡಿರಿ. ನಿಮ್ಮ ದೈವಿಕ ಶಕ್ತಿಯನ್ನು ಪ್ರಕಟ ಮಾಡಿರಿ. ಮನಸ್ಸಿನ ಹಾಗು ಜೀವಿತದ ಯಾವತ್ತೂ ಕಿಲ್ಮಿಷವನ್ನೂ ಕ್ಷುದ್ರತೆಯನ್ನೂ ಬಿಟ್ಟು ಬಿಡಿರಿ. ಒಬ್ಬಾನೊಬ್ಬ ದೀನನಾದ ಗುಲಾಮನಂತೆ ಹೇಡಿತನದಿಂದ ಆಯುಷ್ಯವನ್ನು ಕಳೆಯದೆ, ವಿಜಯಶಾಲಿಯಾದ ವೀರನಂತೆ ನಿಮ್ಮ ಆಯುಷ್ಯಕ್ರಮಣವನ್ನು ಸಾಗಿಸಿರಿ.

o

## ೪. ಆತ್ಮಸಂಯಮನ ಮತ್ತು ಸುಖ

ವಿಚಾರಶಕ್ತಿಯನ್ನು ಕಡಿಮೆ ಪ್ರತಿಬಂಧಗಳುಳ್ಳ ಮಾರ್ಗದಲ್ಲಿ ಹೋಗಗೊಡು ವದೂ, ಅನುಕೂಲವಾದ ಮಾರ್ಗದಲ್ಲಿ ನಡಿಸುವದೂ ಮಾನಸಿಕ ಸೌಜನ್ಯದ ಲಕ್ಷಣ ಗಳು. ಅದೇ ಶಕ್ತಿಯು ಏಕಾಗ್ರಗೊಳಿಸಲ್ಪಟ್ಟು ಸ್ವಾಂತದ ಉನ್ನತಿಗೋಸ್ಕರ ಕಷ್ಟ ಸಾಧ್ಯವಾದ ಕಾರ್ಯಗಳನ್ನು ಮಾಡುವದರಲ್ಲಿ ತೊಡಗಿಸಲ್ಪಟ್ಟರೆ ಅದು ಸಾಮರ್ಥ್ಯ ವೆಂದು ಹೇಳಲ್ಪಡುತ್ತದೆ. ಈ ಪ್ರಕಾರದ ವಿಚಾರ ಶಕ್ತಿಯು ಏಕಾಗ್ರತೆಯೂ, ಸಾಮ ರ್ಥ್ಯವೂ ಆತ್ಮಸಂಯಮನದಿಂದ ಪ್ರಾಪ್ತವಾಗುತ್ತದೆ.

ಆತ್ಮಸಂಯಮನ ಶಬ್ದದ ಅರ್ಥದ ವಿಷಯಕ್ಕೆ ಗೊಂದಲಪ್ರಾಪ್ತವಾಗುವ ಸಂಭವ ವಿಲ್ಲ. ಅದರ ಅರ್ಥವು ಸ್ವಾಂತದನ್ನೇನೂ ನಡೆಯಗೊಡಬಾರದೆಂಬದಾಗಿರದೆ, ಯೋಗ್ಯ ಕಾರ್ಯಕ್ಕೋಸ್ಕರ ಇಂದ್ರಿಯಜಯವನ್ನು ಸಂಪಾದಿಸುವದೆಂಬದಾಗಿದೆ. ಆತ್ಮಸಂಯ ಮನವು ದೈವೀ ಸಂಪತ್ತಿಯ ಅಂಶವಾಗಿದ್ದು ಇದರ ಯೋಗದಿಂದ ದುರ್ಬಲನು ಸಾಮ ರ್ಥ್ಯವಂತನೂ, ಅಜ್ಞಾನಿಯು ಜ್ಞಾನವಂತನೂ, ಅಧಮನು ಉತ್ತಮನೂ ಆಗುವನು. ಇದರಿಂದ ದುರ್ಗುಣಗಳ ಸ್ಥಳವನ್ನೆಲ್ಲ ಸದ್ಗುಣಗಳು ವ್ಯಾಪಿಸುವವು; ಹಾಗು ದುಷ್ಟ ಮನೋವಿಕಾರಗಳು ಇಲ್ಲದಂತಾಗಿ ಉಚ್ಚ ಮನೋವೃತ್ತಿಗಳು ಜಾಗ್ರತವಾಗುವವು. ಯಾವ ಮನುಷ್ಯನು ಎರಡನೆಯವರ ಮೇಲೆ ತನ್ನ ಗೌರವವನ್ನು ಸ್ಥಾಪಿಸಬೇಕೆಂಬ ದಿಷ್ಟೇ ಅಲ್ಲದೆ, ಹೆಚ್ಚಿನ ಯಾವ ಉದ್ದೇಶವೂ ಇಲ್ಲದೆ ತನ್ನ ನಿಜವಾದ ಸ್ವಭಾವವನ್ನು ಕೆಲಕಾಲ ಒತ್ತಿಹಿಡಿಯುವನೋ ಅವನು ಡಾಂಭಿಕನೆಂಬದರಲ್ಲಿ ಸಂದೇಹವಿಲ್ಲ. ಅವನಿಗೆ ಆತ್ಮಸಂಯಮಿಯೆಂದು ಯಾರೂ ಅನ್ನಲಾರರು. ಕಲ್ಲಿದ್ದಲಿ ಮತ್ತು ನೀರುಗಳಿಂದ ಗ್ಯಾಸನ್ನೂ ಉಗಿಯನ್ನೂ ಹುಟ್ಟಿಸಿ ಯಾಂತ್ರಿಕನು ಯಾವ ಪ್ರಕಾರ ಸಾವಿರಾರು ಯಂತ್ರಗಳಿಗೆ ಗತಿ ಕೊಟ್ಟು ಮಾನವ ಸುಖಪ್ರಾಪ್ತಿಗೋಸ್ಕರ ಅವುಗಳನ್ನು ನಡೆಸು ವನೋ, ಅದರಂತೆ ಆತ್ಮಸಂಯಮಿಯಾದ ಮನುಷ್ಯನು ತನ್ನ ಕ್ಷುದ್ರಮನೋವೃತ್ತಿ ಗಳನ್ನು ಉತ್ತಮವಾಗಿಯೂ, ನೀತಿಯುಕ್ತವಾಗಿಯೂ ಮಾಡಿ ಅವುಗಳ ಮೂಲಕ ತನ್ನ ಹಾಗು ಜಗತ್ತಿನ ಸುಖವನ್ನು ಬೆಳೆಸುವದಕ್ಕೆ ಕಾರಣೀಭೂತನಾಗುತ್ತಾನೆ.

ಮನುಷ್ಯನು ಯಾವ ಮಾನದಿಂದ ಆತ್ಮಸಂಯಮನವನ್ನು ಮಾಡುವನೋ ಆ ಮಾನದಿಂದ ಅವನು ಸುಖಿಯೂ, ಜ್ಞಾನಿಯೂ, ಸತ್ಪುರುಷನೂ ಆಗುವನು. ಯಾವನು ತನ್ನ ವಿಚಾರಶಕ್ತಿಯ ಮೇಲೂ, ಕರ್ತೃತ್ವಶಕ್ತಿಯ ಮೇಲೂ ದುಷ್ಟವಿಕಾರಗಳ ವರ್ಚ ಸ್ಸನ್ನು ನಡೆಯಗೊಡುವನೋ ಅವನು ದುಃಖಿಯೂ, ಮೂರ್ಖನೂ, ಅಧಮನೂ ಆಗುವನು. ಯಾವನಿಗೆ ಆತ್ಮಸಂಯಮನವು ಸಾಧ್ಯವಾಗಿದೆಯೋ ಅವನು ತನ್ನ ಜೀವಿ ತಕ್ಕೂ, ಪರಿಸ್ಥಿತಿಗೂ, ಹಣೆಬರಹಕ್ಕೂ ಸ್ವಾಮಿಯಾಗುವನು. ಅವನು ಮನಸ್ಸಿನಲ್ಲಿದ್ದಂತೆ

ಮಾಡಿಸಿಕೊಳ್ಳುವನು. ಹೋದ ಹೋದಲ್ಲಿ ಅವನಿಗೆ ಸುಖವೇ ದೊರಕುವದು. ಇದರಂತೆ ಯಾವನು ಆತ್ಮಸಂಯಮನ ಮಾಡುವದಿಲ್ಲವೋ ಅವನ ಮೇಲೆ ಅವನ ಇಂದ್ರಿಯಗಳೂ, ಪರಿಸ್ಥಿತಿಯೂ, ಹಣೆಬರಹವೂ ಅಧಿಕಾರವನ್ನು ನಡೆಸಹತ್ತುವವು; ಮತ್ತು ಸಹಜವಾಗಿ ಉತ್ಪನ್ನವಾದ ವಾಸನೆಯನ್ನು ತೃಪ್ತಮಾಡಿಕೊಳ್ಳುವದು ಅವನಿಂದಾಗದಿದ್ದರೆ, ಅವನು ಹತಾಶನೂ, ದುಃಖಿಯೂ ಆಗುವನು. ಯಾಕಂದರೆ ಆತನ ಕ್ಷಣಿಕ ಸುಖದ ಸಂಪೂರ್ಣ ಅವಲಂಬನವು ಬಾಹ್ಯ ಉಪಾಧಿಗಳ ಮೇಲೆಯೇ ಇರುತ್ತದೆ.

ಈ ಸೃಷ್ಟಿಯಲ್ಲಿ ಪೂರ್ಣವಾಗಿ ನಷ್ಟಗೊಳಿಸಬಹುದಾದಂಥ ಇಲ್ಲವೆ ಸಮೂಲವಾಗಿ ಉಚ್ಛೇದಿಸಬಹುದಾದಂಥ ಶಕ್ತಿಯು ಇಲ್ಲವೇ ಇಲ್ಲ. ಕರ್ತೃತ್ವಶಕ್ತಿಯು ಸ್ವರೂಪವನ್ನು ಬದಲಿಸಬಹುದೇ ಹೊರತು ಅದನ್ನು ಸಮೂಲವಾಗಿ ನಾಶ ಮಾಡುವದು ಸಂಭವನೀಯವಲ್ಲ. ಸಜ್ಜನರಾಗಬೇಕೆಂದಿಚ್ಛಿಸುವವರು ಚಿರಕಾಲದಿಂದ ರೂಢವಾಗಿರುವ ದುಷ್ಟ ಚಟಗಳನ್ನು ಪೂರ್ಣವಾಗಿ ಬಿಟ್ಟುಬಿಟ್ಟರೆ ಮಾತ್ರ ಮುಂದಿನ ಮಾರ್ಗವು ಅವರಿಗೆ ಸುಲಭವಾಗುವದು. ಪುನರುಜ್ಜೀವನವಾಗಲಿ, ನವೀನತೆಯಾಗಲಿ ಪ್ರಾಪ್ತವಾಗಬೇಕಾದರೆ ಹಳೆಯದನ್ನು ಬಿಟ್ಟುಬಿಡಲಿಕ್ಕೆಬೇಕು. ಶರೀರಭೋಗದ ಇಚ್ಛೆಯನ್ನು ನಿಷೇಧಿಸಿ ಸುಖಲಾಲಸೆಯನ್ನೂ, ದುಷ್ಟವಿಚಾರಗಳನ್ನೂ ಕಡಿಮೆ ಮಾಡಿದಂತೆ ಉನ್ನತಿಯ ಮುಂದಿನ ಸೋಪಾನವು ಹಸ್ತಗತವಾಗುವದು. ಮನುಷ್ಯನನ್ನು ನಿರ್ಬಲವಾಗಿ ಮಾಡುವ ವಾಸನೆಗಳು ನಾಶ ಹೊಂದಿದಂತೆ ನವಜೀವನದಾಯಕವಾದ ಆನಂದವು ಪ್ರಾಪ್ತವಾಗುವದು. ಬೀಜವು ಕೊಳೆತು ಮೊಳಿಯೊಡೆದರೆ ಉತ್ತಮವಾದ ವೃಕ್ಷವಾಗುವದು. ಅಳಿಯು (ಭ್ರಮರವು) ಮರಣ ಹೊಂದಿದರೆ ಕುರಡೀಕುಠಾರವು ಜನ್ಮ ತಾಳುವದು.

ಈ ಪ್ರಕಾರದ ಸ್ಥಿತ್ಯಂತರವು ಕ್ಷಣಮಾತ್ರದಲ್ಲಿ ಉಂಟಾಗುವದಾಗಲಿ, ಸುಖದಿಂದ ಇಲ್ಲವೆ ಅನಾಯಾಸದಿಂದ ಸಂಭವಿಸುವದಾಗಲಿ ಶಕ್ಯವಲ್ಲ. ಯಾವದೊಂದು ವಸ್ತುವು ಬೆಳವಣಿಗೆಯನ್ನು ಹೊಂದಿ, ಅದಕ್ಕೆ ಪರಿಣಾಮಾವಸ್ಥೆಯು ಪ್ರಾಪ್ತವಾಗಬೇಕಾದರೆ, ತಕ್ಕ ಪ್ರಯತ್ನವೂ ಸಹಿಷ್ಣುತೆಯೂ ಅವಶ್ಯವಾಗಿ ಬೇಕು. ಉನ್ನತಿಯ ಮಾರ್ಗದಲ್ಲಿ ಪ್ರತಿಬಂಧಕಗಳೂ, ಸಂಕಟಗಳೂ ಇದ್ದೇ ಇರುತ್ತವೆ. ಇವುಗಳಿಗೆಲ್ಲ ಎದೆಗೊಟ್ಟು ಉನ್ನತಿಯನ್ನು ಮಾಡಿಕೊಂಡರೇ ಅದು ಸ್ಥಿರವಾಗಿ ಉಳಿಯುತ್ತದೆ. ಪ್ರತಿಬಂಧಕಗಳು ಇಲ್ಲದಂತಾಗುತ್ತವೆ; ಸಂಕಟಗಳಾದರೂ ಕ್ಷಣಿಕವಾಗಿಯೇ ಇರುತ್ತವೆ. ದೃಢಮೂಲವಾದ ಯಾವದೊಂದು ಚಟವನ್ನಾಗಲಿ, ಸತತಾಭ್ಯಾಸದಿಂದ ನಡೆದುಬಂದಂಥ ದುಷ್ಟ ಪ್ರವೃತ್ತಿಯನ್ನಾಗಲಿ ಬಿಟ್ಟುಬಿಟ್ಟು ಉತ್ತಮವಾದ ಚಟಗಳನ್ನೂ, ಸದ್ಗುಣ ಪ್ರವೃತ್ತಿಗಳನ್ನೂ ಧಾರಣ ಮಾಡುವದು ಸಾಮಾನ್ಯವಾದದ್ದಲ್ಲ. ಇದರಿಂದ ಮನಸ್ಸಿನಲ್ಲಿ ಅನೇಕ ಪ್ರಕಾರದ ತರಂಗಗಳ ತಾಕಲಾಟವು ಉದ್ಭವಿಸುತ್ತದೆ. ಅದರೊಳಗಿಂದ ಪಾರಾಗಲಿಕ್ಕೆ ದೃಢ ನಿಶ್ಚಯವೂ, ಧೈರ್ಯವೂ ಅತ್ಯವಶ್ಯವಾಗಿ ಬೇಕಾಗುತ್ತವೆ. ಇದರಿಂದಲೇ ಎಷ್ಟೋ ಜನರು ಧೈರ್ಯಬಿಟ್ಟು ಪುನಃ ತಮ್ಮ ಮೊದಲಿನ ವರ್ತನಕ್ರಮವನ್ನು ಆಶ್ರಯಿಸುತ್ತಾರೆ.

ಅವರಿಂದ ಆತ್ಮಸಂಯಮನ ಮಾಡುವದಾಗುವದಿಲ್ಲ. ಆದರಿಂದ ಅವರು ಅದು ಬಹಳ ಕಠಿಣವಾದದ್ದೂ, ದುಃಸಾಧ್ಯವಾದದ್ದೂ ಎಂದು ನುಡಿದುಬಿಡುತ್ತಾರೆ. ಈ ಪ್ರಕಾರ ಅವರು ಆತ್ಮೋದ್ಧಾರದ ಕಾರ್ಯವನ್ನು ನಡೆಸಲಾರದವರಾಗಿ ಅಕ್ಷಯಸುಖಪ್ರಾಪ್ತಿಗೆ ಎರವಾಗುತ್ತಾರೆ.

ಷಡ್ರಿಪುಗಳ ಸೇವೆಯಲ್ಲಿಯೇ ಮಗ್ನನಾಗಿ ಅದರಲ್ಲಿಯೇ ಸುಖಸರ್ವಸ್ವವಿರುವ ದೆಂಬ ಜನರಿಗೆ ಆತ್ಮಸಂಯಮನ ಮಾಡದೆ ಇರುವದರಿಂದ ಆವ ಸುಖವು ದೊರೆಯು ವದೋ ಅವರಿಗೆ ಗೊತ್ತು ! ಅವರು ಆತ್ಮಸಂಯಮನ ಮಾಡಿದರೆ ಅವರಿಗೆ ಸುಖಪ್ರಾಪ್ತಿ ಯಾಗುವದಿಲ್ಲ. ಮನುಷ್ಯನ ಸ್ವಂತದ ಮೇಲಿನ ಸತ್ತೆಯು ಕಡಿಮೆ ಕಡಿಮೆಯಾಗುತ್ತ ಹೋದಂತೆ— ಅಂದರೆ ಅವನು ಸ್ವೈರವರ್ತನದವನಾಗುತ್ತ ನಡೆದಂತೆ ನಿಜವಾದ ಸುಖಕ್ಕೆ ಎರವಾಗುತ್ತಾನೆ; ಮತ್ತು ಅವನು ಕೇವಲ ದುಃಖಿಯೂ, ದುರಾಚಾರಿಯೂ ಆಗಿ ಅವೆಲ್ಲವುಗಳ ಪರಿಪಾಕದಿಂದ ಸ್ವಂತ ಮನಸ್ಸಿನ ಮೇಲೆ ಸ್ವಲ್ಪವೂ ಅಧಿಕಾರ ನಡೆಸ ಲಾರದ ಹುಚ್ಚನ ಅವಸ್ಥೆಯನ್ನು ಹೊಂದುತ್ತಾನೆ. ಆದರೆ ಅವನು ಆತ್ಮಸಂಯಮನ ವನ್ನು ಮಾಡಿದಂತೆ ನಿಜವಾದ ಸೌಖ್ಯವನ್ನು ಹೊಂದುವನಲ್ಲದೆ, ಆನಂದವನ್ನೂ ಸಾಮರ್ಥ್ಯವನ್ನೂ ಪ್ರಾಪ್ತಮಾಡಿಕೊಳ್ಳುವನು. ಈ ಪ್ರಕಾರ ದೈವೀ ಸಂಪತ್ತಿಯುಕ್ತ ನಾದವನಿಗೆ ಅಖಂಡ ಕಲ್ಯಾಣವಾಗುವದು.

ಆತ್ಮಸಂಯಮನ ಹಾಗು ಸುಖ ಇವು ಹೇಗೆ ಪರಸ್ಪರಾವಲಂಬಿಗಳಾಗಿರುವವು, ಇಲ್ಲವೆ ಹೇಗೆ ಏಕಜೀವವಾಗಿರುವವು, ಎಂಬದು ಒಮ್ಮೆ ಧ್ಯಾನದಲ್ಲಿ ಬಂತೆಂದರೆ, ಸ್ವೈರ ಪ್ರವೃತ್ತಿಯಿಂದ ಯಾವತರದ ಹಾನಿಯಾಗುವದು ? ಹಾಗು ನಿಜವಾದ ಸುಖವು ಆದ ರಿಂದ ಹೇಗೆ ಮಣ್ಣುಪಾಲಾಗುವದು, ಇವೇ ಮೊದಲಾದ ಸಂಗತಿಗಳು ಜಗತ್ತಿನ ಸಹಜ ನಿರೀಕ್ಷಣದಿಂದ ತಿಳಿದುಬರುತ್ತವೆ. ಆದರಂತೆ ಸ್ತ್ರೀಪುರುಷರ ಚರಿತ್ರಗಳನ್ನು ಸೂಕ್ಷ್ಮ ವಾಗಿ ಅವಲೋಕಿಸಿದರೆ, ಅವಿಚಾರದಿಂದ ಉಚ್ಚರಿಸಲ್ಪಟ್ಟ ಒಂದೇ ಒಂದು ಶಬ್ದ, ಹೃದಯಭೇದಕವಾದ ಕೃತಕ ಭಾಷಣ, ಕಪಟದ ವರ್ತನ, ಅಂಧಶ್ರದ್ಧೆ, ಮೂರ್ಖತನ ದಿಂದ ಮಾಡಿದ ಪ್ರತೀಕಾರ ಇವೆಲ್ಲವೂ ಸರ್ವ ಪ್ರಕಾರದ ದುಃಖಕ್ಕೂ— ಒಮ್ಮೊಮ್ಮೆ ಸರ್ವಸ್ವನಾಶಕ್ಕೂ ಕಾರಣೀಭೂತವಾಗುತ್ತವೆಂಬದು ಕಂಡುಬರುತ್ತದೆ. ಆದರಂತೆಯೇ ತಮ್ಮ ಪೂರ್ವಚರಿತ್ರವನ್ನು ಅವಲೋಕನ ಮಾಡಿದರೆ, ಆತ್ಮಸಂಯಮನದ ಅಭಾವದಿಂದ ಎಷ್ಟೋ ಪ್ರಕಾರದ ಉದ್ವೇಗವನ್ನೂ, ಮನಸ್ತಾಪವನ್ನೂ, ದುಃಖವನ್ನೂ, ಚಿಂತೆ ಯನ್ನೂ ನಾವು ಉಪಭೋಗಿಸಿದ್ದೇವೆಂಬದು ತಿಳಿದುಬರುತ್ತದೆ.

ಅವಸರದಿಂದಲೂ ಸ್ವಾರ್ಥಪರತ್ವದಿಂದಲೂ ಕೆಲಸ ಮಾಡಿದರೆ ಉಂಟಾಗುವ ಫಲ ಪ್ರಾಪ್ತಿಗಿಂತಲೂ ಅದೇ ಕೆಲಸವನ್ನು ಶಾಂತತನದಿಂದಲೂ ನಿಃಸ್ವಾರ್ಥಬುದ್ಧಿಯಿಂದಲೂ ಮಾಡುವದರಿಂದೊದಗುವ ಯಶಃಪ್ರಾಪ್ತಿಯು ಬಹಳೇ ಉತ್ತಮತರದ್ದಿರುತ್ತದೆ. ಸೃಷ್ಟಿಗೆ ಅವಸರದ ವರ್ತನವು ಸರಿಬರುವದಿಲ್ಲ. ಸೃಷ್ಟಿಯಲ್ಲಿ ಯಾವತ್ತು ವಿಷಯಗಳಿಗೆ ಯೋಗ್ಯ

ಕಾಲದಲ್ಲಿ ಪೂರ್ಣತ್ವವು (ಪೂರ್ಣಾವಸ್ಥೆಯು) ಪ್ರಾಪ್ತವಾಗುವದು. ಸತ್ಯವು ಸುಲಭವಾಗಿ ವಶವಾಗತಕ್ಕದ್ದಲ್ಲ. ಆದಕ್ಕೆ ಕೆಲವು ನಿಯಮಗಳಿದ್ದು ಅವುಗಳನ್ನು ಪಾಲಿಸಬೇಕಾಗುವದು. ಅವಿವೇಕ ಮತ್ತು ಕ್ರೋಧ ಇವುಗಳಿಗಿಂತ ಗರ್ಹ್ಯವಾದವುಗಳು ಯಾವವೂ ಇಲ್ಲ. ಬಾಹ್ಯವಸ್ತುಗಳ ಮೇಲೆ ಸಂಪೂರ್ಣ ಅಧಿಕಾರವು ನೆಲೆಗೊಳ್ಳುವ ಸಂಭವವಿಲ್ಲ. ಆದರೆ ಆತ್ಮದಮನ ಮಾಡುವದು ನಮ್ಮ ಕೈಯೊಳಗಿನ ಮಾತೆಂಬದನ್ನು ಪ್ರತಿಯೊಬ್ಬನು ಲಕ್ಷ್ಯದಲ್ಲಿಡಬೇಕು. ಎರಡನೆಯವರ ಇಚ್ಛಾಶಕ್ತಿಯನ್ನು ಬಗ್ಗಿಸುವದು ನಮಗೆ ಸಾಧ್ಯವಲ್ಲ. ಆದರೆ ನಮ್ಮ ಇಚ್ಛಾಶಕ್ತಿಯನ್ನು ಮಾತ್ರ ಬೇಕಾದ ಕಡೆಗೆ ತಿರುಗಿಸಿ ಅದನ್ನು ನಿಯಂತ್ರಿತವಾಗಿ ಮಾಡಬಹುದು. ಯಾವನು ಸತ್ಪಕ್ಷಪಾತಿಯೋ ಅವನಿಗೆ ಎಲ್ಲ ವಸ್ತುಗಳು ಅನುಕೂಲವಾಗುವವು; ಯಾವನು ಆತ್ಮಸಂಯಮಿಯೋ ಅವನ ಉಪದೇಶವನ್ನು ಜನರೆಲ್ಲರೂ ಆದರದಿಂದ ಗ್ರಹಣ ಮಾಡುತ್ತಾರೆ.

ಯಾವನು ತೀರ ಬಿಕ್ಕಟ್ಟಿನ ಪ್ರಸಂಗದಲ್ಲಿ ಸಹ ಆತ್ಮಸಂಯಮನ ಮಾಡಲು ಶಕ್ತನಾಗುವದಿಲ್ಲವೋ, ಅವನು ಎರಡನೆಯವರಿಗೆ ಮಾರ್ಗದರ್ಶಕನಾಗುವದೂ, ಎರಡನೆಯವರ ಮೇಲೆ ತನ್ನ ಗೌರವವನ್ನು ಕೂಡಿಸುವದೂ ಅಸಂಭವವೇ. ತೀರ ಸಾಮಾನ್ಯವಾದ ಹಾಗು ತ್ರಿಕಾಲಾಬಾಧಿತವಾದ ಈ ಸತ್ಯ ಸಂಗತಿಯನ್ನು ಎಷ್ಟೋ ಜನರು ತಿಳಿದಿರುವದಿಲ್ಲ. ಕಾನಫ್ಯೂಶಿಯಾಸನ ರಾಜಕೀಯ ಹಾಗು ನೈತಿಕ ಉಪದೇಶದೊಳಗಿನ ಮುಖ್ಯವಾದ ಸೂತ್ರವು ಯಾವದೆಂದರೆ– "ಯಾವನು ಎರಡನೆಯವರ ಮೇಲೆ ತನ್ನ ಗೌರವವನ್ನು ಕೂಡ್ರಿಸಲಿಚ್ಛಿಸುವನೋ ಅವನು ಆತ್ಮನಿಗ್ರಹ ಮಾಡುವದನ್ನು ಕಲಿಯಬೇಕು" ಎಂಬದು. ಅಲ್ಪವಾದ ಪ್ರಸಂಗದಿಂದಲೇ ಯಾವನು ದೇಹಭಾನವಿಲ್ಲದಂತಾಗುವನೋ, ಮತ್ತು ಸಂಶಯಗ್ರಸ್ತನಾಗಿ ನಿಷ್ಕಾರಣವಾದ ಬೈಗಳುಗಳ ಮಳೆಯನ್ನು ಸುರಿಸಹತ್ತುವನೋ, ಅಂತಹನಿಂದ ಮಹತ್ವದ ಅಥವಾ ಶ್ರೇಷ್ಠ ಪ್ರಕಾರದ ಕಾರ್ಯಗಳು ಎಂದೂ ಮಾಡಲ್ಪಡಲಾರವು. ಮತ್ತು ಇಂತಹ ಜನರಿಗೆ ತಮ್ಮ ಸಂಸಾರದಲ್ಲಾಗಲಿ, ಸ್ವೀಕೃತ ಉದ್ಯೋಗದಲ್ಲಾಗಲಿ ಯಶಃಪ್ರಾಪ್ತಿಯು ಎಂದೂ ಆಗುವದೇ ಇಲ್ಲ. ಆತ್ಮಸಂಯಮನದ ಅಭಾವವೇ ಮೂರ್ಖತನವೆಂದಮೇಲೆ ಜಾಣತನದ ಮುಂದೆ ಮೂರ್ಖತನದ ಆಟವು ಹೇಗೆ ಸಾಗಬೇಕು?

ಯಾವನು ಚಂಚಲತರವಾದ ಹಾಗು ಉಚ್ಛೃಂಖಲವಾದ ತನ್ನ ವಿಚಾರಗಳನ್ನು ನಿಗ್ರಹಿಸಿ ಅವುಗಳನ್ನು ಹಾದಿಗೆ ತರುವ ಯತ್ನ ಮಾಡುವನೋ, ಅವನಿಗೆ ಉತ್ತರೋತ್ತರವಾಗಿ ಜಾಣತನವು ಪ್ರಾಪ್ತವಾಗಹತ್ತುತ್ತದೆ. ಅವನಿಗೆ ಒಮ್ಮೆಲೆ ಸುಖಸರ್ವಸ್ವವು ಪ್ರಾಪ್ತವಾಗದೆ ಇದ್ದರೂ, ಆತನು ತನ್ನ ಸುಖದ ಅಸ್ತಿವಾರವನ್ನು ಹಾಕಿಕೊಳ್ಳುತ್ತಾನೆಂದು ಹೇಳಲು ಪ್ರತ್ಯವಾಯವಿಲ್ಲ. ಕ್ರಮದಿಂದ ಆತನ ಪ್ರಗತಿಯಾಗಹತ್ತಿತೆಂದರೆ ಒಂದಿಲ್ಲೊಂದು ದಿನ ಅವನು ಪೂರ್ಣವಾದ ಸುಖೋಪಭೋಗವನ್ನು ಪಡೆದೇಪಡೆಯುವನು; ಆತ್ಮ ಸಂಯಮನದಿಂದಲೇ ಜ್ಞಾನದ ಉತ್ಪತ್ತಿಯು; ಮತ್ತು

ಜ್ಞಾನವೇ ಸುಖಶಾಂತಿಗಳ ಮೂಲವು. ಆತ್ಮಸಂಯಮನ ಮಾಡುವದೆಂದರೆ ವ್ಯರ್ಥವಾದ ಹಾನಿಯಾಗಲಿ, ಶುಷ್ಕವಾದ ಅಲ್ಲದ ವ್ಯಾಪಾರವಾಗಲಿ ಅಲ್ಲ. ಆತ್ಮಸಂಯಮನದಿಂದ ಹಲಕೆಲವು ವಿಷಯಗಳನ್ನು ತ್ಯಾಗ ಮಾಡಬೇಕಾಗುವದೆಂಬದು ನಿಜ; ಆದರೆ ಆ ತ್ಯಾಗವು ಅವಿನಾಶಿಯಾದ ಹಾಗು ಸತ್ಯವಾದ ವಿಷಯಗಳ ಪ್ರಾಪ್ತಿಗೋಸ್ಕರವಾಗಿ ಮಾಡಲ್ಪಡುವದಲ್ಲದೆ, ಕ್ಷಣಭಂಗುರವಾದ ಹಾಗು ಅಸತ್ಯವಾದ ವಿಷಯಗಳ ದೂರೀಕರಣಕ್ಕಾಗಿ ಮಾಡಲ್ಪಡುವದು. ಸುಖೋಪಭೋಗಕ್ಕೆ ಪೂರ್ಣವಾಗಿ ತಿಲಾಂಜಲಿಯನ್ನು ಕೊಡಬೇಕೆಂಬಂತಲ್ಲ. ಇಷ್ಟೇ ಅಲ್ಲ; ಒಂದು ದೃಷ್ಟಿಯಿಂದ ಅವು ವೃದ್ಧಿಂಗತವಾಗುತ್ತಿರುತ್ತವೆ. ಜೀವಿತವೆಂದರೇ ಸುಖೋಪಭೋಗವೆನ್ನಲು ಅಡ್ಡಿಯಿಲ್ಲ. ಆದರೆ ಸುಖೋಪಭೋಗದ ಅನಿವಾರವಾದ ತೃಷ್ಣೆಯೇ ಹಾನಿಗೆ ಕಾರಣೀಭೂತವಾಗುತ್ತದೆ. ನಿತ್ಯದಲ್ಲಿಯೂ ಹೊಸ ಹೊಸ ಪ್ರಕಾರದ ಸುಖೋಪಭೋಗಗಳ ಇಚ್ಛೆಯನ್ನು ಮಾಡುವವನಿಗಿಂತಲೂ ಹೆಚ್ಚಾದ ದುಃಖಿಯು ಅದಾವನಿರುವನು ? ಅದರಂತೆ ಯಾವನು ಆತ್ಮಸಂಯಮನದಿಂದ ನಿತ್ಯತೃಪ್ತನೂ, ಶಾಂತನೂ, ಜ್ಞಾನಿಯೂ ಆಗಿರುವನೋ ಅವನಂತಹ ಭಾಗ್ಯವಂತನು ಅದಾವನಿರುವನು ? ಅತ್ಯಾಹಾರಿಯೂ ಮದ್ಯಪಾನಿಯೂ ಕೇವಲ ವಿಷಯೋಪಭೋಗಕ್ಕಾಗಿಯೇ ಜೀವಿತವನ್ನುಪಯೋಗಿಸುವವನೂ ಆದವನಿಗೆ ಪ್ರಕೃತಿಸ್ವಾಸ್ಥ್ಯವು ಚನ್ನಾಗಿ ದೊರೆಯಬಹುದೋ ? ಅಥವಾ ಆಹಾರ ವಿಹಾರಗಳಲ್ಲಿ ಮಿತಿಯುಳ್ಳವನಿದ್ದು ದೇಹಧರ್ಮಪಾಲನೆಗೆ ಅವಶ್ಯವಾದ ವಿಷಯಗಳನ್ನುಪಭೋಗಿಸುವಂಥವನಿಗೆ ಹೆಚ್ಚಾಗಿ ದೊರೆಯಬಹುದೋ ?

ಒಂದು ಸಮಯದಲ್ಲಿ ಒಬ್ಬ ಗೃಹಸ್ಥನು ರಸರಸಿತವಾದ ಒಂದು ಸೇಬುಹಣ್ಣನ್ನು ತಿನ್ನುತ್ತಿದ್ದಾಗ ಇನ್ನೊಬ್ಬನು ಅದನ್ನು ಕಂಡು ನುಡಿದನೇನಂದರೆ— "ಇಂತಹ ಅಮೃತ ತುಲ್ಯವಾದ ಫಲವನ್ನು ಸೇವಿಸುವದು ನನಗೆ ಸಾಧ್ಯವಿದ್ದರೆ ನಾನು ಒಳ್ಳೇ ಭಾಗ್ಯವಂತನೆಂದು ತಿಳಿಯುತ್ತಿದ್ದೆನು."

ಅದಕ್ಕೆ ಆ ಗೃಹಸ್ಥನು—"ಯಾಕಪ್ಪಾ ! ಹೀಗೇಕೆ ನುಡಿಯುತ್ತೀ ?"

ಎರಡನೆಯವ :— "ಏನು ಹೇಳಲಪ್ಪಾ, ಯಥೇಚ್ಛವಾಗಿ ಮದ್ಯವನ್ನು ಕುಡಿದು ತಂಬಾಕು ಸೇದಿದ ಮೂಲಕ ನನ್ನ ನಾಲಿಗೆಯು ಇಂತಹ ಫಲದ ರುಚಿಯನ್ನು ತಿಳಿಯಲು ಅಶಕ್ತವಾಗಿದೆ."

ಭ್ರಾಮಕ ಸುಖದ ಲಾಲಸೆಯಿಂದ ಮನುಷ್ಯನು ಆಯುಷ್ಯದೊಳಗಿನ ಅವಿನಾಶಿಯಾದ ಸುಖಕ್ಕೆ ಎರವಾಗುತ್ತಾನೆಂಬದು ಸ್ಪಷ್ಟವೇ ಇದೆ.

ಇಂದ್ರಿಯದಮನ ಮಾಡಿದಂತೆ ಆರೋಗ್ಯ, ಸೌಖ್ಯ ಹಾಗು ಶಕ್ತಿಗಳು ಪ್ರಾಪ್ತವಾಗಹತ್ತುತ್ತವೆ. ಮತ್ತು ಯಾವನು ತನ್ನ ವಿಚಾರಗಳನ್ನು ನಿಯಂತ್ರಿತವಾಗಿ ಮಾಡುತ್ತಾನೋ ಅವನಿಗೆ ಪಾರಮಾರ್ಥಿಕ ದೃಷ್ಟಿಯಿಂದ ಅತ್ಯಂತ ಕಲ್ಯಾಣವಾಗಿ ಅವಿನಾಶಿ

ಯಾದ ಆನಂದವೂ ಸಾಮರ್ಥ್ಯವೂ ಪ್ರಾಪ್ತವಾಗುತ್ತವೆ. ಆತ್ಮಸಂಯಮನದಿಂದ ಕೇವಲ ಸೌಖ್ಯವಷ್ಟೇ ಲಭಿಸುತ್ತದೆಂತಲ್ಲ; ಜ್ಞಾನವಿಜ್ಞಾನಗಳೂ ಅದರಿಂದ ಪ್ರಾಪ್ತವಾಗುತ್ತವೆ. ಅಜ್ಞಾನ ಹಾಗು ಅಹಂಭಾವಗಳ ಬಾಗಿಲುಗಳು ಇಕ್ಕುತ್ತ ನಡೆದಂತೆ, ಜ್ಞಾನ ಹಾಗು ವಿವೇಕದ ದ್ವಾರಗಳು ತೆರೆಯುತ್ತ ಹೋಗುತ್ತವೆ. ಸದ್ಗುಣವು ನೆಲೆಗೊಂಡಷ್ಟು ಜ್ಞಾನವು ಪ್ರಾಪ್ತವಾಯಿತೆಂದು ತಿಳಿಯಬೇಕು. ಯಾವನ ಮನಸ್ಸು ಜ್ಞಾನಯುಕ್ತವಾಯಿತೋ ಅದು ಶುದ್ಧವಾಯಿತೆಂದು ತಿಳಿಯಬೇಕು. ಯಾವನಿಗೆ ಆತ್ಮಸಂಯಮನವು ಸಾಧ್ಯವಾಯಿತೋ ಅವನ ಜೀವಿತವು ಸಫಲವಾಯಿತೆಂದು ಭಾವಿಸಬೇಕು.

ಎಷ್ಟೋ ಜನರು ಸದ್ಗುಣವು ಏಕದೇಶೀಯವಾಗಿರುತ್ತದೆಂದು ಅನ್ನುತ್ತಾರೆ. ಆದರೆ ಮನುಷ್ಯನು ವಸ್ತುತಃ ಯಾವ ವಿಷಯವನ್ನು ಬಿಟ್ಟುಕೊಡುವನೋ, ಅದನ್ನು ಅವನು ಅದರ ವಿಷಯವಾಗಿ ಮನಃಪೂರ್ವಕ ತಿರಸ್ಕಾರವು ಉತ್ಪನ್ನವಾದುದರಿಂದ ಬಿಟ್ಟಿಲ್ಲವೆಂದೂ, ಅರ್ಥಾತ್ ಆ ವಿಷಯವಾಗಿ ಅವನ ಮೂಲ ಇಚ್ಛೆಯು ನಷ್ಟವಾಗಿಲ್ಲವೆಂದೂ ಕಂಡು ಬರುವವರೆಗೆ ಅವನಲ್ಲಿ ಸದ್ಗುಣಗಳು ನೆಲೆಗೊಂಡಿವೆಯೆಂದು ಹೇಗೆ ಅನ್ನಬೇಕು? ಈ ದೃಷ್ಟಿಯಿಂದ ಒಂದು ವೇಳೆ ಸದ್ಗುಣಗಳ ಏಕದೇಶೀಯತೆಯನ್ನು ಒಪ್ಪಬಹುದು. ನಿಜವಾದ ನಿಗ್ರಹಿಯು ವಿಷಯೋಪಭೋಗಗಳನ್ನು ಕೇವಲ ತ್ಯಜಿಸುವನೆಂತಲ್ಲ; ಆದರೆ ತದ್ವಿಷಯಕವಾದ ವಾಸನೆಗಳನ್ನು ಅವನು ಸಂಪೂರ್ಣವಾಗಿ ನಿರ್ಮೂಲ ಮಾಡುವನು. ಅವನ ದೃಷ್ಟಿಯು ಉನ್ನತಿಯ ಮಾರ್ಗದ ಮೇಲೆ ಇರುತ್ತದೆ. ಅವನು ಹಿಂದೆಗೆಯಬೇಕಾದ ಪ್ರಸಂಗವೇ ಬಹುತರ ಬರುವದಿಲ್ಲ. ಈ ಪ್ರಕಾರ ನವೀನ ಐಶ್ವರ್ಯ, ನವೀನ ತೇಜ, ಮತ್ತು ಶ್ರೇಷ್ಠ ಆನಂದ ಇವುಗಳ ದ್ವಾರಗಳು ಅವನಿಗೆ ಮಾರ್ಗ ಕೊಡುತ್ತವೆ.

ಆತ್ಮಸಂಯಮನದ ಯೋಗದಿಂದಾಗುವ ಉನ್ನತಿಯನ್ನು ನೋಡಿ ನಾವು ಆಶ್ಚರ್ಯಚಕಿತರಾಗುತ್ತೇವೆ. ಸತ್ಯದ ವಿಕಾಸವನ್ನು ನೋಡಿ ಮನಸ್ಸು ಆಶ್ಚರ್ಯ ಚಕಿತವಾಗುತ್ತದೆ. ಆತ್ಮಸಂಯಮನದಿಂದಾಗುವ ಆನಂದದ ಶ್ರೇಷ್ಠತ್ವವು ಮನಸ್ಸಿನಲ್ಲಿ ಬಂದು ಅತ್ಯಂತ ಸಮಾಧಾನವಾಗುತ್ತದೆ. ಅದರ ಯೋಗದಿಂದ ಪ್ರಾಪ್ತವಾಗುವ ಶಾಂತಿಯಿಂದಲೂ, ಐಶ್ವರ್ಯದಿಂದಲೂ ನಾವು ಆನಂದಸಾಗರದಲ್ಲಿ ಓಲಾಡಹತ್ತುತ್ತೇವೆ.

ಆತ್ಮಸಂಯಮನದ ಪ್ರಯತ್ನದಲ್ಲಿ ವಿಜಯವು ಪ್ರಾಪ್ತವಾದರೆ, ದೊಡ್ಡ ಯುದ್ಧದಲ್ಲಿ ಗೆಲುವನ್ನು ಪಡೆದಷ್ಟು ಸಮಾಧಾನವಾಗುತ್ತದೆ. ಅದರಂತೆಯೇ ವಿಕಸಿತವಾಗುವ ಹಾಗು ವೃದ್ಧಿಯನ್ನೈದುವ ಸಾಮರ್ಥ್ಯದ ತಿಳುವಳಿಕೆಯುಂಟಾಗುತ್ತದೆ. ದೈವೀ ಜ್ಞಾನ ಪ್ರಾಪ್ತಿಯೆಂಬ ಅವಿನಾಶಿಯಾದ ಸಂಪತ್ತಿಯು ಲಭಿಸುತ್ತದೆ. ಮತ್ತು ಮಾನವ ಜಾತಿಯ ಕಲ್ಯಾಣಕ್ಕಾಗಿ ಪ್ರಯತ್ನ ಮಾಡುವ ಸಾಮರ್ಥ್ಯವು ಪ್ರಾಪ್ತವಾಗಿ ಅದರಿಂದ ಅಕ್ಷಯವಾದ ಆನಂದವುಂಟಾಗುತ್ತದೆ. ಆತ್ಮಸಂಯಮನವನ್ನು ಸ್ವಲ್ಪ ಮಟ್ಟಿಗಾದರೂ ಸಾಧ್ಯಮಾಡಿಕೊಂಡವನಿಗೆ ಸಾಮರ್ಥ್ಯ, ಯಶಸ್ಸು ಹಾಗು ಆನಂದ ಅವು ಹೇಗೆ ಲಭಿಸು

ವವ್ರೋ ಇಷ್ಟೂ ಕೂಡ ಅವಿವೇಕಿಯೂ ಅನುದ್ಯೋಗಿಯೂ ಆದವನಿಗೆ ಎಂದೂ ಪ್ರಾಪ್ತ ವಾಗುವದಿಲ್ಲ. ಮತ್ತು ಯಾವನು ಸಂಪೂರ್ಣವಾಗಿ ಆತ್ಮಸಂಯಮನವನ್ನು ಸಾಧ್ಯ ಮಾಡಿಕೊಂಡಿರುವನೋ, ಅವನು ಸರ್ವಥಾ ಮುಕ್ತನೇ ಆಗುವನು; ಅವನ ಯಾವತ್ತೂ ಸಂಕಟಗಳು ನಾಶವಾಗಿ ದುಃಖದ ಹೆಸರು ಕೂಡ ಇಲ್ಲದಂತಾಗುವದು; ಅವನು ಸರ್ವೈಶ್ವರ್ಯಸಂಪನ್ನನಾಗಿ, ಆನಂದಾತಿಶಯದಿಂದ ವಿಶ್ವಾವಲೋಕನವನ್ನು ಮಾಡ ತೊಡಗಿ ಅಖಂಡಸುಖಾಸ್ವಾದನವನ್ನು ತಕ್ಕೊಳ್ಳುತ್ತ ಕಾಲಕ್ಷೇಪ ಮಾಡುವನು.

# ೫. ನಿರುಪಾಧಿತ್ವ ಮತ್ತು ಮುಕ್ತಿ

ಶರೀರದ ಮೇಲೆ ಭಾರವನ್ನು ಹಾಕಿದರೆ ಆಗಿನ ಸ್ಥಿತಿಯು ಹೇಗಾಗುತ್ತದೆಂಬದೂ, ಆ ಭಾರವನ್ನು ತೆಗೆದ ಕೂಡಲೆ ಹೇಗೆನಿಸುತ್ತದೆಂಬದೂ ಪ್ರತಿಯೊಬ್ಬನಿಗೂ ಗೊತ್ತಿದ್ದ ಸಂಗತಿಯಾಗಿದೆ. ಅದರಂತೆ ನಾನಾಪ್ರಕಾರದ ವಾಸನೆಗಳು, ಪರಸ್ಪರ ವಿರೋಧವಾದ ಅಸಂಖ್ಯ ಮತಗಳು, ಮತ್ತು ಅನೇಕ ತರದ ಮನೋರಥಗಳು ಇವುಗಳ ಭಾರವನ್ನು ಹೊತ್ತುಕೊಂಡ ಜೀವಿತವು ಉತ್ತಮವಾದದ್ದೋ, ಅಥವಾ ಯಾವನ ಇಚ್ಛೆಯು ದೇಹಧರ್ಮಪಾಲನೆಗೆ ಅವಶ್ಯವಿದ್ದಷ್ಟು ಮಾತ್ರ ಇರುವದೋ, ತನ್ನ ಅಸ್ತಿತ್ವದ ಉದ್ದೇಶವನ್ನು ಕುರಿತು ಯಾವನು ಶಾಂತರೀತಿಯಿಂದ ವಿಚಾರಮಾಡುವನೋ, ಮತ್ತು ಯಾವನು ವಿತಂಡವಾದ ಹಾಗು ಮನೋರಾಜ್ಯಗಳಿಗೆ ಅವಕಾಶವನ್ನು ಕೊಡದೆ ಇರುವನೋ ಅಂತಹನ ಜೀವಿತಕ್ರಮವು ಉತ್ತಮವಾದದ್ದೋ ಎಂಬದು ಪ್ರತಿಯೊಬ್ಬನ ಅನುಭವಕ್ಕೂ ಬಹುಶಃ ಬಂದೇ ಬಂದಿರುತ್ತದೆ.

ಎಷ್ಟೋ ಜನರ ಮನೆಗಳೂ, ಕಪಾಟುಗಳೂ ಮೊದಲಾದವುಗಳು ಅಸಂಖ್ಯವಾದ ಅಪ್ರಯೋಜಕ ವಸ್ತುಗಳಿಂದ ತುಂಬಿ ಹೋಗಿರುವದು ನಮ್ಮ ದೃಷ್ಟ್ಯೋತ್ಪತ್ತಿಗೆ ಬರುತ್ತದೆ. ಎಷ್ಟೋ ಜನರಿಗೆ ಈ ಪ್ರಕಾರದ ವಸ್ತುಗಳನ್ನು ಕೂಡಿಹಾಕುವ ವಿಷಯವಾಗಿ ಇದ್ದ ಅನಿವಾರವಾದ ಇಚ್ಛೆಯ ಮೂಲಕ ಅವರ ಮನೆಯೊಳಗಿನ ಕಸವನ್ನು ಸಹ ಗುಡಿಸಲಿಕ್ಕೆ ಬಾರದಷ್ಟು ವಸ್ತುಗಳನ್ನು ಅವರು ತುಂಬಿರುತ್ತಾರೆ. ಆದುದರಿಂದ ಇಲಿ, ಹೆಗ್ಗಣ ಮೊದಲಾದ ಪ್ರಾಣಿಗಳಿಗೆ ಒಳ್ಳೇ ಆಸ್ಪದವಾಗುವದು. ಇನ್ನು ಈ ವಸ್ತುಗಳಿಂದ ಏನಾದರೂ ಪ್ರಯೋಜನವುಂಟೆಂದು ಹೇಳಬೇಕೇ ಅದೂ ಇಲ್ಲ. ಆದರೂ ಅವನ್ನು ತೆಗೆದು ಹಾಕುವದು ಮಾತ್ರ ಅವರ ಜೀವದ ಸುತ್ತು ಬರುತ್ತದೆ. ಅವನ್ನೆಲ್ಲ ತೆಗೆದು ಹಾಕಿದರೆ ಮನೆಯು ಸ್ವಚ್ಛವಾಗುವದಲ್ಲದೆ, ಮೇಲೆ ಹೇಳಿದ ಪ್ರಾಣಿಗಳ ತೊಂದರೆಯಾದರೂ ತಪ್ಪುತ್ತದೆ. ಛೇ ! ಅವರು ಮಾತ್ರ ಎಂದೂ ಹೀಗೆ ಮಾಡಲಾರರು ! ಎರಡನೆಯವರ ಬಳಿಯಲ್ಲಿ ಇಂತಹ ವಸ್ತುಗಳಿಲ್ಲವೆಂಬದನ್ನು ಅವರು ತಿಳಿದ ಕೂಡಲೆ ತಮ್ಮ ವಸ್ತುಸಂಗ್ರಹದ ವಿಷಯವಾಗಿ ಒಳ್ಳೇ ಆನಂದವನ್ನೂ ಅಭಿಮಾನವನ್ನೂ ತಾಳುತ್ತಾರೆ. ಮತ್ತು "ಕಃ ಕಾಲೋ ಫಲದಾಯಕಃ?" ಎಂಬ ನ್ಯಾಯದಂತೆ ಅದರೊಳಗಿನ ಯಾವದೊಂದು ಒಡವೆಗೆ ಹೆಚ್ಚು ಬೆಲೆ ಬರಬಹುದು; ಅಥವಾ ಯಾವದೊಂದು ವಸ್ತುವಿನಿಂದ ಪೂರ್ವಸ್ಮೃತಿಯಾದರೂ ಜಾಗೃತವಾಗಬಹುದು; ಇಷ್ಟರಿಂದಲೇ ಅವರಿಗೆ ಒಳ್ಳೇ ಸಂತೋಷವಾಗುತ್ತದೆ.

ಆದರೆ ಯಾವ ಮನೆಯಲ್ಲಿ ಶಿಸ್ತೂ, ವ್ಯವಸ್ಥೆಯೂ, ಪದ್ಧತಿಯೂ ಇರುವವೋ ಆ ಮನೆಯಲ್ಲಿ ಇಂತಹ ವಸ್ತುಗಳಿಗೆ ಆಸ್ಪದವೇ ಸಿಕ್ಕಲಾರದು. ಒಂದು ವೇಳೆ ಅಪ್ರಯೋ

ಜಕ ವಸ್ತುವು ಎಲ್ಲಿಯಾದರೂ ಇದ್ದರೆ ಅದನ್ನು ತತ್ಕಾಲಕ್ಕೇ ತೆಗೆದು ಹಾಕಿ ಇಲ್ಲವೆ ಕಸ ದೊಳಗಿಂವ ತೆಗೆದೊಗೆದು ಮನೆಯು ಸ್ವಚ್ಛವಾಗಿಯೂ ರಮಣೀಯವಾಗಿಯೂ ವ್ಯವಸ್ಥಿತವಾಗಿಯೂ ಮಾಡಲ್ಪಡುತ್ತದೆ.

ಇದರಂತೆ ಎಷ್ಟೋ ಜನರು ತಮ್ಮ ಮನಸ್ಸಿನಲ್ಲಿ ಅಪ್ರಯೋಜಕವಾದ ಕಲ್ಮಷವನ್ನು ತುಂಬಿಡುತ್ತಾರೆ; ಮತ್ತು ಅದು ಇಲ್ಲದಂತಾಗಬಾರದೆಂದು ಒಳ್ಳೇ ಜಾಗರೂಕತೆಯಿಂದಿರುವರಲ್ಲದೆ, ಅದು ಕಡಿಮೆಯಾದ ಕೂಡಲೇ ಅವರಿಗೆ ಬಹಳೇ ದುಃಖವಾಗುತ್ತದೆ! ಅತೃಪ್ತವಾಸನೆ, ನಿಷಿದ್ಧವಾದ ಸುಖಸೇವನೆಯು ಇಲ್ಲವೆ ಅಧರ್ಮಾಚರಣೆಯು ಅಸಿನಾರವಾದ ಪ್ರವೃತ್ತಿ, ಚಮತ್ಕಾರ, ಭೂತಪಿಶಾಚಗಳು, ಜಲದೇವತೆ, ಸ್ಥಲದೇವತೆ, ಹಾಗು ಇಂತಹ ಪರಸ್ಪರ ವಿರೋಧವಾದ ಅನೇಕ ಪಂಥಗಳು, ಮತಗಳು ಇವುಗಳಲ್ಲಿ ಮನುಷ್ಯನು ತಲ್ಲೀನನಾಗಿರುವದರಿಂದ ಜೀವಿತದ ನಿಜವಾದ ಉದ್ದೇಶದ ಜ್ಞಾನವೇ ಅವನಿಗಾಗುವದಿಲ್ಲ.

ಈ ಪ್ರಕಾರ ಮನಸ್ಸನ್ನು ಕೆಡಿಸುವಂಥ, ಗೊಂದಲದಲ್ಲಿ ಕೆಡವುವಂಥ ವಿಷಯಗಳನ್ನು ಪರಿತ್ಯಾಗ ಮಾಡಿ, ಆವಶ್ಯಕವಾದ ಹಾಗು ಅವಿನಾಶಿಗಳಾದ ವಿಷಯಗಳನ್ನೇ ಆಶ್ರಯಿಸುವದಕ್ಕೆ ನಿರುಪಾಧಿತ್ವ ಅಥವಾ ಉಪರತಿಯೆಂಬ ಹೆಸರು.

ಈ ಜಗತ್ತಿನಲ್ಲಿ ಶಾಶ್ವತವಾದದ್ದಾವುದು? ಆವಶ್ಯಕವಾದದ್ದು ಯಾವದು? ಸದ್ಗುಣಗಳೇ ಶಾಶ್ವತವಾದಂಥವು; ಸದ್ಗುಣಗಳೇ ಅವಿನಾಶಿಯಾದಂಥವು; ಸದಾಚಾರ ಅಥವಾ ಸಚ್ಛೀಲವೇ ಆವಶ್ಯಕವಾದದ್ದು. ಅನಾವಶ್ಯಕ ವಿಷಯಗಳನ್ನು ಪರಿತ್ಯಜಿಸಿ ಜೀವಿತದ ನಿಜವಾದ ರಹಸ್ಯವನ್ನು ತಿಳಿದುಕೊಂಡು ತದನುರೂಪವಾದ ವರ್ತನವನ್ನಿಟ್ಟರೆ ಜೀವಿತವು ಸರಳವಾಗಿಯೂ ನಿಯಮಬದ್ಧವಾಗಿಯೂ ಇದ್ದು, ಆ ನಿಯಮಗಳನ್ನು ಆಚರಿಸುವದು ಮಾತ್ರ ಕಠಿಣವಾಗಿದೆಯೆಂದು ತಿಳಿದುಬರುತ್ತದೆ. ಯಾವತ್ತು ಮಹಾತ್ಮರು ಆಯುಷ್ಯದ ವ್ಯಾಖ್ಯೆಯನ್ನು ಹೀಗೆಯೇ ಸುಗಮವಾಗಿ ಮಾಡಿದ್ದಾರೆ. ಬುದ್ಧನು—"ಆಯುಷ್ಯವೆಂದರೆ ಎಂಟು ಮುಖ್ಯ ಸದ್ಗುಣಗಳಾಗಿದ್ದು, ಅವುಗಳ ಆಚರಣದಿಂದ ಜ್ಞಾನಪ್ರಾಪ್ತಿಯಾಗುವದು; ಮತ್ತು ಆ ಸದ್ಗುಣಗಳ ಸಾರವೇ 'ಸರ್ವಾಂ ಭೂತಿಂ ದಯಾ' ಎಂಬುದು." ಎಂದು ಹೇಳಿದ್ದಾನೆ. ಕಾನಫ್ಯೂಶಿಯಸನು ಹೇಳುವದೇನಂದರೆ–"ಜ್ಞಾನಪ್ರಾಪ್ತಿಯ ಪೂರ್ಣಾವಸ್ಥೆಯು ಐದು ಮುಖ್ಯ ಸದ್ಗುಣಗಳಿಂದಾಗುತ್ತದೆ. ಅವುಗಳ ಸಾರವೇ 'ಸಹಾನುಭೂತಿ' ಅಥವಾ 'ಭೂತದಯೆ' ಎಂಬದು." ಜೀಝುಸನು "ಆಯುಷ್ಯವೆಂದರೆ ಪ್ರೇಮವು" ಎಂದು ಹೇಳಿದ್ದಾನೆ. ಭೂತದಯೆ, ಸಹಾನುಭೂತಿ ಅಥವಾ ಪ್ರೇಮ ಅವು ಒಂದೇ ಮನೋವೃತ್ತಿಯ ದ್ಯೋತಕಗಳಾಗಿರುತ್ತವೆ. ಇವುಗಳಲ್ಲಿ ಎಷ್ಟು ಸರಳತೆಯು ತುಂಬಿಕೊಂಡಿರುವದು. ನೋಡಿರಿ! ಆದರೆ ಈ ಶಬ್ದಗಳ ಶ್ರೇಷ್ಠತ್ವವನ್ನು ಪೂರ್ಣವಾಗಿ ತಿಳಿದುಕೊಂಡ ಮನುಷ್ಯನ್ನೊಬ್ಬನನ್ನಾದರೂ ಕಾಣುವದು ದುರ್ಲಭ! ಯಾಕಂದರೆ ಯಾವನಿಗೆ ಇವುಗಳ ಪೂರ್ಣಜ್ಞಾನವಾಗುವದೋ, ಅವನು ಅವುಗಳನ್ನು

ಆಚರಿಸೇ ಆಚರಿಸುವನು; ಮತ್ತು ಇಂತಹ ಮನುಷ್ಯನೇ 'ಪೂರ್ಣಪುರುಷ,' 'ಅವ್ಯಂಗ' ಇಲ್ಲವೆ 'ಪೈರ್ವಿಸಾಮರ್ಥ್ಯಯುಕ್ತ' ಆಗುವನು. ಆಮೇಲೆ ಅವನಿಗೆ ಜ್ಞಾನ, ಚಾತುರ್ಯ ಹಾಗು ಸದ್ಗುಣ ಇವುಗಳ ಕೊರತೆಯೇ ಉಳಿಯುವದಿಲ್ಲ. ಮನುಷ್ಯನು ಯಾವಾಗ ತನ್ನಿಂದ ಸದಾಚರಣವು ಉಂಟಾಗಬೇಕೆಂದು ಇಚ್ಛಿಸಹತ್ತುವನೋ, ಮತ್ತು ಅದ ರಂತೆಯೇ ನಡೆಯಹತ್ತುವನೋ, ಆಗ ಅವನಿಗೆ ತನ್ನ ಮನಸ್ಸಿನ ಮೇಲೆ ಎಷ್ಟೋ ವಿಧದ ಕಿಲ್ಮಿಷವು ಕೂತಿರುತ್ತದೆಂದು ತಿಳಿಯಬಂದಿದೆಯೆಂದು ತಿಳಿಯಬೇಕು; ಆ ಕಿಲ್ಮಿಷವನ್ನು ತೆಗೆದು ಹಾಕುವದು ಅವನ ಮುಖ್ಯ ಕರ್ತವ್ಯವು. ಈ ಪ್ರಕಾರದ ವರ್ತನ ಕ್ರಮದಿಂದ ಶ್ರದ್ಧೆ, ಸಹಿಷ್ಣುತೆ, ಪ್ರೇಮ, ವಿನಯ, ಬುದ್ಧಿ ಮತ್ತು ಇಚ್ಛಾಶಕ್ತಿ ಇವು ಚನ್ನಾಗಿ ಒರೆ ಹಚ್ಚಲ್ಪಟ್ಟು ಮನಸ್ಸು ಪೂರ್ಣಶುದ್ಧವೂ, ಉಪಾಧಿರಹಿತವೂ ಆಗುವ ವರೆಗೆ ಅವನಿಗೆ ಅತಿಶಯ ಕಷ್ಟವಾಗುತ್ತದೆ. ಮನಸ್ಸು, ಮನೆ, ಅಥವಾ ತಾವು ಉದ್ಯೋಗ ಮಾಡುವ ಸ್ಥಳ ಇವುಗಳನ್ನು ಸ್ವಚ್ಛ ಮಾಡುವದು ಕ್ಷುಲ್ಲಕವಾದ ಇಲ್ಲವೆ ಸುಲಭವಾದ ಕೆಲಸವಲ್ಲ; ಆದರೆ ಅದು ಸಾಧ್ಯವಾಯಿತೆಂದರೆ ಮಾತ್ರ ಸುಖವೂ, ಸಮಾಧಾನವೂ ಉಂಟಾಗುವವು.

ಜಗತ್ತಿನೊಳಗಿನ ಯಾವತ್ತು ಚೇತನಾಚೇತನ ವಸ್ತುಗಳ ಅಥವಾ ಮಾನಸಿಕ ಕ್ರಿಯೆಗಳ ಅಸ್ತಿತ್ವದ ನಿಯಮಗಳು ಬಹಳೇ ಸರಳವಾಗಿಯೂ, ಪ್ರಮಾಣಬದ್ಧವಾ ಗಿಯೂ ಇವೆ. ಜ್ಞಾನಿಗಳಾದ ಮನುಷ್ಯರ ಆಯುಷ್ಯವಾದರೂ ತೀರ ಸರಳವಾದ ನಿಯಮಗಳಿಂದ ಯುಕ್ತವಾಗಿರುತ್ತದೆ. ಯಾವನ ಆಯುಷ್ಯದಲ್ಲಿ ಪ್ರೇಮವೇ ಮುಖ್ಯ ತತ್ವವಾಗಿದೆಯೋ, ಅವನ ವರ್ತನಕ್ರಮವು ಎಲ್ಲ ಕಡೆಗೂ ಆ ಮುಖ್ಯತತ್ವಾನುಸಾರ ವಾಗಿಯೇ ಇದ್ದದ್ದು ದೃಷ್ಟಿಗೆ ಬೀಳುವದು. ಅವನ ಪ್ರತಿಯೊಂದು ವಿಚಾರ, ಆಚಾರ, ಉಚ್ಚಾರ ಅಥವಾ ಕೃತಿಗಳು ಯಥಾಕಾಲದಲ್ಲಿ ಯಥೋಚಿತವಾಗಿ ಜರುಗುವವು; ಅವು ಗಳಲ್ಲಿ ವಿರೋಧವಾಗಲಿ, ಗೊಂದಲವಾಗಲಿ ಎಂದೂ ದೃಷ್ಟಿಗೆ ಬೀಳಲಾರದು. "ಚಿತ್ತೇ ವಾ ಚಿಕ್ರಿಯಾಯಾಂ ಚ ಮಹತಾಮೇಕರೂಪತಾ."

ಸಾಧುವೂ ಜ್ಞಾನಿಯೂ ಎಂದು ಪ್ರಸಿದ್ಧನಾದ ಒಬ್ಬ ಬೌದ್ಧ ಶ್ರಮಣನಿಗೆ ಒಬ್ಬ ಪಂಡಿತನು– "ಬೌದ್ಧ ಧರ್ಮದ ಮುಖ್ಯ ಲಕ್ಷಣವೇನು?" ಎಂದು ಪ್ರಶ್ನೆ ಮಾಡಿದನು.

ಶ್ರಮಣ : "ದುಷ್ಕರ್ಮನಿವೃತ್ತಿ ಹಾಗು ಪರರಿಗೆ ಹಿತವನ್ನುಂಟುಮಾಡುವದು ಇವು ನಮ್ಮ ಧರ್ಮದ ಮುಖ್ಯ ಲಕ್ಷಣಗಳು."

ಪಂಡಿತ : "ನೀವು ಹೇಳಿದ್ದು ಚಿಕ್ಕ ಬಾಲಕನಿಗೂ ಕೂಡ ತಿಳಿಯುವಂಥ ಮಾತಾ ಗಿದೆ; ಅದನ್ನು ನಾನು ನಿಮ್ಮನ್ನು ಕೇಳಲಿಲ್ಲ. ಬುದ್ಧ ಧರ್ಮದೊಳಗಿನ ಅತಿ ಗೂಢವಾದ ಅತಿ ಸೂಕ್ಷ್ಮವಾದ ಹಾಗು ಅತಿಶಯ ಮಹತ್ವವಾದ ಸಂಗತಿಯನ್ನು ನನಗೆ ಹೇಳಿರಿ."

ಶ್ರಮಣ : "ಅತಿ ಗೂಢವಾದ-ಅತಿ ಸೂಕ್ಷ್ಮವಾದ ಹಾಗು ಅತಿಶಯ ಮಹತ್ವದ ಸಂಗತಿಯೆಂದರೆ–ದುಷ್ಕರ್ಮವನ್ನು ಮಾಡದಿರುವದು; ಮತ್ತು ಪರರಿಗೆ ಒಳಿತನ್ನು

ಮಾಡುವದು. ಈ ಮಾತು ಮೊಲೆಯ ಕೂಸಿಗೂ ಸಹ ತಿಳಿಯುವಂತಿದ್ದರೂ, ಕೂದಲು ಹಣ್ಣಾದವನು ಸಹ ಇದರಂತೆ ಆಚರಿಸುವದು ಕಠಿಣವಾಗುತ್ತದೆ."

ಇದರ ಮೇಲೆ ಟೀಕಾಕಾರನು ಅನ್ನುವದೇನಂದರೆ– ಪಂಡಿತನಿಗೆ ಬೌದ್ಧ ಧರ್ಮದ ರಹಸ್ಯವಾಗಲಿ ಸತ್ಯಸ್ವರೂಪವಾಗಲಿ ಬೇಕಾಗಿದ್ದಿಲ್ಲ. ಯಾವದೋ ಒಂದು ಕ್ಲಿಷ್ಟವಾದ ತತ್ವಸಿದ್ಧಾಂತವು ಬೇಕಾಗಿತ್ತು. ಅದನ್ನು ಅವನಿಂದ ಹೊರಡಿಸಿ ಸಿದ್ಧಾಂತಗಳ ಮಾಲಿಕೆಯನ್ನು ಉತ್ಪನ್ನ ಮಾಡಿ ತನ್ನ ಬುದ್ಧಿಗೆ ಘರ್ಷಣಕೊಡಬೇಕೆಂಬದೂ, ಅದರಿಂದ ತನ್ನ ವಿದ್ವತ್ತೆಯನ್ನು ಪ್ರಕಟಪಡಿಸಬೇಕೆಂಬದೂ ಅವನ ಹೇತುವಾಗಿತ್ತು.

ಒಂದಾನೊಂದು ಸಮಯದಲ್ಲಿ ಒಬ್ಬ ದೊಡ್ಡ ತತ್ವವೇತ್ತನು ದರ್ಪೋಕ್ತಿಯಿಂದ– "ನಮ್ಮ ತತ್ವಜ್ಞಾನ ಪದ್ಧತಿಯು ಇಡೀ ಜಗತ್ತಿನಲ್ಲಿ ಪೂರ್ಣಾವಸ್ಥೆಯನ್ನು ಹೊಂದಿರುತ್ತದೆ; ಮತ್ತು ಅದು ಬಹಳೇ ಕಠಿಣವಾಗಿದೆ" ಎಂದು ನುಡಿದನು. ಅದು ಎಷ್ಟು ಬಿಕ್ಕಟ್ಟಾಗಿರುವದೆಂಬದು ಪ್ರತಿಯೊಬ್ಬನಿಗೆ ತಿಳಿಯುವಂತಿದೆ. ಯಾಕಂದರೆ ಅದರಲ್ಲಿ ಒಮ್ಮೆ ತಲೆಹಾಕಿದರೆ, ಮನಸ್ಸು ಬಹಳೇ ಗೊಂದಲದಲ್ಲಿ ಬೀಳುತ್ತದೆ; ಮತ್ತು ಜೀವಿತದ ವಿಷಯವಾಗಿ ವಿಚಾರವೂ, ಸರಳವಾದ ಹಾಗು ಸಾತ್ವಿಕವಾದ ಮನೋವೃತ್ತಿಗಳ ಲಾಭವೂ ಆಗುವದಕ್ಕೆ ಅದರಿಂದ ತ್ರಾಸಾಗುತ್ತದೆ. ಆದಕಾರಣ ಕೇವಲ ಇಂತಹ 'ಘಟಪಟಾ'ದಿ ಪ್ರಯತ್ನದಲ್ಲಿ ಆಯುಷ್ಯವನ್ನು ನಾಶ ಮಾಡುವದಕ್ಕಿಂತ, ಅಕ್ಷಯವಾದ ಹಾಗು ಅವಿನಾಶಿಗಳಾದ ಸದ್ಗುಣಗಳನ್ನು ಅಹರ್ನಿಶವಾಗಿ ಚಿಂತನಮಾಡುವದರಲ್ಲಿಯೂ, ಅವುಗಳ ಪ್ರಾಪ್ತ್ಯರ್ಥವಾಗಿ ಆಯುಷ್ಯವನ್ನೂ, ಬುದ್ಧಿಯನ್ನೂ ಉಪಯೋಗಿಸುವದರಲ್ಲಿಯೂ ಕಾಲ ಕಳೆದರೆ ಎಷ್ಟೋ ಶ್ರೇಯಸ್ಕರವಾಗುವದು.

ಅಭಿಮಾನವನ್ನೂ, ದುರಾಗ್ರಹವನ್ನೂ, ನಾವು ನುಡಿದದ್ದೇ ಸತ್ಯವೆಂಬ ಮಿಥ್ಯಾದರ್ಪವನ್ನೂ ಸಂಪೂರ್ಣವಾಗಿ ಬಿಟ್ಟುಬಿಡಬೇಕು. ಅಜ್ಞಾನ ಹಾಗು ಮೂರ್ಖತನಗಳಿಗೆ ಸ್ವಲ್ಪವೂ ಬೆಲೆಯಿಲ್ಲ. ಶಿಕ್ಷಣವು ವಸ್ತುತಃ ನೆಟ್ಟಗಿರುವದೇನೋ ನಿಜ; ಆದರೆ ಕೇವಲ ಪುಸ್ತಕೀಯ ಜ್ಞಾನವು ಉಪಯೋಗದ್ದಲ್ಲ. ಆ ಶಿಕ್ಷಣವನ್ನು ಮನುಷ್ಯ ಜಾತಿಯ ಕಲ್ಯಾಣದ ಕಡೆಗೂ ಉನ್ನತಿಯ ಕಡೆಗೂ ಉಪಯೋಗಿಸಿದರೆ ಅದೊಂದು ಜಾಗೃತ ಸಾಮರ್ಥ್ಯವೇ ಆಗುತ್ತದೆ. ಅದಕ್ಕೆ ವಿನಯವು ಜೋಡಿಯಾಗಿದ್ದರೆ, ಅದು ಉತ್ಕೃಷ್ಟವಾದ ವಿಷಯಗಳನ್ನು ಸಾಧ್ಯಮಾಡಿಕೊಳ್ಳಲಿಕ್ಕೆ ಒಂದು ತೇಜಸ್ವಿಯಾದ ಸಾಧನವೇ ಆಗುವದು. ಮೇಲೆ ಹೇಳಿದಂಥ ವೃದ್ಧಸಾಧುವು, ಆ ಗರ್ವಿಷ್ಠನಾದ ಪೃಚ್ಛಕನಷ್ಟು ವಿದ್ವಾಂಸನಿದ್ದಿಲ್ಲವಂತಲ್ಲ, ಆತನಲ್ಲಿ ವಿಶೇಷವಾಗಿ ಸರಳತನವಿದ್ದು, ಆತನು ಜಾಣನಾಗಿದ್ದನು. 'ಗೃಹೀತ' ಸಂಗತಿಗಳು ಗೃಹೀತವಾಗಿಯೇ ಇರುವವಲ್ಲದೆ, ವಸ್ತುಸ್ಥಿತಿಯಿಂದ ಭಿನ್ನವಿರುವವೆಂದು ತಿಳಿದು ನಡೆಯಲು ಗೊಂದಲವು ಉತ್ಪನ್ನವಾಗುವ ಕಾರಣವಿಲ್ಲ. ಆದರೂ ಜ್ಞಾನಿಗಳು ಗೃಹೀತ ವಿಷಯಗಳನ್ನು ತ್ಯಾಜ್ಯ ಮಾಡಿ ಸತ್ಯವಾದ ಸಂಗತಿ

ಗಳನ್ನೇ ಆಚರಿಸುತ್ತಾರೆ. ಆದುದರಿಂದ ಅವರಲ್ಲಿ ದೈವೀ ಸಾಮರ್ಥ್ಯವು ಬಂದು, ಅವರಿಗೆ ಪೂರ್ಣನಿರುಪಾಧಿತ್ವವೂ, ಪೂರ್ಣಜ್ಞಾನವೂ, ಮೋಕ್ಷಪ್ರಾಪ್ತಿಯೂ ಉಂಟಾಗುತ್ತವೆ.

ನಿರುಪಾಧಿತ್ವದ ಪೂರ್ಣ ಆನಂದವೂ, ಅಧಿಕಾರವೂ ಪ್ರಾಪ್ತವಾಗಬೇಕಾದರೆ, ವಿವೇಕವು ವೃದ್ಧಿಹೊಂದಲಿಕ್ಕೆ ಬೇಕು; ಮತ್ತು ಅದರ ಧೋರಣವು ಉದಾತ್ತವೂ ಉಪಯುಕ್ತವೂ ಆದ ಧ್ಯೇಯಗಳ ಕಡೆಗಿದ್ದು ಆಯುಷ್ಯದ ಇತಿಕರ್ತವ್ಯದಲ್ಲಿ ಅದರ ಪರ್ಯವಸಾನವಾಗಲಿಕ್ಕೆ ಬೇಕು. ವ್ಯರ್ಥವಾದ ತರ್ಕವಾದಗಳನ್ನು ಮಾಡುವದರಲ್ಲಿ ಅದನ್ನು ಉಪಯೋಗಿಸಬಾರದು.

ಉಪಾಧಿರಹಿತವಾದ ಆಯುಷ್ಯಕ್ರಮವು ಸರ್ವ ದೃಷ್ಟಿಯಿಂದಲೂ ಸರಳವಾಗಿರುತ್ತದೆ. ಯಾಕಂದರೆ ಅದರ ಮುಖ್ಯ ಪ್ರೇರಕವಾದ ಮನಸ್ಸು ಶುದ್ಧವಾಗಿಯೂ ನಿಷ್ಟೆಯಿಂದಾಗಿಯೂ ಇರುತ್ತದೆ. ಸಾತ್ವಿಕವೃತ್ತಿಯ ಅಸ್ತಿವಾರವು ಸತ್ಯದ ಮೇಲೆ ನಿಂತಿರುತ್ತದೆ. ಉಡಿಗೆ ತೊಡಿಗೆಗಳಲ್ಲಿ ಡೌಲು, ಭಾಷಣದಲ್ಲಿ ಅತಿಶಯೋಕ್ತಿ, ಕರ್ತವ್ಯದಲ್ಲಿ ಕೃತ್ರಿಮತೆ, ವ್ಯರ್ಥವಾದ ಮನೋರಾಜ್ಯ ಮತ್ತು ಪಾಂಡಿತ್ಯವನ್ನು ತೋರ್ಪಡಿಸುವದಕ್ಕಾಗಿ ಮಾಡಿದ ವಿಚಾರಗಳ ಪ್ರದರ್ಶನ ಇವೆಲ್ಲವುಗಳನ್ನು ಸದ್ಗುಣಗಳು ತನ್ನಲ್ಲಿ ನೆಲೆಗೊಳ್ಳಬೇಕೆಂದು ಬಯಸುವವನು ಬಿಟ್ಟುಬಿಡಲಿಕ್ಕೆಬೇಕು. ಅದರಂತೆಯೇ ಆಯುಷ್ಯದೊಳಗಿನ ಕರ್ತವ್ಯ ಕರ್ಮಗಳನ್ನು ನಿಃಸ್ವಾರ್ಥತೆಯಿಂದ ಜರುಗಿಸುವ ಬುದ್ಧಿಯನ್ನು ಧಾರಣ ಮಾಡಲಿಕ್ಕೆಬೇಕು. ಈ ಪ್ರಕಾರ ಕರ್ತವ್ಯವನ್ನು ಸಾಗಿಸುವವನ ಮನಸ್ಸಿನ ಮೇಲೆ ನೂತನ ಸತ್ಯದ ಪ್ರಕಾಶವು ಬೀಳಹತ್ತುತ್ತದೆ. ಮತ್ತು ಈ ಹೊತ್ತಿನವರೆಗೆ ಅಜ್ಞಾತವಾಗಿದ್ದ ಜೀವಿತದ ಮೂಲಭೂತ ತತ್ವಗಳು ಸ್ಪಷ್ಟವಾಗಿ ದೃಗ್ಗೋಚರವಾಗಹತ್ತುತ್ತವೆ; ಮತ್ತು ಅರ್ಥವಾದಿಗಳಾದ ಪಂಡಿತರು ಯಾವದನ್ನು ಕುರಿತು ತರ್ಕವಿತರ್ಕಗಳನ್ನು ಮಾಡುತ್ತಿರುತ್ತಾರೋ ಅದು ನಮಗೆ ಪ್ರತ್ಯಕ್ಷವಾಗಿ ಅವಗತವಾಗುತ್ತದೆ.

ಸಾತ್ವಿಕ ವೃತ್ತಿಯವರೂ, ಶುದ್ಧಮನಸ್ಸಿನವರೂ, ಸದ್ಗುಣಿಗಳೂ, ಜ್ಞಾನಿಗಳೂ ಆದವರ ಸಂಶಯಗಳೆಲ್ಲ ಪರಿಹಾರವಾಗುತ್ತವೆ. ಮತ್ತು ಭವಿಷ್ಯಕಾಲದ ವಿಷಯವಾಗಿಯಾಗಲಿ, ಅಜ್ಞೇಯ ಅಥವಾ ಅಜ್ಞಾತ ವಿಷಯಗಳ ವಿಷಯವಾಗಿಯಾಗಲಿ ಯಾವತ್ತು ಶಂಕೆಗಳು ಲಯಹೊಂದುತ್ತವೆ. ಪ್ರತ್ಯಕ್ಷ ಪ್ರಾಪ್ತಕರ್ತವ್ಯದ ಕಡೆಗೂ, ಜ್ಞಾತ ಮತ್ತು ಜ್ಞೇಯ ವಿಷಯಗಳ ಕಡೆಗೂ ಅವರ ಯಾವತ್ತು ಲಕ್ಷ್ಯವಿರುತ್ತದೆ. ಪ್ರತ್ಯಕ್ಷ ವಿಷಯಗಳ ಸ್ಥಳವನ್ನು ಅವರು ಕಲ್ಪನಾಮಯ ವಿಷಯಗಳಿಗೆ ಕೊಡುವದಿಲ್ಲ. ಸದ್ಗುಣಗಳೇ ಕೊನೆಯವರೆಗೂ ಸ್ಥಿರವಾಗಿರತಕ್ಕವೆಂದು ಅವರಿಗೆ ಸಂಪೂರ್ಣ ಮನವರಿಕೆಯಾಗಿರುತ್ತದೆ. ಸತ್ಯದ ಪ್ರಕಾಶವು ಉಜ್ವಲವಾಗಿದ್ದು, ಅದರ ಯೋಗದಿಂದ ಆಯುಷ್ಯದೊಳಗಿನ ಯಾವತ್ತು ಕರ್ತವ್ಯಗಳ ಜ್ಞಾನವಾಗುತ್ತದೆ. ಮತ್ತು ಅಜ್ಞೇಯದ ಕ್ಲಿಷ್ಟಮಾರ್ಗದೊಳಗಿಂದ ಮುಂದಿನ ದೈವೀ ಸುಖದ ಛಾಯೆಯು ಕಾಣಹತ್ತಿ ಮುಂದೆ ಅಖಂಡವಾದ ಶಾಂತಿ ಸುಖವು ಲಭಿಸುತ್ತದೆ.

ಸಾತ್ವಿಕತೆಯ ಕೆಲಸವು ಅಪ್ರತಿಹತವಾಗಿ ನಡೆದಿದ್ದು ಕಡೆಗೆ ಅದೇ ಐಶ್ವರ್ಯವೂ ಸಾಮರ್ಥ್ಯವೂ ಆಗುತ್ತದೆ. ಸಂಶಯ, ಕಪಟ, ಅಪವಿತ್ರತೆ, ಕಾರ್ಪಣ್ಯ, ನೈರಾಶ್ಯ, ಶಂಕೆ, ಭೀತಿ ಇವೆಲ್ಲವೂ ಸಂಪೂರ್ಣವಾಗಿ ಲಯಹೊಂದುತ್ತವೆ. ಈ ಪ್ರಕಾರ ಮುಕ್ತನಾದ ಮನುಷ್ಯನು ಸಾಮರ್ಥ್ಯವಂತನೂ, ಆತ್ಮತೃಪ್ತನೂ, ಶಾಂತನೂ, ದಾಂತನೂ, ಪವಿತ್ರನೂ ಆಗಿ ಶುದ್ಧಾಂತಃಕರಣದಿಂದ ಮುಕ್ತಿಸುಖದ ಲಾಭ ಮಾಡಿಕೊಳ್ಳುತ್ತಾನೆ; ಕೊನೆಗೆ ಅವನಿಗೆ ಸ್ವರ್ಗಪ್ರಾಪ್ತಿಯಾಗುತ್ತದೆ.

# ೬. ಸದ್ವಿಚಾರ ಮತ್ತು ಚಿತ್ತಸ್ವಾಸ್ಥ್ಯ

ಜೀವಿತವು ಒಳ್ಳೆಯ ಮತ್ತು ಕೆಟ್ಟ ಪ್ರವೃತ್ತಿಗಳ ಸಮ್ಮಿಶ್ರಣದ ಸಮಯವಾಗಿದೆ. ಈ ಯಾವತ್ತು ಪ್ರವೃತ್ತಿಗಳ ಉಗಮವು ಒಂದೇ ವಿಚಾರಪ್ರವೃತ್ತಿಯಿಂದಲೇ ಉಂಟಾಗುತ್ತದೆ. ಮನುಷ್ಯನ ಪರೀಕ್ಷೆಯು ಆತನ ವಿಚಾರಗಳ ಮೇಲಿಂದ ಆಗುತ್ತದೆ. ಆದುದರಿಂದ ಸದ್ವಿಚಾರಿಯಾಗಿರುವದು ಆಯುಷ್ಯದೊಳಗಿನ ಮಹತ್ವದ ಸಂಗತಿಯಾಗಿದೆ. ಸುಜ್ಞನಿಗೂ ಮೂರ್ಖನಿಗೂ ಭೇದವೇನೆಂದರೆ— ಸುಜ್ಞನು ತನ್ನ ವಿಚಾರಗಳನ್ನು ಅಂಕಿತದಲ್ಲಿಟ್ಟುಕೊಳ್ಳುತ್ತಾನೆ; ಮೂರ್ಖನು ತನ್ನ ವಿಚಾರಗಳ ಸೇವಕನಾಗಿರುತ್ತಾನೆ. ಸುಜ್ಞನು ತನ್ನ ವಿಚಾರಗಳ ದಿಶೆಯನ್ನೂ ಕ್ರಮವನ್ನೂ ಗೊತ್ತುಮಾಡಿಟ್ಟು ಬಾಹ್ಯ ಉಪಾಧಿಗಳ ಮೂಲಕ ಅವು ಉದ್ದಿಷ್ಟ ಹೇತುವಿನಿಂದ ಚಲಿಸದಂತೆ ಜಾಗೃತನಾಗಿರುವನು. ಆದರೆ ಮೂರ್ಖನು ಬಾಹ್ಯ ಉಪಾಧಿಗಳಿಂದ ಉತ್ಪನ್ನವಾಗುವ ಉಚ್ಛೃಂಖಲವಾದ ತರಂಗಗಳಿಗೆ ಅಧೀನನಾಗುವನು, ಆದುದರಿಂದ ಅವನ ಇಡೀ ಆಯುಷ್ಯವು ಆಡಂಬರ, ಹೌಲು, ಚಂಚಲಸ್ವಭಾವ, ವಿಕಾರವಶತೆ ಇವುಗಳ ರಂಗಸ್ಥಳವಾಗಿ ಹೋಗುತ್ತದೆ.

ಕುವಿಚಾರ ಇಲ್ಲವೆ ಅವಿವೇಕವು ಅಪಯಶಸ್ಸು, ದುಷ್ಕೃತ್ಯಗಳು ಹಾಗು ದುಃಖ ಇವುಗಳ ತವರುಮನೆಯಾಗಿದೆ. "ಅವಿವೇಕಃ ಪರಮಾಪದಾಂಪದಮ್." ದುಷ್ಟವಿಚಾರಗಳ ಉಪಶಮನವು, ಸ್ತೋತ್ರಪಾಠಗಳಿಂದಾಗಲಿ, ದಾನದಿಂದಾಗಲಿ ಬೇರೆ ಯಾತರಿಂದಾಗಲಿ ಆಗುವದೇ ಇಲ್ಲ. ಸದ್ವಿಚಾರಗಳಿಂದಲೇ ದುಷ್ಟ ಆಯುಷ್ಯಕ್ರಮವು ಬದಲಾಗುವದು. ಮನುಷ್ಯರು ಹಾಗು ವಸ್ತುಜಾತಗಳು ಇವುಗಳ ವಿಷಯಕ್ಕೆ ಶುದ್ಧವಾದ ಮನಸ್ಸಿದ್ದರೆ ಮಾತ್ರ ಚಿತ್ತಸ್ವಾಸ್ಥ್ಯ ಹಾಗು ಶಾಂತಿ ಇವುಗಳ ಲಾಭವಾಗುವದು.

ಯಾವ ಮನುಷ್ಯನ ಅಂತಃಕರಣ, ಬುದ್ಧಿಗಳು ಉದಾತ್ತ ವಿಚಾರಪ್ರವೃತ್ತಿಯಲ್ಲಿ ಲೀನವಾಗಿರುವವೋ, ಅವನಿಗೇ ಶ್ರೇಯಃಸಾಧನವು ಸಾಧ್ಯವಾಗುವದು. ಯಾವನಿಗೆ ಶ್ರೇಯಃಸಾಧನದ ಅಪೇಕ್ಷೆಯುಂಟೋ ಅವನು ಮುಂದೆ ಹೇಳಿದ ರೀತಿಯಲ್ಲಿ ತನ್ನ ವರ್ತನಕ್ರಮವನ್ನಿಡಬೇಕು. ಆತನ ವಿಚಾರಗಳು ತರ್ಕವನ್ನನುಸರಿಸಿಯೂ, ಯೋಗ್ಯವಾಗಿಯೂ ಸಯುಕ್ತಿಕವಾಗಿಯೂ, ಸುಪ್ರಮಾಣವಾಗಿಯೂ ಇರಲಿಕ್ಕೆ ಬೇಕು. ವಿಚಾರಗಳ ದಿಕ್ಕು ಗೊತ್ತುಮಾಡಲ್ಪಟ್ಟು, ಜ್ಞಾನವೆಂಬ ಗಟ್ಟಿಮುಟ್ಟಾದ ತಳಹದಿಯ ಮೇಲೆ ಆಯುಷ್ಯಕ್ರಮದ ಕಟ್ಟಡವನ್ನು ಕಟ್ಟಲಿಕ್ಕೆಬೇಕು. ಅವನು ಕೇವಲ ಪ್ರೇಮಲನಾಗಿರದೆ ಸಯುಕ್ತಿಕ ಪ್ರೇಮಲನಾಗಿರಲಿಕ್ಕೆಬೇಕು. ಅಂದರೆ ನಾನು ಪ್ರೇಮಲತೆಯನ್ನೇಕೆ ತೋರಿಸುತ್ತೇನೆಂಬದರ ಜ್ಞಾನವು ಅವನಿಗಿರಲಿಕ್ಕೆಬೇಕು; ಮತ್ತು ಆ ಪ್ರೇಮಲತೆಯು ಯಾವ ಕಾರಣದಿಂದಲೂ ಚಂಚಲವಾಗದೆ ಯಾವಾಗಲೂ ಅಖಂಡವಾಗಿರಲಿಕ್ಕೆಬೇಕು. ಕ್ಷಣದಲ್ಲಿ

ದಯಾಳುವಾಗಿಯೂ, ಕ್ಷಣದಲ್ಲಿ ತಾಪಸಿಯಾಗಿಯೂ ಸೇಡು ತೀರಿಸಿಕೊಳ್ಳುವ ಇಚ್ಛೆ ಕಠೋರತ್ವದ ಪ್ರವೃತ್ತಿಯುಳ್ಳವನಾಗುವದು ಉಚಿತವಲ್ಲ. ಎಂತಹ ಕಠಿಣ ಪ್ರಸಂಗದಲ್ಲಿ ಯಾವನೂ ಅವನು ಸದ್ವರ್ತನವನ್ನು ಬಿಡಲಾಗದು. ಮನಸ್ಸಿಗೆ ಮೋಹದ ಪ್ರಸಂಗವೇ ಬಾರದಿರುವಂಥ ಪರಿಸ್ಥಿತಿಯಲ್ಲಿ ಸದ್ವರ್ತನದಿಂದಿರುವ ಮನುಷ್ಯನಿಗೆ ಸದ್ವರ್ತನಿಯೆನ್ನುವದು ಸರಿಯಾಗಲಾರದು. "ಸುಸ್ಥೇ ಕೋವಾ ನ ಪಂಡಿತಃ" ಮನಸ್ಸನ್ನು ಮೋಹಗೊಳಿಸುವಂಥ ಸಾವಿರಾರು ಪ್ರಸಂಗಗಳು ಪ್ರಾಪ್ತವಾದಾಗ್ಯೂ ಯಾವನು ಸನ್ಮಾರ್ಗಚ್ಯುತನಾಗದೆ ಸದ್ಗುಣಗಳ ಉಜ್ವಲವಾದ ತೇಜಸ್ಸಿನಿಂದ ಮಿನುಗುತ್ತಿರುವನೋ ಅವನೇ ನಿಜವಾದ ಸದ್ಗುಣಿಯು. ಸದ್ವರ್ತನಿಯಾದ ಮನುಷ್ಯನು ಜನರ ನಿಂದಾಸ್ತುತಿಗಳಿಂದಾಗಲಿ, ದುರ್ದೈವದ ಆಘಾತಗಳಿಂದಾಗಲಿ ಮನುಷ್ಯತ್ವದಿಂದ ಚ್ಯುತನಾಗಬಾರದು. ದುರ್ದೈವದ ಆಘಾತಗಳಲ್ಲಿಯಾಗಲಿ, ಸಂಕಟಗಳಲ್ಲಿಯಾಗಲಿ ಧೈರ್ಯವನ್ನೀಯುವ ಸದ್ವರ್ತನವೇ ಆತನ ಆತ್ಯಂತಿಕವಾದ ಅಧಿಷ್ಠಾನವಾಗಲಿ ಕಾರಣಸ್ಥಾನವಾಗಲಿ ಆಗಿರಲಿಕ್ಕೆಬೇಕು.

ಸದ್ಗುಣಗಳು ಅಂತಃಕರಣದಿಂದ ಉತ್ಪನ್ನವಾಗುವಂತೆ ಬುದ್ಧಿಯಿಂದಲೂ ಉತ್ಪನ್ನವಾಗುತ್ತವೆ. ವಿಶುದ್ಧವಾದ ಬುದ್ಧಿಯಿಂದ ಹೊರತು ಪವಿತ್ರವಾದ ಅಂತಃಕರಣದ ಅಸ್ತಿತ್ವವು ಅಸಂಭವನೀಯವೇ ಸರಿ. ಮನೋವಿಕಾರಗಳಂತೆಯೇ ಬುದ್ಧಿಯ ವಿಕಾರಗಳೂ ಉಂಟು. ವಿಷಯೇಚ್ಛೆಯು ಪ್ರೇಮದ ದುಷ್ಟ ಪ್ರವೃತ್ತಿಯಾಗಿರುವಂತೆ, ವ್ಯರ್ಥವಾದ ಮನೋರಾಜ್ಯವು ಬುದ್ಧಿಯ ದುರ್ಗುಣವಾಗಿದೆ. ಮನೋರಾಜ್ಯದ ತರಂಗಗಳು ಆನಂದಕರವೆನಿಸುವವೇನೋ ನಿಜ; ಆದರೆ ಅವುಗಳಿಂದ ಶಾಂತಿಯು ಮಾತ್ರ ಲಭಿಸಲಾರದು ಮನೋರಾಜ್ಯದಿಂದ ಬೇಸರಹೊಂದಿದ ಮನಸ್ಸು ಕೊನೆಯಲ್ಲಿ ತತ್ವಶೋಧಕ್ಕೋಸ್ಕರ ವಸ್ತುಸ್ಥಿತಿ ಹಾಗು ನೀತಿಸಿದ್ಧಾಂತ ಇವುಗಳನ್ನೇ ಆಶ್ರಯಿಸಬೇಕಾಗುತ್ತದೆ. ಅಂತರಿಕ್ಷದಲ್ಲಿ ಪರಮಾನಂದದಿಂದ ವಿಹರಿಸುವ ಪಕ್ಷಿಯು ಕಟ್ಟಕಡೆಗೆ ವಿಶ್ರಾಂತಿಗೋಸುಗ ತನ್ನ ಗೂಡನ್ನು ಆಶ್ರಯಿಸುವಂತೆ, ಕಲ್ಪನಾಮಯವಾದ ವಾತಾವರಣದಲ್ಲಿ ಹಾರಾಡುವ ಪಂಡಿತನು ಮನಸ್ಸಿನ ತಳಮಳವನ್ನು ಕಳೆದುಕೊಂಡು ಜ್ಞಾನಿಯಾಗುವದಕ್ಕೋಸ್ಕರ ಸದ್ಗುಣಗಳನ್ನೇ ಅವಲಂಬಿಸಬೇಕಾಗುತ್ತದೆ.

ಸದ್ಗುಣಗಳನ್ನು ಪೂರ್ಣವಾಗಿ ಆಕಲನ ಮಾಡಿಕೊಂಡು ಅವುಗಳಿಗನುಸಾರವಾಗಿ ಶುದ್ಧವಾದ ಆಚರಣೆಯನ್ನಿಡಬೇಕಾದರೆ ಬುದ್ಧಿಯ ಸಿದ್ಧತೆಯು ಒಳ್ಳೇ ಚನ್ನಾಗಿ ಆಗಿರಲಿಕ್ಕೆಬೇಕು. ನಿಷ್ಫಲವಾದ ವಾದವಿವಾದದಲ್ಲಿ ಬುದ್ಧಿಯನ್ನು ಹ್ರಾಸಗೊಳಿಸದ, ಸದ್ವರ್ತನ ಹಾಗು ಜ್ಞಾನಪ್ರಾಪ್ತಿ ಇವುಗಳಿಗೋಸುಗ ಅದರ ಉಪಯೋಗವನ್ನು ಮಾಡಿಕೊಳ್ಳತಕ್ಕದ್ದು. ವಿವೇಕಿಯಾದ ಪುರುಷನು 'ಸತ್ಯ'ವನ್ನೂ 'ಆಭಾಸ'ವನ್ನೂ ಅಂತರ್ಯಾಮಿಯೆಂದೇ ಭಾವಿಸಬೇಕು. ಸ್ವಂತಜ್ಞಾನದ ಗಡಿಯು ಎಲ್ಲಿಯವರೆಗಿರುವದೆಂಬದೂ ಅವನಿಗೆ ಪೂರ್ಣವಾಗಿ ಗೊತ್ತಿರಲಿಕ್ಕೆಬೇಕು. ತನಗೆ ಯಾವ ವಸ್ತುವಿನ ಜ್ಞಾನವಾಗಿದೆ

ಯೆಂಬುದರ ತಿಳುವಳಿಕೆಯು ಅವನಿಗಿರಲಿಕ್ಕೆಬೇಕು. ಅದರಂತೆಯೇ ಯಾವ ಸಂಗತಿಯ ಜ್ಞಾನವು ತನಗಾಗಲಿಲ್ಲವೆಂಬುದೂ ಆತನಿಗೆ ಗೊತ್ತಿರಲಿಕ್ಕೆಬೇಕು. ಪ್ರತ್ಯಕ್ಷ 'ವಸ್ತುಸ್ಥಿತಿ' ಹಾಗು ವಸ್ತುಸ್ಥಿತಿ ವಿಷಯಕ 'ತರ್ಕ', 'ತಿಳುವಳಿಕೆ' ಹಾಗು 'ಪ್ರತ್ಯಕ್ಷಜ್ಞಾನ' ಮತ್ತು 'ಸತ್ಯ' ಹಾಗು 'ಅಸತ್ಯ' ಇವುಗಳೊಳಗಿನ ಭೇದವು ಅವನಿಗೆ ಗೊತ್ತಾಗಲಿಕ್ಕೆಬೇಕು. ಮನಸ್ಸು ಸತ್ಯಸಂಗತಿಗಳನ್ನು ಯಾವಾಗ ಆಕಲನ ಮಾಡುತ್ತದೆ ಮತ್ತು ಜೀವಿತವನ್ನು ಉದಾತ್ತಗೊಳಿಸುವದರ ಕಡೆಗೆ ಯಾವಾಗ ಪ್ರವೃತ್ತವಾಗುತ್ತದೆಂಬುದನ್ನು ಶೋಧಿಸುವ ವಿಷಯದಲ್ಲಿ ಆತನು ಅತಿಶಯ ಸೂಕ್ಷ್ಮವಿಚಾರಿಯಾಗತಕ್ಕದ್ದು. ಈ ಪ್ರಕಾರ ಕೆಲವು ಕಾಲ ಆತ್ಮಶೋಧನವನ್ನು ಮಾಡಿದನಂತರ ತನ್ನ ಜ್ಞಾನವು ತೀರ ಸಂಕುಚಿತವಾಗಿಯೂ ಅಪೂರ್ಣವಾಗಿಯೂ ಇರುವದೆಂದು ತಿಳಿದು ಮನುಷ್ಯನಿಗೆ ಒಳ್ಳೇ ಆಶ್ಚರ್ಯವಾಗುತ್ತದೆ! ಈ ಜ್ಞಾನವು ಒಂದು ವೇಳೆ ಕಡಿಮೆಯಾಗಿದ್ದರೂ ಅಡ್ಡಿಯಿಲ್ಲ. ಆದೇ ಜ್ಞಾನವು ನಿರ್ದೋಷವಾದ ಬಂಗಾರದಂತೆ ಪರಿಶುದ್ಧವಾಗಿಯೂ ಸತೇಜವಾಗಿಯೂ ಇರುವದೆಂದು ಕಂಡುಬಂದರೆ ಎಷ್ಟೋ ಆನಂದವಾಗುವದು! ಒಂದು ಮಾಸಿಯಷ್ಟು ಕೂಡ ಬಂಗಾರವು ಹೊರಡುವದು ಕಠಿಣವಾಗಿರುವಂಥ ಅಶೋಧಿತ ಧಾತುಗಳ ದೊಡ್ಡ ರಾಶಿಯನ್ನು ಸಂಗ್ರಹಿಸುವದು ನೆಟ್ಟಗೋ, ಅಥವಾ ಅದರೊಳಗಿನ ಕಾಂಚನವನ್ನಷ್ಟೇ ಗ್ರಹಣ ಮಾಡಿ ಉಳಿದುದನ್ನು ಬಿಸುಡುವದು ಒಳಿತೋ? ಖನಿಯನ್ನು ಅಗಿಯುವ ಮನುಷ್ಯನು ತಿಲಗಾತ್ರವಾದ ಪಚ್ಚಕಲ್ಲಿಗೋಸ್ಕರ ಸಾವಿರಾರು ಮಣ್ಣಿನ ಬುಟ್ಟಿಗಳನ್ನು ಪರಿಶೋಧಿಸುತ್ತಿರುವಂತೆ, ಆಧ್ಯಾತ್ಮಿಕ ಜ್ಞಾನಸಂಪ್ರಾಪ್ತಿಯ ವಿಷಯದಲ್ಲಿ ಸಮುತ್ಸುಕನಾದ ಮನುಷ್ಯನು ತನ್ನ ಮನಸ್ಸಿನ ಯಾವತ್ತು ಕಿಲ್ಮಿಷಗಳನ್ನೂ, ಮತಮತಾಂತರಗಳನ್ನೂ, ನಾನಾತರದ ಭಾವನೆಗಳನ್ನೂ, ಮನೋರಥ ಹಾಗು ಕಲ್ಪನಾಮಯ ಸುಖಗಳನ್ನೂ ಸತ್ಯಜ್ಞಾನವೆಂಬ ರತ್ನಪ್ರಾಪ್ತಿಗೋಸ್ಕರ ಸ್ವಚ್ಛವಾಗಿ ತೊಳೆದುಬಿಡಲಿಕ್ಕೆಬೇಕು. ಈ ಪ್ರಕಾರ ಸತ್ಯಜ್ಞಾನವನ್ನು ಪಡೆದ ಮನುಷ್ಯನು ಜ್ಞಾನಿಯೂ, ಪೂರ್ಣವಿವೇಕಿಯೂ ಆಗುವನು. "ತಾಪಲ್ಯಾ ವಾಂಜೋನಿ ನವ್ಹೇ ಅಲಂಕಾರ ವಿಟೋನಿಯಾಂ ಸಾರ ಉರಲೇ ತೇ."

ಈ ಆತ್ಮಶೋಧನದಿಂದ ಕಟ್ಟಕಡೆಯಲ್ಲಿ ಉಳಿಯುವ ಸಾರರೂಪವಾದ ಜ್ಞಾನಕ್ಕೂ, ಸದ್ಗುಣಗಳಿಗೂ ವಿಶೇಷ ಅಭ್ಯಂತರವಿಲ್ಲ. ಈ ಜ್ಞಾನದ ಶೋಧದಲ್ಲಿಯೇ ಸಾಕ್ರೆಟೀಸನಿಗೆ ಸದ್ಗುಣಗಳ ಬೀಜವು ಗೊತ್ತಾಯಿತು. ಸಾಧುಸಂತರ ಪ್ರಾಸಾದಿಕ ವಾಣಿಯು ಸದ್ಗುಣದ ಸೂತ್ರವೆಂದು ಹೇಳಬಹುದು. ಜ್ಞಾನ ಮತ್ತು ಸದ್ಗುಣಗಳು ಒಂದರಿಂದೊಂದು ಭಿನ್ನವಾದವೆಂದರೆ, ಯಾವತ್ತು ಬುದ್ಧಿವಂತಿಕೆಯು ಲಯಹೊಂದಿತೆಂದು ತಿಳಿಯತಕ್ಕದ್ದು. ಮನುಷ್ಯನಿಗೆ ಯಾವ ವಿಷಯದ ಜ್ಞಾನವುಂಟೋ ಅದನ್ನೇ ಅವನು ಆಚರಿಸುತ್ತಾನೆ. ಯಾವ ವಿಷಯದ ಜ್ಞಾನವು ಅವನಿಗಿರುವದಿಲ್ಲವೋ ಅದು ಅವನ ಆಚರಣೆಯಲ್ಲಿ ಕಂಡು ಬರಲಾರದು. ಯಾವನೊಬ್ಬ ಮನುಷ್ಯನು 'ಪ್ರೇಮ'ವೆಂಬ ವಿಷಯವನ್ನು ಚನ್ನಾಗಿ ನಿರೂಪಿಸಬಹುದು; ಅಥವಾ ಅದನ್ನು ಕುರಿತು ದೊಡ್ಡದೊಂದು ನಿಬಂಧವನ್ನು ಬರೆಯಬಹುದು, ಆದರೆ ಅವನೇ ಕುಟುಂಬದೊಳಗಿನ ಮನುಷ್ಯ

ರೊಡನೆಯೂ ಇತರರೊಡನೆಯೂ ನಿಷ್ಠುರತೆಯಿಂದ ನಡೆಯುತ್ತಿದ್ದರೆ ಅವನಿಗೆ 'ಪ್ರೇಮ'ವೆಂಬದರ ಜ್ಞಾನವು ಸ್ವಲ್ಪಾದರೂ ಇರುವದೆಂದು ತಿಳಿಯಲಾಗುವದೋ? ಪೂರ್ಣ ಜ್ಞಾನಿಯಾದ ಮನುಷ್ಯನ ಅಂತಃಕರಣದಲ್ಲಿ ದಯಾ-ಶಾಂತಿಗಳು ಯಾವಾಗಲೂ ವಾಸವಾಗಿರುತ್ತವೆ. ಕೇವಲ ಶಬ್ದಪಂಡಿತನ ಪಾಂಡಿತ್ಯವು ಆ ದಯೆಯ ಪ್ರಸಂಗಕ್ಕೂ ಹತ್ತಲಾರದು. ಯಾವನ ಅಂತಃಕರಣವು ದ್ವೇಷದಿಂದ ವಿನಿರ್ಮುಕ್ತವಾಗಿದೆಯೋ ಅವನಿಗೇ ಚಿತ್ತಸ್ವಾಸ್ಥ್ಯವೆಂದರೇನೆಂಬದು ತಿಳಿಯುವದು, ಮತ್ತು ಅವನೇ "ಅದ್ವೇಷ್ಟಾ ಸರ್ವಭೂತಾನಾಮ್" ಎನಿಸಿಕೊಳ್ಳಲು ಅರ್ಹನಾಗುವನು. ದುಷ್ಟವಾದ ಅಂತಃಕರಣದಿಂದ ಹೊರಟಂಥ ಕಪಟಪೂರ್ಣವಾದ ಸದ್ಗುಣದ ವ್ಯಾಖ್ಯೆಯಿಂದ ಮನುಷ್ಯನ ಅಜ್ಞಾನವು ಮಾತ್ರ ಪ್ರಕಟವಾಗುತ್ತದೆ. ಕೇವಲ ಮಾಹಿತಿಯನ್ನು ಸಂಚಯಿಸುವದು ಜ್ಞಾನವಲ್ಲ. ಜ್ಞಾನದ ಅರ್ಥವು ಇದಕ್ಕೂ ಭಿನ್ನವಾಗಿದೆ. ಸದ್ಗುಣಗಳು ಪೂರ್ಣವಾಗಿ ನೆಲೆಗೊಂಡದ್ದರಿಂದ ಪ್ರಾಪ್ತವಾದ ಜ್ಞಾನವೇ ದೈವಿಕ ಜ್ಞಾನವು. ನಾವು ಅಜ್ಞಾನಿಗಳಾಗಿದ್ದು ನಮ್ಮ ಕಲ್ಪನೆಗಳು ಭ್ರಾಮಕವಾಗಿವೆಯೆಂಬದನ್ನು ತಿಳಿದು ನಮ್ರತೆಯಿಂದ ಬುದ್ಧಿಯನ್ನು ಆ ಭ್ರಮೆಯಿಂದ ಮುಕ್ತವಾಗಿ ಮಾಡುವದರಿಂದ ಬುದ್ಧಿಯು ಕುಶಾಗ್ರವಾಗಿ ಮೈಯಲ್ಲಿ ಒಂದು ತರದ ಸಾಮರ್ಥ್ಯವು ಬರುತ್ತದೆ. ಯಾವನು ಶುದ್ಧನಾಗಿರುವನೋ ಅವನಲ್ಲಿಯೇ ಸಾತ್ತ್ವಿಕ ಪ್ರೇಮಭಾವವು ಉತ್ಪನ್ನವಾಗುವದು; ಅವನು ಯಾವದಕ್ಕೂ ಭಯಪಡಲಾರನು. ಆದುದರಿಂದ ಮನಸ್ಸು ಶುದ್ಧವಾಗಿರಲಿಕ್ಕೆಬೇಕು.

ದುಷ್ಕೃತ್ಯಗಳಲ್ಲಿ ಮಗ್ನನಾದ ಮನುಷ್ಯನು ತನ್ನ ಕೃತಿಗಳಿಂದ ಜನರಲ್ಲಿ ಪ್ರಸಿದ್ಧನಾಗಿರುತ್ತಾನೆ; ಆದರೆ ಸದ್ವಿಚಾರಿಯಾದ ಮನುಷ್ಯನು ತನ್ನ ಸದ್ಗುಣಗಳಿಂದ ಹೆಸರಾಗಿರುತ್ತಾನೆ. ಕುವಿಚಾರಗಳಲ್ಲಿ ಆಸಕ್ತನಾದವನಿಗೆ ದುಃಖಶೋಕಗಳ ಪೀಡೆಯ ಮೂಲಕ ಚಿತ್ತಸ್ವಾಸ್ಥ್ಯವು ಎಂದೂ ಲಭಿಸಲಾರದು. ಇತರ ಜನರು ತನ್ನನ್ನು ಘಾತಿಸುವದಕ್ಕೂ, ತ್ರಾಸ ಕೊಡುವದಕ್ಕೂ, ಮೋಸಗೊಳಿಸುವದಕ್ಕೂ, ಅವಮಾನಗೊಳಿಸುವದಕ್ಕೂ, ಎಲ್ಲ ಬಗೆಯಿಂದ ತನ್ನನ್ನು ನಾಶಪಡಿಸುವದಕ್ಕೂ ಸಮಯವನ್ನು ಕಾದುಕೊಂಡಿರುತ್ತಾರೆಂದು ಆತನು ಯಾವಾಗಲೂ ತಿಳಿದುಕೊಳ್ಳುವನು. ಸದ್ವರ್ತನದ ಬೆಂಬಲವು ಎಷ್ಟು ಬಲವಾದದ್ದೂ ದೊಡ್ಡದೂ ಆಗಿರುವದೆಂಬದರ ಕಲ್ಪನೆಯೇ ಅವನಿಗಿಲ್ಲದಿರುವ ಕಾರಣ ತನ್ನ ವಿಷಯವಾಗಿ ಸಂಕುಚಿತ ವಿಚಾರಗಳ ಹೊರತು ಎರಡನೆಯದೇನೂ ಆತನ ಮನಸ್ಸಿನಲ್ಲಿ ಬರುವದಿಲ್ಲ. ಆದುದರಿಂದ ಅವನು ಸಂಶಯ, ದ್ವೇಷ, ಸೇಡುತೀರಿಸಿಕೊಳ್ಳೋಣ, ಸೇರಿಗೆ ಸವ್ವಾಸೇರು ಮೊದಲಾದ ಪ್ರಕಾರಗಳನ್ನಾಶ್ರಯಿಸಿ ತನ್ನ ದುರ್ಗುಣಗಳ ಸಹಾಯದಿಂದ ನಿಂದ್ಯವಾದ ವರ್ತನದಲ್ಲಿಯೇ ತೊಡಗಿರುತ್ತಾನೆ. ತನ್ನನ್ನು ಯಾರಾದರೂ ನಿಂದಿಸಲು ತಾನು ಅನ್ಯರನ್ನು ನಿಂದಿಸಹತ್ತುತ್ತಾನೆ. ತನ್ನ ಮೇಲೆ ಯಾರಾದರೂ ದೋಷವನ್ನಾರೋಪಿಸಿದರೆ ಕೂಡಲೇ ಅವರ ಕಡವನ್ನು ತೀರಿಸುತ್ತಾನೆ; ಮತ್ತು ಯಾರಾದರೂ ತನ್ನ ಮೇಲೆ ಕೈ ಮಾಡಿದರೆ ಅದರ ಇಮ್ಮಡಿ ಕಸುವಿನಿಂದ ಅವರ ಸೇಡು ತೀರಿಸಿಕೊಳ್ಳುತ್ತಾನೆ. ನನ್ನೊಡನೆ ಜನರು ಯೋಗ್ಯ ರೀತಿಯಿಂದ ನಡೆಯುವದಿಲ್ಲವೆಂದು

ಕುವಿಚಾರಿಯಾದ ಮನುಷ್ಯನ ಭಾವನೆಯಿರುವದರಿಂದ ದುಃಖ ಹಾಗು ಸೇಡು ತೀರಿಸಿ ಕೊಳ್ಳುವ ಕಲ್ಪನೆ ಇವುಗಳಿಗೆ ಆತನು ಪೂರ್ಣವಾಗಿ ಅಧೀನನಾಗುತ್ತಾನೆ. ಆತನಿಗೆ ಸಮ್ಯಗ್‌ಜ್ಞಾನವಿಲ್ಲದ್ದರಿಂದಲೂ, ಚಲೋ ಮತ್ತು ಕೆಟ್ಟದು ಇವುಗಳೊಳಗಿನ ಅಂತರ ವನ್ನು ತಿಳಿಯುವಷ್ಟು ಬುದ್ಧಿವಂತಿಕೆಯು ಅವನಲ್ಲಿ ಇಲ್ಲದಿರುವದರಿಂದಲೂ ಎರಡನೆ ಯವರ ದುಷ್ಕೃತ್ಯಗಳ ಮೂಲಕ ನನಗೆ ದುಃಖವಾಗಿರದೆ, ನನ್ನ ದುಃಖದ ಮೂಲವು ನನ್ನ ದುಷ್ಟ ವರ್ತನದಲ್ಲಿಯೇ ಇದೆಯೆಂಬದರ ಕಲ್ಪನೆಯು ಅವನಿಗೆ ಬರುವದಿಲ್ಲ.

ಸದ್ವಿಚಾರಿಯಾದ ಮನುಷ್ಯನನ್ನು 'ತಾನು' ಮತ್ತು 'ತನ್ನ ಹಿತ' ಈ ವಿಚಾರವು ಬಾಧಿಸಲು ಶಕ್ತವಾಗುವದಿಲ್ಲ; ಮತ್ತು ಎರಡನೆಯವರ ದುಷ್ಟ ಕೃತಿಗಳಿಂದ ಅವನಿಗೆ ಚಿತ್ತಕ್ಷೋಭವಾಗಲಿ ಸಂತಾಪವಾಗಲಿ ಉಂಟಾಗುವದಿಲ್ಲ. 'ಇವನು ನನ್ನ ಅಕಲ್ಯಾಣ ಮಾಡಿದನು,' ಈ ಪ್ರಕಾರದ ವಿಚಾರವು ಆತನ ಮನಸ್ಸನ್ನು ಸೋಂಕುವದೇ ಇಲ್ಲ. ಎರಡನೆಯವರ ದುಷ್ಟ ಕೃತಿಗಳ ಪರಿಣಾಮವನ್ನು ನಾನು ಭೋಗಿಸಬೇಕಾಗುವದಿಲ್ಲ; ನನ್ನ ಪಾಲಿಗೆ ಬರುವದೆಲ್ಲ ನನ್ನ ದುಷ್ಕೃತ್ಯಗಳ ಫಲವೇ ಎಂದು ಆತನು ಪೂರ್ಣವಾಗಿ ತಿಳಿದುಕೊಂಡಿರುತ್ತಾನೆ. ಅದರಂತೆ ನನ್ನ ಹಿತಾಹಿತಗಳು ನನ್ನ ಕೈಯಲ್ಲಿಯೇ ಇದ್ದು, ಚಿತ್ತಸ್ವಾಸ್ಥ್ಯವು ಇಲ್ಲದಂತಾಗುವದಕ್ಕೆ ನಾನೇ ಕಾರಣವೆಂಬದೂ ಆತನಿಗೆ ಪೂರ್ಣವಾಗಿ ಗೊತ್ತಿರುತ್ತದೆ. "ಆತ್ಮೈವ ಆತ್ಮನೋಬಂಧುರಾತ್ಮೈವ ರಿಪುರಾತ್ಮನಃ" ಅಥವಾ "ಸ್ವಕರ್ಮ ಸೂತ್ರ ಗ್ರಥಿತೋ ಹಿ ಲೋಕಃ" ಇದು ಅವನಿಗೆ ಚನ್ನಾಗಿ ತಿಳಿದಿರುತ್ತದೆ. ಸದ್ವರ್ತನವೇ ಆತನ ಆಧಾರಸ್ತಂಭವಾಗಿದ್ದು, ಪರರಿಗೆ 'ಅಪಕಾರ' ಮಾಡುವ ಕಲ್ಪನೆಯು ಅವನ ಮನಸ್ಸನ್ನು ಸ್ಪರ್ಶ ಸಹ ಮಾಡುವದಿಲ್ಲ. ಆತನ ಚಿತ್ತಸ್ವಾಸ್ಥ್ಯವು ಯಾವ ಕಾರಣದಿಂದಲೂ ಚಂಚಲವಾಗಲಾರದು; ಸೇಡು ತೀರಿಸುವ ಕಲ್ಪನೆಯು ಆತನ ಹೃದಯ ದಲ್ಲಿ ಭೇದವನ್ನು ಮಾಡಲರಿಯದು. ಯಾವದೇ ತರದ ಮೋಹಕ್ಕೂ ಆತನು ಎದು ರಾಗಲು ಸಿದ್ಧನಿರುತ್ತಾನೆ; ಆದರೆ ಆ ಮೋಹಪಾಶವು ಅವನ ಅಂತಃಕರಣವನ್ನು ಮಾತ್ರ ಬಂಧಿಸಲು ಸಮರ್ಥವಾಗಲಾರದು. ಸದ್ಗುಣಗಳ ಆಧಾರವನ್ನು ಅವನು ದೃಢ ವಾಗಿ ಆಶ್ರಯಿಸಿರುವದರಿಂದ ಅಭಂಗವಾದ ಧೈರ್ಯವೂ, ಅಖಂಡವಾದ ಚಿತ್ತ ಸ್ವಾಸ್ಥ್ಯವೂ ಅವನಿಗೆ ಲಭ್ಯವಾಗಿರುತ್ತವೆ.

ಸದ್ವಿಚಾರಿಯಾದ ಮನುಷ್ಯನು ಸಜೀವ ಹಾಗು ನಿರ್ಜೀವ ವಸ್ತುಜಾತಗಳ ವಿಷ ಯವಾಗಿ ತಾನು ಯಾವ ತರದ ಭಾವನೆಯುಳ್ಳವನಾಗಬೇಕೆಂಬದನ್ನು ತಪ್ಪಿಲ್ಲದೆ ತಿಳಿದು ಕೊಂಡು ಅದಕ್ಕನುಸಾರವಾಗಿ ವರ್ತಿಸುತ್ತಾನೆ. ಈ ಭಾವನೆಯಾದರೆ ಸರ್ವತ್ರ ಸಮ ದೃಷ್ಟಿಯು. ಈ ಪ್ರವೃತ್ತಿಯು ವೈರಾಗ್ಯವಲ್ಲ; ಸಮ್ಯಗ್-ಜ್ಞಾನವು. ಈ ಭಾವನೆಯು ಉದಾಸೀನತೆಯಲ್ಲ; ಪೂರ್ಣವಾದ ಜಾಗರೂಕತೆಯು. ವಿಚಾರವಂತನಿಗೆ ಜೀವಿತಕ್ಕೆ ಆಧಾರಭೂತವಾದ ಸಂಗತಿಗಳ ಪೂರ್ಣ ಜ್ಞಾನವಾಗಿರುವದರಿಂದ ಆತನ ಭ್ರಮಪಟ ಲವು ದೂರವಾಗಿ ವಸ್ತುಗಳು ಇದ್ದಕ್ಕಿದ್ದ ಹಾಗೆಯೇ ಆತನಿಗೆ ಗೋಚರವಾಗುತ್ತವೆ.

ಆಯುಷ್ಯದೊಳಗಿನ ಸಣ್ಣಪುಟ್ಟ ಸಂಗತಿಗಳ ಕಡೆಗೆ ಸಹ ಅವನು ದುರ್ಲಕ್ಷ್ಯ ಮಾಡುವದಿಲ್ಲ. ಆದರೆ ಸೃಷ್ಟಿ ನಿಯಮದ ಪ್ರಕಾರ ಅವುಗಳ ಸಂಬಂಧವನ್ನು ಜೋಡಿಸುತ್ತಿರುವಾಗ ಈ ಅಪಾರವಾದ ವಿಶ್ವದಲ್ಲಿ ಆ ಸಂಗತಿಗಳ ಸಂಬಂಧವು ಯಾವ ಪ್ರಕಾರದ್ದಿರುವದೆಂಬದು ಆತನಿಗೆ ಸ್ಪಷ್ಟವಾಗಿ ತಿಳಿಯುತ್ತದೆ. ವಿಶ್ವದ ಘಟನೆಯು ನ್ಯಾಯತತ್ವದಿಂದಲೇ ನಡೆದಿದೆಯೆಂಬದು ಅವನಿಗೆ ಪೂರ್ಣವಾಗಿ ಮನವರಿಕೆಯಾಗುತ್ತದೆ. ಜನರ ಕಲಹಗಳನ್ನು ಅವನು ಕೌತುಕದೃಷ್ಟಿಯಿಂದ ನೋಡುವನು; ಆದರೆ ಅವುಗಳಲ್ಲಿ ಎಂದೂ ಸೇರುವದಿಲ್ಲ. ಅವನಲ್ಲಿ ಪಕ್ಷಪಾತವೆಂಬದು ಇರುವದೇ ಇಲ್ಲ. ಅವನ ಸಹಾನುಭೂತಿಯು ಎಲ್ಲರಲ್ಲಿಯೂ ಸಮನಾಗಿಯೇ ಇರುತ್ತದೆ. "ಸಮಃ ಶತ್ರೌಚ ಮಿತ್ರೇಚ" ಎಂಬಂತೆ ಅವನ ವರ್ತನವಿರುತ್ತದೆ. ಆತನ ಕೃಪೆಯು ಒಬ್ಬನ ಮೇಲೆ ಹೆಚ್ಚಾಗಿಯೂ ಇನ್ನೊಬ್ಬನ ಮೇಲೆ ಕಡಿಮೆಯಾಗಿಯೂ ಕೂಡ್ರುವದೇ ಇಲ್ಲ. "ತುಲ್ಯೋ ಮಿತ್ರಾರಿಪಕ್ಷಯೋಃ" ಆತನ ಆತ್ಮಭಾವವು ಸರ್ವತ್ರ ಜಾಗೃತವಾಗಿರುತ್ತದೆ. ವ್ಯಕ್ತಿಗಳಲ್ಲಿ ಸದ್ಗುಣವೇ ವಿಜಯವನ್ನು ಹೊಂದಿದ್ದು ಕಂಡುಬರುವಂತೆ, ಜಗತ್ತಿನಲ್ಲಿ 'ಸತ್ಯ'ವೇ ಜಯಶಾಲಿಯಾಗುವದು. ಆದರೆ ಪಾಪಪ್ರವೃತ್ತಿಯುಳ್ಳ ಮನುಷ್ಯನು ತನ್ನನ್ನು ತಾನೇ ನಾಶ ಮಾಡಿಕೊಳ್ಳುತ್ತಿರುತ್ತಾನೆ.

'ಸತ್ಯ'ಕ್ಕೆ ನಾಶವೇ ಇಲ್ಲ. "ನಾಭ ವೋ ವಿದ್ಯತೇ ಸತಃ" ನ್ಯಾಯಕ್ಕೆ ಮರಣವಿಲ್ಲ. ಮನುಷ್ಯನು ಮನಸ್ಸಿಗೆ ಬಂದದ್ದನ್ನು ಮಾಡಿದರೂ ನ್ಯಾಯವಾಗಲಿ ಸತ್ಯವಾಗಲಿ ಇಲ್ಲದಂತಾಗಲಾರದು. ನ್ಯಾಯವನ್ನು ದೂರೀಕರಿಸಿ ಇಲ್ಲವೆ ಅದನ್ನು ನಾಶಗೊಳಿಸಿ 'ಅಸತ್ಯ'ದ ಪರಿಸ್ಥಾಪನ ಮಾಡುವದು ಎಂದಿಗೂ ಸಾಧ್ಯವಲ್ಲ. ನ್ಯಾಯದ ಸಿಂಹಾಸನವು ಅತ್ಯಂತ ದುರ್ಭೇದ್ಯವೂ ದುರ್ಜೇಯವೂ ಆಗಿರುವದರಿಂದ ಅದರ ಮೇಲೆ ಅಭಿಯೋಗ ಮಾಡುವದು ಕೂಡ ಅಶಕ್ಯವಾಗಿದೆ. ಅಂದಮೇಲೆ ಅದನ್ನು ಇಲ್ಲದಂತೆ ಮಾಡುವ ಬಗೆ ಏನು? ಈ ಜ್ಞಾನವೇ ಸದ್ವಿಚಾರಿಯಾದ ಮನುಷ್ಯನ ಚಿತ್ತಸ್ವಾಸ್ಥ್ಯದ ಆಧಾರಸ್ತಂಭವಾಗಿದೆ. ಸ್ವತಃ ಕಿಲ್ಮಿಷವಿರಹಿತನಾದುದರಿಂದ ಅವನು ಸರ್ವತ್ರವೂ ಸಮದೃಷ್ಟಿಯುಳ್ಳವನಿರುತ್ತಾನೆ. ಆತನ ಅಂತಃಕರಣವು ಪ್ರೇಮಮಯವಾಗಿರುವದರಿಂದ ಅವನಿಗೆ ಸರ್ವವೂ ಆತ್ಮದ ಪ್ರತಿಬಿಂಬದಂತೆಯೇ ಗೋಚರವಾಗುವದು; ಮತ್ತು ದುಷ್ಟವಿಕಾರಗಳನ್ನು ಗೆದ್ದಿರುವದರಿಂದ ಸರ್ವತ್ರವೂ ಸತ್ಯದ ವಿಜಯವಾದದ್ದೇ ಅವನಿಗೆ ಕಾಣಿಸುತ್ತದೆ.

ಯಾವನು ಎರಡನೆಯವರನ್ನು ದ್ವೇಷಿಸುವದಿಲ್ಲವೋ ಯಾವನಲ್ಲಿ ಅಹಂಕಾರವಿಲ್ಲವೋ, ಯಾವನು ವಿಷಯಗಳಿಂದ ನಿವೃತ್ತನಾಗಿರುವನೋ ಅವನೇ ನಿಜವಾದ ವಿವೇಕಿಯೆಂದೆನ್ನಿಸಿಕೊಳ್ಳುವನು. ಇಂತಹ ಮನುಷ್ಯನ ದೃಷ್ಟಿಯ ಅಜ್ಞಾನಪಟಲವು ದೂರವಾಯಿತೆಂದರೆ ಜಗತ್ತಿನ ಯೋಗ್ಯ ಜ್ಞಾನವಾಗುತ್ತದೆ. ಆತನ ಕಡು ವೈರಿಗಳೂ ಕೂಡ ಅವನಲ್ಲಿ ದ್ವೇಷವನ್ನುತ್ಪನ್ನಮಾಡಲು ಶಕ್ತರಾಗುವದಿಲ್ಲ. ಶತ್ರುಗಳ ವಿಷಯವಾಗಿ ಅವನಲ್ಲಿ ದಯೆಯು ಉತ್ಪನ್ನವಾಗುತ್ತದೆ. ಅವನಿಗೆ ಯಾವ ಸಂಗತಿಗಳ ಜ್ಞಾನ

ವಾಗಿಲ್ಲವೋ ಅವುಗಳ ವಿಷಯವಾಗಿ ಅವನು ವ್ಯರ್ಥವಾದ ಹರಟೆಗಳನ್ನು ಕೊಚ್ಚುವದಿಲ್ಲ. ಅವನ ಹೃದಯವು ಯಾವಾಗಲೂ ಶಾಂತಿಸುಖವನ್ನು ಅನುಭವಿಸುತ್ತದೆ.

ಮನಸ್ಸಿನೊಳಗಿನ ಶತ್ರುಭಾವವು ಇಲ್ಲದಂತಾಗಿ; ದುಃಖದ ಮೂಲವು ಉಳಿಯದೆ, ದ್ವೇಷಬುದ್ಧಿಯು ಹೊರಟುಹೋಗಿ, ಮೊದಲು ತಿರಸ್ಕರಣೀಯವಾಗಿ ತೋರುವ ವಸ್ತುಗಳ ವಿಷಯಕ್ಕೆ ಪ್ರೇಮಭಾವವು ಉತ್ಪನ್ನವಾಗಹತ್ತಿತೆಂದರೆ ಆಗ ಆ ಮನುಷ್ಯನ ವಿಚಾರಗಳು ಸತ್ಯಮಾರ್ಗವನ್ನನುಸರಿಸಿ ನಡೆದಿವೆಯೆಂದು ಭಾವಿಸಬೇಕು.

ಯಾವನೊಬ್ಬ ಮನುಷ್ಯನು ಕಲಿತವನಿರಬಹುದು. ಆದರೆ ಅವನಲ್ಲಿ 'ವಸ್ತುವಿವೇಕ'ವಿಲ್ಲದಿದ್ದರೆ ಅವನು ವಿವೇಕಿ ಅಲ್ಲ. ಕೇವಲ ಪುಸ್ತಕದ ಜ್ಞಾನದಿಂದ ಮನುಷ್ಯನು ದುಃಖದಿಂದ ಮುಕ್ತನಾಗಲರಿಯನು; ಅಥವಾ ಅತಿಶಯವಾದ ಅಭ್ಯಾಸ ಮಾತ್ರದಿಂದ ಅವನು ದುಃಖಶೋಕಗಳಿಂದ ಬಿಡುಗಡೆಯನ್ನು ಹೊಂದಲಾರನು. ಕೇವಲ 'ಆತ್ಮಜಯ'ದಿಂದಲೇ ಯಾವತ್ತು ಆಧಿವ್ಯಾಧಿಗಳ ಪರಿಹಾರವಾಗುವದು. ಮತ್ತು ಸದ್ವರ್ತನದಿಂದ ಮನುಷ್ಯನ ದುಃಖವು ನಿರ್ಮೂಲವಾಗುವದು.

ಕೇವಲ ಪಂಡಿತರಿಗಾಗಲಿ ಆತ್ಮವಿಶ್ವಾಸಿಗಳಿಗಾಗಲಿ ಶ್ರೇಯಃಸಾಧನವನ್ನು ಮಾಡಲಿಕ್ಕೆ ಬಂದೇಬರಬಹುದೆಂಬ ನಿಯಮವನ್ನು ಹೇಳಲಾಗುವದಿಲ್ಲ. ಆದರೆ ಶುದ್ಧಾಂತಃಕರಣವುಳ್ಳ ಸದಾಚಾರಿಗಳಾದ ಜ್ಞಾನವಂತರಿಗೆ ಅದು ನಿಶ್ಚಯವಾಗಿ ಸಾಧ್ಯವಾಗುವದು. ಮೊದಲಿನ ಎರಡು ಪ್ರಕಾರದ ಜನರಿಗೆ ಜಗತ್ತಿನ ವ್ಯವಹಾರದಲ್ಲಿ ಅವರ ವಿವಕ್ಷಿತ ಕಾರ್ಯಗಳಲ್ಲಿ ಒಂದು ವೇಳೆ ಯಶಸ್ಸು ಬಂದರೂ ಬರಬಹುದು. ಆದರೆ ಎರಡನೆಯ ಮೂರು ಪ್ರಕಾರದ ಜನರಿಗೆ ತಮ್ಮ ಆತ್ಯಂತಿಕ ಕಲ್ಯಾಣವನ್ನು-ಪಾರಮಾರ್ಥಿಕ ಕಲ್ಯಾಣವೆಂಬ ದೊಡ್ಡ ವಿಜಯವನ್ನು-ಸಂಪಾದಿಸಲಿಕ್ಕೆ ಸಾಧ್ಯವಾಗುವದು. ಆ ವಿಜಯವು ಎಂದೂ ಊನತೆಯಿಲ್ಲದಂಥಾದ್ದೂ, ಊನತೆಯು ಪ್ರಾಪ್ತವಾದರೂ ತನ್ನ ಮಹತ್ವವನ್ನೇ ಹೆಚ್ಚುಹೆಚ್ಚಾಗಿ ವ್ಯಕ್ತಗೊಳಿಸುವಂಥಾದ್ದೂ ಎನಿಸುವಷ್ಟು ಪೂರ್ಣವಾಗಿಯೂ, ಅವಿನಾಶಿಯಾಗಿಯೂ, ತೇಜಸ್ವಿಯಾಗಿಯೂ ಇರುತ್ತದೆ.

ಸದ್ಗುಣಗಳು ಅಚಲವಾಗಿವೆ. ಅವುಗಳ ವಿಷಯವಾಗಿ ಭ್ರಮವು ಉತ್ಪನ್ನವಾಗುವಂತಿಲ್ಲ. ಅಥವಾ ಅವು ನಷ್ಟವಾಗುವಂತೆಯೂ ಇಲ್ಲ. ಯಾವನ ವಿಚಾರಗಳು ಸತ್ಯವನ್ನು ಅನುಸರಿಸಿ ಇರುತ್ತವೆಯೋ, ಯಾವನು ಸದ್ವರ್ತನದಿಂದ ನಡೆಯುವನೋ, ಯಾವನ ಮನಸ್ಸು ಸತ್ಯಮಾರ್ಗವನ್ನು ಬಿಟ್ಟು ಹೋಗುವದಿಲ್ಲವೋ ಅವನೇ ಇಹಪರಗಳಲ್ಲಿ ಉತ್ತಮ ಗತಿಯನ್ನೈದುವನು— "ಆಚರತ್ಯಾತ್ಮನೋ ಶ್ರೇಯಸ್ತತೋ ಯಾತಿ ಪರಾಂ ಗತಿಮ್". ಸತ್ಯ ಮತ್ತು ಸನ್ಮಾರ್ಗ ಇವು ಜಗತ್ತಿನ ಆಧಾರಸ್ತಂಭವಾಗಿದ್ದು ಸದ್ಗುಣಕ್ಕೆ ವಿಜಯವು ಪ್ರಾಪ್ತವಾಗಲೇ ಬೇಕು. "ಸರ್ವಂ ಸತ್ಯೇ ಪ್ರತಿಷ್ಠಿತಮ್."

○

# ೭. ಶಾಂತಿ ಮತ್ತು ಉಪಾಯಚಿಂತನ

ಯಾವನ ಪಕ್ಷವು ಸತ್ಯವಾಗಿರುವದೋ ಅವನು ತೀರ ಶಾಂತನಿರುತ್ತಾನೆ. ಯಾವನ ಮನಸ್ಸು ಶುದ್ಧವಾಗಿರುವದೋ ಯಾವನು ಸನ್ಮಾರ್ಗದಿಂದ ನಡೆಯುವನೋ ಅಂತಹನನ್ನು ಕ್ಷೋಭ, ಚಿಂತೆ ಮತ್ತು ಭೀತಿ ಇವು ಬಾಧಿಸಲಾರವು. ಆತ್ಮವಿಜಯದಿಂದ ಅಖಂಡವಾದ ಶಾಂತಿಯು ಪ್ರಾಪ್ತವಾಗುತ್ತದೆ. ಶಾಂತಿಯಿಂದ ಇತರ ಸದ್ಗುಣಗಳ ತೇಜಸ್ಸು ಉದ್ದೀಪಿತವಾಗುತ್ತದೆ. ಅವತಾರಿ ಮನುಷ್ಯನ ಮಸ್ತಕದ ಸುತ್ತಲೂ ತೇಜೋವಲಯವಿರುವಂತೆ, ಶಾಂತಿಯು ಸದ್ಗುಣಗಳ ತೇಜೋವಲಯವಾಗಿದೆ. ಮನುಷ್ಯನು ಎಷ್ಟೇ ಸಾಮರ್ಥ್ಯವಂತನಿದ್ದರೂ ಅವನಲ್ಲಿ ಶಾಂತಿಯು ಇಲ್ಲದಿದ್ದರೆ, ಅವನ ಸಾಮರ್ಥ್ಯವೆಂದರೆ ದುರ್ಬಲತೆಯ ಪರಮಾವಧಿಯೆಂದೇ ಹೇಳಬೇಕಾಗುವದು. ಯಾವ ಮನುಷ್ಯನ ಶಾಂತಿಯು ಅತ್ಯಲ್ಪವಾದ ಬಾಹ್ಯೋಪಾಧಿಯಿಂದ ಸಹ ಭಂಗವನ್ನೈದುವದೋ ಆ ಮನುಷ್ಯನ ದೈವಿಕಸಾಮರ್ಥ್ಯವು ಎಲ್ಲಿರುವದೆಂದು ಭಾವಿಸಬೇಕು ? ದೈವಿಕ ಸಾಮರ್ಥ್ಯದ ಮಾತು ಒತ್ತಟ್ಟಿಗಿರಲಿ, ಕೇವಲ ಪೌರುಷಬಲವಾದರೂ ಇದೆಯೆಂದು ತಿಳಿಯಲು ಅವಕಾಶವಿದೆಯೋ ? ಯಾವ ಮನುಷ್ಯನು ಮೋಹದ ಪ್ರಸಂಗವು ಪ್ರಾಪ್ತವಾಗಿರಲು ಮನಸ್ಸನ್ನು ಬಿಗಿದು ಹಿಡಿಯದೆ ಮೋಹದ ಅಧೀನನಾಗುವನೋ ಅಥವಾ ಅಲ್ಪಸ್ವಲ್ಪ ಬಿಕ್ಕಟ್ಟಿನ ಪ್ರಸಂಗದಿಂದ ಕ್ರೋಧಾವಿಷ್ಟನಾಗುವನೋ ಅವನು ಇತರರ ಮೇಲೆ ತನ್ನ ವರ್ಚಸ್ಸನ್ನು ಹೇಗೆ ಸ್ಥಾಪಿಸುವನು ?

ಸದ್ವರ್ತನದ ಮನುಷ್ಯರು ತಮ್ಮನ್ನು ತಮ್ಮ ಅಧೀನದಲ್ಲಿಟ್ಟುಕೊಂಡು ವಿಷಯವಾಸನೆಗಳ ಮೇಲೂ ಮನೋಭಾವನೆಗಳ ಮೇಲೂ ತೀಕ್ಷ್ಣದೃಷ್ಟಿಯನ್ನಿಡುತ್ತಾರೆ. ಈ ಪ್ರಕಾರ ಅವರು ಮನಸ್ಸನ್ನು ಪೂರ್ಣವಾಗಿ ತಮ್ಮ ಸ್ವಾಧೀನದಲ್ಲಿಟ್ಟುಕೊಂಡರೆಂದರೆ ಸಾವಕಾಶವಾಗಿ ಅವರಿಗೆ ಶಾಂತಿಃಸುಖವು ಲಭಿಸಹತ್ತುತ್ತದೆ. ಶಾಂತಿಯು ಹೆಚ್ಚು ಹೆಚ್ಚಾಗಿ ನೆಲೆಗೊಂಡಂತೆ ವರ್ಚಸ್ಸೂ, ಸಾಮರ್ಥ್ಯವೂ, ದೊಡ್ಡಸ್ತಿಕೆಯೂ ಶಾಶ್ವತನಾದ ಆನಂದವೂ ಅವರಿಗೆ ಪ್ರಾಪ್ತವಾಗಿ, ಕಟ್ಟಕಡೆಗೆ ಜೀವಿತದ ಸಾಫಲ್ಯವನ್ನು ಮಾಡಿಕೊಂಡು ಅವರು ಎಲ್ಲರಿಂದಲೂ ಧನ್ಯರೆನಿಸಿಕೊಳ್ಳುತ್ತಾರೆ.

ಯಾರಿಗೆ ಆತ್ಮಜಯವನ್ನು ಮಾಡಲಿಕ್ಕಾಗುವದಿಲ್ಲವೋ ಯಾರು ಇಂದ್ರಿಯಗಳಿಗೂ ವಾಸನೆಗಳಿಗೂ ದಾಸರಾಗುವರೋ, ಯಾರು ಸುಖೋಪಭೋಗ ಹಾಗು ನಿಷಿದ್ಧವಾದ ಸುಖಸೇವನೆ ಇವುಗಳಲ್ಲಿ ಮಗ್ನರಿರುವರೋ, ಅವರ ಆಯುಷ್ಯದ ಇತಿಕರ್ತವ್ಯತೆಯು ಸಾಧ್ಯವಾಗಲಿಕ್ಕೆ ಬೇಕಾದ ಸಿದ್ಧತೆಯು ಇನ್ನೂ ಆಗಿಲ್ಲವೆಂದು ತಿಳಿಯಬೇಕು. ಅವರಿಗೆ ಶಾಂತತೆಯ ಬೆಲೆಯು ಗೊತ್ತಾಗುವಂತೆಯೂ ಇಲ್ಲ; ಅದು ಅವರಿಗೆ ದೊರೆಯುವಂತೆಯೂ ಇಲ್ಲ. ಇಂತಹ ಜನರು ಬಾಯಿಂದ ಶಾಂತತೆಯು ಬೇಕೆಂದು ನುಡಿ

ದರೂ ನುಡಿಯಬಹುದು. ಆದರೆ ಅವರ ಅಂತಃಕರಣದ ಮೇಲೆ ಮಾತ್ರ ಯಾವ ತರದ ಪರಿಣಾಮವೂ ಉಂಟಾಗಿರುವದಿಲ್ಲ. ಇಂತವರ ದೃಷ್ಟಿಯಿಂದ ಶಾಂತಿ ಶಬ್ದದ ಅರ್ಥ ವೆಂದರೆ— ಒಂದು ಸುಖದ ನಂತರ ಯಾವ ಸುಖವನ್ನು ಸೇವಿಸಬೇಕೆಂದು ಅವರು ತಮ್ಮ ಇಚ್ಛೆಯಿಂದ ನಿಶ್ಚಯಿಸಿರುವರೋ ಅದರ ಉಪಭೋಗವನ್ನು ತೆಗೆದುಕೊಳ್ಳು ವದು.

ಯಾವನಿಗೆ ಶಾಂತಿಯು ಪ್ರಾಪ್ತವಾಗುವದೋ, ಅತನ ಪ್ರವೃತ್ತಿಯು ಪಾಪಾ ಚರಣೆಯು ಕಡೆಗೆ ಆಗದೆ ಇರುವದರಿಂದ ಅವನಿಗೆ ದುಃಖವನ್ನಾಗಲಿ ಪಶ್ಚಾತ್ತಾಪವನ್ನಾ ಗಲಿ ಮಾಡುವ ಪ್ರಸಂಗವೇ ಬರುವದಿಲ್ಲ. ಹರ್ಷಾತಿಶಯದ ಪ್ರಸಂಗವು ಬಾರದಿದ್ದದ ರಿಂದ ಮೂರ್ಖತೆಯಿಂದ ದುಃಖಕಾರಕ ಉದ್ವೇಗವನ್ನು ಸಹನ ಮಾಡಿಕೊಳ್ಳುವ ಅವಶ್ಯವೂ ಉಳಿಯುವದಿಲ್ಲ. ನಿಂದ್ಯಕರ್ಮವು ಕೈಯಿಂದ ಘಟಿಸದೆ ಇರುವದರಿಂದ ಉದ್ವೇಗವನ್ನಾಗಲಿ ಮಾನಹಾನಿಯನ್ನಾಗಲಿ ಉಪಭೋಗಿಸಬೇಕಾಗುವದಿಲ್ಲ. ಪಾಪಾ ಚರಣ, ಸುಖದ ಆನಂದ, ದುಃಖದ ಉದ್ವೇಗ, ಅಥವಾ ಕುಕರ್ಮಗಳ ನಾಶ ಇವು ಆಗಿ ಕೇವಲ 'ಸನ್ಮಾರ್ಗ'ವು ಮಾತ್ರ ಉಳಿಯುತ್ತದೆ. ಸತ್ಯಕ್ಕೆ ಯಾವಾಗಲೂ ಶಾಂತಿಯ ಆವರಣವಿರುತ್ತದೆ. ಶಾಂತತೆಯಿಂದ ಯುಕ್ತವಾದ ಆಯುಷ್ಯವು ಅಖಂಡ ಸುಖದ ಖನಿ ಯೆಂದು ಹೇಳಬಹುದು. ಮನಸ್ಸು ಅಧೀನದಲ್ಲಿಲ್ಲದವರಿಗೆ ಯಾವ ಕರ್ತವ್ಯಕರ್ಮಗಳು ತ್ರಾಸದಾಯಕವೆನಿಸುವವೋ, ಅವೇ ಶಾಂತಿವಂತನಾದ ಮನುಷ್ಯನಿಗೆ ಆನಂದದಾಯಕ ವೆನಿಸುತ್ತವೆ. ಶಾಂತಿಯುಕ್ತ ಜೀವಿತಕ್ರಮದಲ್ಲಿ ಕರ್ತವ್ಯಕರ್ಮವೆಂಬ ಶಬ್ದಕ್ಕೆ ಹೊಸ ದಾದ ಅರ್ಥವು ಪ್ರಾಪ್ತವಾಗುತ್ತದೆ. ಕರ್ತವ್ಯಕರ್ಮವು ಸುಖವಿಘಾತಕ ಸಂಗತಿಯಾಗಿ ರದೆ, ಸುಖಾನುಷ್ಠಾನವಾದುದೆಂದೇ ಅದರ ವ್ಯಾಖ್ಯೆಯನ್ನು ಮಾಡಲಿಕ್ಕೆಬೇಕು. ಶಾಂತ ಚಿತ್ತನಾದ ಮನುಷ್ಯನಿಗೂ, ಸದಸದ್ವಿವೇಕಿಯಾದ ಮನುಷ್ಯನಿಗೂ ಕರ್ತವ್ಯಕರ್ಮ ದಿಂದಲೇ ಆನಂದ ಪ್ರಾಪ್ತಿಯಾಗುತ್ತದೆ. ಕರ್ತವ್ಯಕರ್ಮವು ಬೇರೆ, ಮತ್ತು ಸುಖ ಸೇವನವು ಬೇರೆ; ಈ ಪ್ರಕಾರದ ಭೇದವು ಕೇವಲ ಸುಖವನ್ನು ಬಯಸುವ ವಿಲಾಸಿ ಮನುಷ್ಯನ ದೃಷ್ಟಿಗೆ ಮಾತ್ರ ಕಂಡುಬರುತ್ತದೆ.

ಮನುಷ್ಯನು ಯಾವಾಗಲೂ ಮನಸ್ಸಿನಲ್ಲಿ ಉದ್ಭವಿಸುವ ಬೇರೆ ಬೇರೆ ಪ್ರಕಾರದ ತರಂಗಗಳಿಗೂ ಅವುಗಳಿಂದುಂಟಾಗುವ ಕ್ಷಣಿಕವಾದ ಸುಖಕ್ಕೂ ಮೋಹಿತನಾಗಿಹೋಗು ವದರಿಂದ ಅವನಿಗೆ ಶಾಂತತೆಯು ದೊರಕುವದು ಕಠಿಣವಾಗುತ್ತದೆ. ಕ್ವಚಿತ್ಪ್ರಸಂಗದಲ್ಲಿ ದುಃಖವನ್ನುಪಭೋಗಿಸುವದೂ ಒಂದು ಪ್ರಕಾರದ ವಿಲಾಸವೆಂದು ಭಾವಿಸಿ ಎಷ್ಟೋ ಜನರು ದುಃಖವನ್ನಪೇಕ್ಷಿಸುತ್ತಾರೆ; ಮತ್ತು ತಿಳಿದೂ ತಿಳಿದೂ ದುಃಖವನ್ನು ಮೈಮೇಲೆ ಎಳೆದುಕೊಳ್ಳುತ್ತಾರೆ. ಶಾಂತತೆಯು ದೊರೆಯುವದು ಕಠಿಣವಾಗಿದ್ದರೂ ಅದನ್ನು ದೊರ ಕಿಸುವ ಮಾರ್ಗವು ಸುಲಭವಾಗಿರುತ್ತದೆ. ಆ ಮಾರ್ಗವಾವುದೆಂದರೆ— ಯಾವ ಸಂಗತಿ ಯಿಂದ ಶಾಂತಿಯು ಭಂಗವನ್ನೈದುವದೋ ಅದನ್ನು ಪರಿತ್ಯಜಿಸುವದು; ಮತ್ತು ಯಾವ ಮನೋವೃತ್ತಿಗಳಿಂದ ಸದ್ಗುಣಗಳ ಮೇಲೆ ಅಚಲವಾದ ನಿಷ್ಠೆಯು ಕೂಡ್ರುವದೋ,

ಯಾವ ಸಂಗತಿಗಳು ಪರಿಸ್ಥಿತಿ ಹಾಗು ಪ್ರಸಂಗದಿಂದ ಸಂಘಟಿಸುವ ಸಂಗತಿ ಇವುಗಳಿಂದ ಭಂಗವಾಗುವದಿಲ್ಲವೋ, ಯಾವ ಸಂಗತಿಗಳಿಂದ ಪಶ್ಚಾತ್ತಾಪಬಡುವ ಪ್ರಸಂಗವು ಪ್ರಾಪ್ತವಾಗುವದಿಲ್ಲವೋ ಹಾಗು ಯಾವ ಸಂಗತಿಗಳಿಂದ ಶಾಶ್ವತವಾದ ಶಾಂತಿಯೂ ಅಖಂಡವಾದ ಸಮಾಧಾನವೂ ಪ್ರಾಪ್ತವಾಗುವವೋ ಅಂತಹವುಗಳ ಚಿಂತನೆ ಮಾಡುವದು. "ನಿರ್ಮಮೋ ನಿರಹಂಕಾರಃ ಸಶಾಂತಿಮಧಿಗಚ್ಛತಿ ।"

ಯಾವನು ಆತ್ಮಜಯವನ್ನು ಮಾಡುತ್ತಾನೋ, ಮತ್ತು ನಿತ್ಯದಲ್ಲಿಯೂ ಅಧಿಕಾಧಿಕವಾಗಿ ಆತ್ಮಜಯ, ಆತ್ಮನಿಗ್ರಹ; ಮತ್ತು ಚಿತ್ತಶಾಂತಿ ಇವುಗಳನ್ನು ದೊರಕಿಸುವ ಪ್ರಯತ್ನವ ಮಾಡುತ್ತಾನೋ ಅವನಿಗೆ 'ಶಾಂತಿ'ಯು ಪ್ರಾಪ್ತವಾಗುವದು. ಪ್ರತಿಯೊಬ್ಬ ಮನುಷ್ಯನು ಯಾವ ಮಾನದಿಂದ ಆತ್ಮನಿಗ್ರಹವನ್ನು ಮಾಡುವನೋ, ಅದೇ ಮಾನದಿಂದ ಅವನು ಸ್ವತಃಸುಖಿಯೂ ಪರರಿಗೆ ಆನಂದದಾಯಕನೂ ಆಗುವನು. ಇಂತಹ 'ಆತ್ಮಜಯ'ವು ಸತತಾಭ್ಯಾಸದಿಂದಲೇ ಸಾಧ್ಯವಾಗುವದು. ಪ್ರತಿದಿನದಲ್ಲಿಯೂ ಪ್ರಯತ್ನ ಮಾಡುತ್ತ ಮನುಷ್ಯನು ತನ್ನ ದೋಷಗಳನ್ನು ತೆಗೆದು ಹಾಕಲಿಕ್ಕೆ ಪ್ರಯತ್ನ ಮಾಡಬೇಕು. ತನ್ನಲ್ಲಿ ಯಾವ ಯಾವ ವ್ಯಂಗಗಳಿರುವವೆಂಬದನ್ನು ಕಂಡು ಹಿಡಿದು ತನ್ನ ವರ್ತನದೊಳಗಿಂದ ಅವುಗಳ ನಿರ್ಮೂಲವನ್ನು ಮಾಡುವ ಮಾರ್ಗವನ್ನು ಹುಡುಕಬೇಕು. ಈ ಪ್ರಕಾರ ಹಿಂದೆಗೆಯದೆ ಪ್ರಯತ್ನಮಾಡತೊಡಗಿದರೆ ಕ್ರಮುಕ್ರಮವಾಗಿ ಆ ಕೆಲಸದಲ್ಲಿ ಯಶಸ್ಸು ಪ್ರಾಪ್ತವಾಗುವದು. ಈ ಕೆಲಸದಲ್ಲಿ ಮೊದಮೊದಲು ಸ್ವಲ್ಪ ಸ್ವಲ್ಪವೇ ಯಶಸ್ಸು ಪ್ರಾಪ್ತವಾಗುತ್ತ ನಡೆದರೂ ಅಷ್ಟು ಸ್ಥಿರವಾದ ಶಾಂತತೆಯು ಮೈಯಲ್ಲಿ ನೆಲೆಗೊಂಡಿತೆಂದೇ ಭಾವಿಸಬೇಕು. ಈ ರೀತಿಯಿಂದ ನಡೆದುಕೊಂಡರೆ ಮನುಷ್ಯನು ಸಾಮರ್ಥ್ಯವಂತನೂ ಸೌಖ್ಯವುಳ್ಳವನೂ ಆಗಿ ತನ್ನ ಕರ್ತವ್ಯ ಕರ್ಮಗಳನ್ನು ಯಥಾಯೋಗ್ಯವಾಗಿ ಮಾಡಿ ಚಿತ್ತಕ್ಷೋಭಕ್ಕೆ ಒಳಗಾಗದೆ ಪ್ರತಿಯೊಂದು ಪ್ರಸಂಗಕ್ಕೂ ಧೈರ್ಯದಿಂದ ಎದೆಗೊಡಲು ತತ್ಪರನಾಗುವನು. ಇಂಥ ಮನುಷ್ಯರಿಗೆ ಈ ಜನ್ಮದಲ್ಲಿ ಒಂದು ವೇಳೆ ಅಭಂಗವಾದ ಶಾಂತಿಯು ಪ್ರಾಪ್ತವಾಗದಿದ್ದರೂ, ಒಟ್ಟಿನ ಮೇಲೆ ಅವನು ಯತಚಿತ್ತನೂ ಶುದ್ಧನೂ ಆಗಿ ಜೀವಿತದ ಸಂಗ್ರಾಮದೊಳಗಿಂದ ಧೈರ್ಯದಿಂದ ಪಾರಾಗಿ ಈ ಜಗತ್ತಿನಲ್ಲಿ ವಾಸಿಸಿರುವ ವರೆಗೂ ತನ್ನ ಅಸ್ತಿತ್ವದಿಂದ ಜಗತ್ತಿಗೆ ಒಂದು ತರದ ದೊಡ್ಡಸ್ತನವನ್ನುಂಟು ಮಾಡಿದ ಸ್ಮರಣೆಯನ್ನಿಟ್ಟು ಹೋಗುವನು.

ಯಾವಾಗಲೂ ಆತ್ಮಜಯವನ್ನು ಮಾಡುವದರಿಂದ ಮನುಷ್ಯನಿಗೆ ತನ್ನ ಸ್ವಭಾವದ ನಿಜವಾದ ಪರೀಕ್ಷೆಯಾಗುತ್ತದೆ. ಮತ್ತು ಈ ದೈವೀಜ್ಞಾನದಿಂದಲೇ ಮನುಷ್ಯನಲ್ಲಿ ಶಾಂತಿಯು ಉತ್ಪನ್ನವಾಗುತ್ತದೆ. ಆತ್ಮಜ್ಞಾನದ ಹೊರತು ಶಾಶ್ವತವಾದ ಶಾಂತಿಯು ದೊರೆಯುವಂತಿಲ್ಲ. ಯಾರು ದುರ್ನಿವಾರವಾದ ಮನೋವಿಕಾರಗಳಿಗೆ ಅಧೀನರಾಗುತ್ತಾರೋ ಅವರಿಗೆ ಶಾಂತಿ ಸುಖದ ಅನುಭವವುಂಟಾಗುವದು ದುಃಸಾಧ್ಯವಾಗಿದೆ. ಯಾವನಿಗೆ ಮನೋಜಯವನ್ನು ಮಾಡುವದಾಗುವದಿಲ್ಲವೋ ಅವನ ಸ್ಥಿತಿಯು ಒಂದಾ

ನೊಂದು ಮತ್ತನಾದ ಕುದುರೆಯನ್ನು ಹತ್ತಿ ಅದನ್ನು ಅದರ ಮನಸ್ಸಿಗೆ ಬಂದಂತೆ ಸ್ವೈರವಾಗಿ ಹೋಗಲು ಬಿಡುವ ಸವಾರನಂತೆ ಆಗುತ್ತದೆ. ಮತ್ತು ನಿಗ್ರಹಿಯಾದ ಮನುಷ್ಯನ ಸ್ಥಿತಿಯು ಅದೇ ಕುದುರೆಯ ಮೇಲೆ ಆರೂಢನಾಗಿ ಅದನ್ನು ತನ್ನ ಕೈಯಲ್ಲಿ ತೆಗೆದುಕೊಂಡು ತನ್ನ ಇಚ್ಛೆಯಂತೆಯೇ ಅದನ್ನು ನಡೆಸುತ್ತ ಹೋಗುವ ಸವಾರನಂತೆ ಇರುತ್ತದೆ. "ಇಂದ್ರಿಯಾಣಾಂ ವಿಚಾರತಾಂ ವಿಷಯೇಷ್ವಪಹಾರಿಷು | ಸಂಯಮೇ ಯತ್ನಮಾತಿಷ್ಠೇದ್ವಿದ್ವಾನ್ಯಂತೇವ ವಾಜಿನಾಮ್||" ಈ ಪ್ರಕಾರ ಮನುಮಹರ್ಷಿಯ ವಾಕ್ಯವಿರುತ್ತದೆ.

ಯಾವ ಮನುಷ್ಯನು ದೈವೀಸಂಪತ್ತನ್ನು ಪ್ರಾಪ್ತಮಾಡಿಕೊಳ್ಳುವ ಮಾರ್ಗಕ್ಕೆ ಹತ್ತಿರುವನೋ, ಅಥವಾ ಯಾವನು ಪ್ರಾಪ್ತಮಾಡಿಕೊಂಡಿರುವನೋ ಅಂತಹನಲ್ಲಿ ಶಾಂತಿಯು ನೆಲೆಗೊಳ್ಳುವದೇ ಆ ದೈವೀಸಂಪತ್ತಿಯ ಉಚ್ಚತಮ ಸೋಪಾನವು. ಅವನು ಸ್ವತಃ ಶಾಂತನಾಗಿದ್ದು ಇತರರಿಗೂ ಶಾಂತಿಸುಖದ ಲಾಭವನ್ನು ಮಾಡಿಕೊಡುವನು. ಮನೋದೌರ್ಬಲ್ಯವುಳ್ಳ ಹಾಗು ಸಂಶಯಾತ್ಮರಾದ ಮನುಷ್ಯರಿಗೆ ಮನಸ್ಸಿನ ಉದ್ವೇಗ ಸಮಯದಲ್ಲಿ ಶಾಂತಿಯೂ, ಗಲಿತಧೈರ್ಯರಾಗುವ ಪ್ರಸಂಗದಲ್ಲಿ ಧೈರ್ಯವೂ, ಸುಖದ ಪ್ರಸಂಗದಲ್ಲಿ ಸಾಂತ್ವನವೂ ಹೃದಯಕ್ಕೆ ಸಮಾಧಾನವೂ ಶಾಂತನಾದ ಮನುಷ್ಯನ ಸಾನ್ನಿಧ್ಯದಿಂದ ಪ್ರಾಪ್ತವಾಗುತ್ತವೆ. ಯಾಕಂದರೆ, ಯಾವನು ಸ್ವತಃ ದಮನಶೀಲನಿರುವನೋ ಅವನೇ ಪರರಿಗೆ ಸಹಾಯ ಮಾಡಲು ಸಮರ್ಥನು. ಯಾವನು ಸ್ವತಃ ತಳಮಳವಿಲ್ಲದವನಿರುವನೋ ಅವನೇ ಹತಾಶನಾದವನಿಗೆ ಧೈರ್ಯ ಕೊಡಲು ಸಮರ್ಥನಾಗುವನು.

ಅನಿಷ್ಟ ಪ್ರಸಂಗದಿಂದ ಭಂಗವಾಗದಿರುವಂಥ ಹಾಗು ಸಂಕಟಗಳಿಂದಲೂ, ಜನನಿಂದೆಯಿಂದಲೂ ಮಿಥ್ಯಾರೋಪದಿಂದಲೂ ದೂಷಣಗಳಿಂದಲೂ ನಾಶವಾಗದಿರುವಂಥ ಮನಃಸ್ವಾಸ್ಥ್ಯವು ದೈವೀಸಾಮರ್ಥ್ಯವು ಪ್ರಾಪ್ತವಾದ ಹೊರತು ಲಭಿಸುವದಿಲ್ಲ. ಈ ಪ್ರಕಾರದ ಮನಃಶಾಂತಿಯಿಂದಲೇ ಯಾವನೊಬ್ಬ ಮನುಷ್ಯನು ಆತ್ಮಜ್ಞಾನದಲ್ಲಿ ಎಷ್ಟರ ಮಟ್ಟಿಗೆ ಪ್ರಗತಿಯನ್ನು ಪಡೆದಿರುವನೆಂಬುದು ಗೊತ್ತಾಗುವದು. ಶಾಂತಿವೃತ್ತಿಗೇ ಧೀರೋದಾರವೃತ್ತಿಯೆಂದು ಹೇಳಬಹುದು. ಮಿಥ್ಯಾಪವಾದಗಳಾಗಲಿ, ಮಾನಹಾನಿಯ ಪ್ರಸಂಗಗಳಾಗಲಿ ಒದಗಿದರೂ ಯಾವ ಮನುಷ್ಯನ ಮನಃಶಾಂತಿ ಅಥವಾ ಗಾಂಭೀರ್ಯವು ತಿಲಪ್ರಾಯವಾದರೂ ವಿಚಲವಾಗುವದಿಲ್ಲವೋ ಅವನೇ ಸ್ಥಿರಬುದ್ಧಿಯವನೂ, ದೈವೀಸಂಪತ್ತಿಯುಕ್ತನೂ ಎನಿಸಿಕೊಳ್ಳುವನು. ಈ ಪ್ರಕಾರದ ಅಪೂರ್ವವಾದ ಶಾಂತಿಯೇ ಆತ್ಮಜಯದ ಫಲವು. ಹಲವು ಎಡರುಗಳಿಗೆ ಎದೆಗೊಡುವದರಿಂದಲೂ, ಶುದ್ಧವಾದ ಮನಸ್ಸಿನಿಂದಲೂ, ಕಠಿಣವಾದ ತಪಸ್ಸಿನಿಂದಲೂ ಈ ಶಾಂತಿಯು ಒಳ್ಳೇ ಕಷ್ಟದಿಂದ ಬಹಳೇ ಸಾವಕಾಶವಾಗಿ ಸಾಧ್ಯವಾಗುತ್ತದೆ.

ಶಾಂತನಾದ ಮನುಷ್ಯನು ತನ್ನ ಸೌಖ್ಯದ ಹಾಗು ಜ್ಞಾನದ ಉಗಮವು ತನ್ನಲ್ಲಿಯೇ ಇದ್ದು ಅದು ಎಂದೂ ನಾಶವಾಗಲಾರದೆಂದು ಸ್ಪಷ್ಟವಾಗಿ ತಿಳಿದುಕೊಂಡಿರು

ತ್ತಾನೆ. ಅವನ ಯಾವತ್ತು ಶಕ್ತಿಯು ಅವನ ವಶದಲ್ಲಿದ್ದು ಅವನಿಗೆ ಸಾಧನಗಳ ನ್ಯೂನತೆಯೇ ಉಂಟಾಗುವದಿಲ್ಲ. ಯಾವ ರೀತಿಯಿಂದ ಆತನು ಪ್ರಯತ್ನಮಾಡಿದರೂ ಅದರಲ್ಲಿ ಅವನ ಯೋಜಕತೆಯೂ ಸಾಮರ್ಥ್ಯವೂ ದೃಗ್ಗೋಚರವಾಗುತ್ತವೆ. ಯಾಕೆಂದರೆ ಯಾವತ್ತು ವಸ್ತು ಮಾತ್ರಗಳ ಗುಣಧರ್ಮಗಳನ್ನು ಅವನು ಯೋಗ್ಯವಾಗಿ ಆಕಲನ ಮಾಡಿಕೊಂಡಿರುವದರಿಂದ ಆತನ ವರ್ತನವು ಎಲ್ಲರೊಡನೆಯೂ ಯಥಾನ್ಯಾಯವಾಗಿರುತ್ತದೆ. ವಸ್ತು ಮಾತ್ರ ವಿಷಯಕವಾದ ಕಲ್ಪನೆಯು ಕೇವಲ ಕಲ್ಪನೆಯೆಂದೂ, ನಿಜವಾದ ಸಂಗತಿಯಲ್ಲವೆಂದೂ ತಿಳಿದು ಆತನು ಮೋಹಿತನಾಗುವದಿಲ್ಲ. ಆತನ ಅಹಂಭಾವವು ನಷ್ಟವಾಗಿರುವದರಿಂದಲೂ ಸೃಷ್ಟಿನಿಯಮಾನುಸಾರವಾಗಿ ಆತನು ವರ್ತಿಸುತ್ತಿರುವದರಿಂದಲೂ ಸೃಷ್ಟಿಯೊಡನೆಯೂ ಯಾವತ್ತು ವಿಶ್ವದೊಡನೆಯೂ ಅವನು ತಾದಾತ್ಮ್ಯವನ್ನು ಹೊಂದಿರುತ್ತಾನೆ. ಅವನು ಯಾವ ಸಾಧನಗಳ ಉಪಯೋಗವನ್ನು ಮಾಡಿಕೊಳ್ಳುವನೋ ಅದರಲ್ಲಿ ಸ್ವಾರ್ಥವೆಂಬದೇನೂ ಇರುವದಿಲ್ಲ. ಆತನ ಉಪಾಯಯೋಜನೆಯಲ್ಲಿ ಅಹಂಭಾವವು ಎಷ್ಟು ಮಾತ್ರವೂ ಇರುವದಿಲ್ಲ. ಒಂದು ದೃಷ್ಟಿಯಿಂದ ಆತನ ಸ್ವಾರ್ಥವೆಲ್ಲ ಇಲ್ಲದಂತಾಗಿ ಹೋಗಿರುತ್ತದೆ. ಆತನ ಯಾವತ್ತು ಸದ್ಗುಣಗಳೂ ಕೂಡ ವಿಶ್ವಾತ್ಮಭಾವಯುಕ್ತವಾಗಿರುತ್ತವೆ. ದೇಹಾದಿ ವಿಷಯಗಳೊಡನೆ ಅವನಿಗೆ ಯಾವ ತರದ ಸಂಬಂಧವೂ ಇರುವದಿಲ್ಲ. ಅವನು ವಿಶ್ವದ ಒಂದು ಸಜೀವ ಅಂಶವಾಗಿ ಸೃಷ್ಟಿಯಲ್ಲಿ ಸಂಚಾರ ಮಾಡುತ್ತಾನೆ. ಅವನು ಮೊದಲಿನಂತೆ ಕ್ಷುದ್ರನೂ, ಸಂಕುಚಿತ ಬುದ್ಧಿಯವನೂ, ಸ್ವಾರ್ಥಲೋಲುಪನೂ ಆಗಿರುವದಿಲ್ಲ; ಮತ್ತು ಆತನ ಆತ್ಮಭಾವವು ಇಲ್ಲದಂತಾಗಿರುವದರಿಂದ ಅಹಂಭಾವಕ್ಕೆ ಹೊಂದಿಕೊಂಡಿದ್ದ ಲೋಭ, ಮೋಹ, ಈರ್ಷ್ಯೆ, ಅಸೂಯೆ ಮೊದಲಾದ ಯಾವತ್ತು ಕ್ಷುದ್ರಭಾವಗಳು ಇಲ್ಲದಂತಾಗುತ್ತವೆ. ಅವನು ಯಾವಾಗಲೂ ಶಾಂತವೃತ್ತಿಯಿಂದ ನಡೆಯುತ್ತಾನೆ ಮತ್ತು ಪ್ರಾಪ್ತವಾದದ್ದೆಲ್ಲವನ್ನು ಶಾಂತತೆಯಿಂದ ಸಹಿಸಿಕೊಳ್ಳುತ್ತಾನೆ. ಆತನು ಕಾರ್ಯಕ್ಷಮನಾಗಿದ್ದು ಸತ್ಯವನ್ನನುಸರಿಸಿ ವರ್ತಿಸುತ್ತಿರುವದರಿಂದ ಪ್ರತಿಯೊಂದು ಕೆಲಸದೊಳಗಿನ ಸಣ್ಣ ಪುಟ್ಟ ಸಂಗತಿಗಳೂ ಆತನಿಗೆ ಚನ್ನಾಗಿ ಗೊತ್ತಿರುತ್ತವೆ. ಆತನು ಕಣ್ಣು ಮುಚ್ಚಿಕೊಂಡು ಕೆಲಸ ಮಾಡುವದಿಲ್ಲ. ಮತ್ತು ಕಾರ್ಯಸಿದ್ಧಿಯಾಗುವದಕ್ಕೆ ದೈವದ ಅಥವಾ ಕೃಪೆಯ ಅವಶ್ಯಕತೆಯುಂಟೆಂದು ಅವನು ತಿಳಿಯುವದಿಲ್ಲ.

ಶಾಂತನಾದ ಮನುಷ್ಯನ ಮನಸ್ಸು ರಮಣೀಯವಾದ ಸರೋವರದ ಶಾಂತವಾದ ಪೃಷ್ಠಭಾಗದಂತೆ ಇರುತ್ತದೆ. ಅದರಲ್ಲಿ ಜೀವಿತ ಹಾಗು ಜೀವಿತದೊಳಗಿನ ಯಾವತ್ತು ಸಂಗತಿಗಳ ಯಥಾರ್ಥವಾದ ಪ್ರತಿಬಿಂಬವು ಬೀಳುತ್ತದೆ. ಅಸ್ವಸ್ಥವಾದ ಚಿತ್ತವು ನೀರಿನ ಚಂಚಲವಾದ ಪೃಷ್ಠಭಾಗದಂತೆ ಇರುತ್ತದೆ. ಮತ್ತು ಅದರಲ್ಲಿ ಬೀಳುವ ಪ್ರತಿಬಿಂಬವಾದರೂ ಅಸ್ಪಷ್ಟವಾಗಿರುತ್ತದೆ. ಆತ್ಮಜಯವನ್ನು ಸಂಪಾದಿಸಿದ ಮನುಷ್ಯನು ತನ್ನ ಅಂತಃಕರಣದ ನಿರೀಕ್ಷಣ ಮಾಡಿಕೊಂಡರೆ ತಾನು ವಿಶ್ವದ ಸ್ಪಷ್ಟವಾದ ಪ್ರತಿಬಿಂಬವಾಗಿರುವೆನೆಂಬುದು ಕಂಡು ಬರುತ್ತದೆ. ನಾನು ವಿರಾಟ್‌ಪುರುಷನ ಪ್ರತಿಮೆಯಾಗಿದ್ದೇನೆ;

ನನಗಾದರೂ ಜಗತ್ತಿನೊಳಗಿನ ನ್ಯಾಯದ ಭಾಗವು ಸಿಕ್ಕೇ ಸಿಕ್ಕುತ್ತದೆ; ಜಗತ್ತು ಯಾವ ಸಂಗತಿಗಳು ಅನ್ಯಾಯವೆಂದೂ, ದುಃಖದಾಯಕವಾದವುಗಳೆಂದೂ ತಿಳಿಯುತ್ತದೆಯೋ ಅವೆಲ್ಲವೂ ನನ್ನ ಪೂರ್ವಾರ್ಜಿತ ಕರ್ಮದ ಫಲಗಳು; ವಿಶ್ವಧರ್ಮಾನುಸಾರವಾಗಿ ಅವುಗಳನ್ನು ಭೋಗಿಸಲೇಬೇಕು; ಮತ್ತು "ಪ್ರಾರಬ್ಧ ಕರ್ಮಣಾಂ ಭೋಗಾದೇವ ಕ್ಷಯಃ" ಎಂಬ ನ್ಯಾಯದಂತೆ ಅವುಗಳನ್ನು ಭೋಗಿಸಿದರೇ ಕಷ್ಟವು ನೀಗುವದು. ಈ ಪ್ರಕಾರದ ವಿಚಾರಗಳಿಂದ ಆತನ ಶಾಂತಿಯು ಎಂದೂ ಭಂಗವಾಗುವದಿಲ್ಲ. ಇಷ್ಟೇ ಅಲ್ಲ. ಅದು ಅವನಿಗೆ ನಿರತಿಶಯವಾದ ಆನಂದದ ಹಾಗು ಜ್ಞಾನದ ಅಖಂಡವಾದ ಸಾಧನವಾಗುತ್ತದೆ.

ಚಿತ್ತವು ಸ್ಥಿರವಿಲ್ಲದ ಮನುಷ್ಯನಿಗೆ ಯಾವ ಕೆಲಸದಲ್ಲಿ ಯಶಸ್ಸು ಪ್ರಾಪ್ತವಾಗುವದಿಲ್ಲವೋ ಅದೇ ಕೆಲಸದಲ್ಲಿ ಶಾಂತನಾದ ಮನುಷ್ಯನು ಯಶಸ್ಸನ್ನು ಹೊಂದುವನು. ಯಾವನು ತನ್ನ ಅಂತಃಕರಣದೊಳಗಿನ ಭಯಂಕರವಾದ ತರಂಗಗಳಿಗೆ ಧೈರ್ಯದಿಂದ ಎದುರಾಗಿ ಅವುಗಳ ಮೇಲೆ ವಿಜಯವನ್ನು ಸಂಪಾದಿಸುವನೋ ಅವನೇ ಜಗತ್ತಿನೊಳಗಿನ ಸಂಕಟಗಳಿಗೆ ಎದುರಾಗಲು ಸಮರ್ಥನಾಗುವನು. ಯಾವನಿಗೆ ಅಂತರ್ಜಯವು ಸಾಧ್ಯವಾಯಿತೋ ಅವನೇ ಬ್ರಹ್ಮಜಯವನ್ನು ದೊರಕಿಸಲು ಶಕ್ತನಾಗುತ್ತಾನೆ. ಶಾಂತಚಿತ್ತನಾದ ಮನುಷ್ಯನಿಗೆ ಸಂಕಟಗಳ ಯಥಾರ್ಥವಾದ ಕಲ್ಪನೆಯಿರುತ್ತದೆ; ಮತ್ತು ಅವುಗಳೊಳಗಿಂದ ಹೇಗೆ ಪಾರಾಗಬೇಕೆಂಬುದು ಆತನಿಗೆ ಚನ್ನಾಗಿ ತಿಳಿದಿರುತ್ತದೆ. ಅಸ್ವಸ್ಥನಾದ ಮನಸ್ಸೇ ಕರ್ತವ್ಯಮೂಢವಾದದ್ದು. ಅಸ್ವಸ್ಥನಾದ ಮನುಷ್ಯನು ಧೈರ್ಯವಿಲ್ಲದವನಾಗಿ ಪ್ರಾಪ್ತವಾದ ಸಂಕಟ ಹಾಗು ಭೀತಿ ಇವುಗಳಿಂದಾಚೆಗೆ ಆತನ ದೃಷ್ಟಿಯೇ ಹೋಗುವದಿಲ್ಲ. ಮತ್ತು ಏನು ಮಾಡಬೇಕೆಂಬುದು ಆತನಿಗೆ ತಿಳಿಯುವದಿಲ್ಲ. ಆದರೆ ಶಾಂತಚಿತ್ತನಾದ ಮನುಷ್ಯನು ಯಾವ ಕಾರಣದಿಂದಲೂ ಚಂಚಲನಾಗುವದಿಲ್ಲ. ಮತ್ತು ಆತನ ಪ್ರತ್ಯುತ್ಪನ್ನ ಮತಿಯು ಎಂದೂ ಕಲುಷಿತವಾಗುವದಿಲ್ಲ. ಯಾವ ಕಾರಣದಿಂದಲೂ ಆತನು ಬೆದರಿ ಹೋಗುವದಿಲ್ಲ. ಅಥವಾ ಅಜಾಗರೂಕನಾಗುವದಿಲ್ಲ; ಹಾಗು ಯಾವ ಕಾರಣದಿಂದಲೂ ಆತನ ದೃಢನಿಶ್ಚಯಿಯಾದ ಮನಸ್ಸು ಹಿಂದೆಗೆಯುವದಿಲ್ಲ. ಯಾವ ಯಾವ ಕೆಲಸಗಳಲ್ಲಿ ಅವನು ಕೈಹಾಕುವನೋ ಆಯಾ ಕೆಲಸಗಳಲ್ಲಿ ಅವನು ತನ್ನ ಸಾಮರ್ಥ್ಯವನ್ನೇ ತೋರ್ಪಡಿಸುವನು. ಆತನ ಮನಸ್ಸು ಮಮತ್ವಬುದ್ಧಿರಹಿತವಾಗಿರುವದರಿಂದ ಆತನು ಕೈಕೊಂಡ ಕೆಲಸಗಳಲ್ಲೆಲ್ಲ ಆತನ ಶಾಂತವಾದ ಧೀರಪ್ರವೃತ್ತಿಯು ಪ್ರತ್ಯಯಕ್ಕೆ ಬರುತ್ತದೆ. ಅವನು ಐಹಿಕವಾದ ಅಥವಾ ಪಾರತ್ರಿಕವಾದ ಯಾವ ಕೆಲಸವನ್ನು ಕೈಕೊಂಡರೂ ತನ್ನ ಯಾವತ್ತು ಸಾಮರ್ಥ್ಯವನ್ನು ಒಟ್ಟುಗೂಡಿಸಿ ಅಂತರ್ದೃಷ್ಟಿಯುಕ್ತವಾದ ಮನಸ್ಸಿನಿಂದ ಅದನ್ನು ಪೂರ್ಣಮಾಡುವನು.

ಶಾಂತತೆಯೆಂದರೆ ಮನಸ್ಸು ವ್ಯವಸ್ಥಿತವಾಗಿ ಸರ್ವತ್ರವೂ ಸಮತ್ವವೂ ಭಾಸಮಾನವಾಗುವ ಸ್ಥಿತಿಯು. ಪರಸ್ಪರ ವಿರೋಧಿಗಳಾದ ಮತ್ತು ದುಃಖದಾಯಕಗಳಾದ

ಮನಸ್ಸಿನ ಪ್ರವೃತ್ತಿಗಳು ಐಕ್ಯಹೊಂದಿ ಒಂದೇ ಪ್ರಾಮುಖ್ಯವಾದ ಧ್ಯೇಯವನ್ನು ಹಿಡಿಯುವದೂ ಆ ಧ್ಯೇಯವೂ ಮನಸ್ಸಿನ ಸಿದ್ಧತೆಯೂ ಏಕಾಗ್ರತೆಯನ್ನು ಹೊಂದುವದೂ ಶಾಂತತೆಯು. ಅದರಂತೆಯೇ ಇಂದ್ರಿಯಗಳೆಲ್ಲವೂ ಸಂಯಮಿತವಾಗಿದ್ದು ಬುದ್ಧಿಯು ಶುದ್ಧವಾಗಿಯೂ ಇಚ್ಛೆಯೆಲ್ಲವೂ ಪರಮೇಶ್ವರನ ಇಚ್ಛೆಯೊಡನೆ ವಿಲೀನವಾಗಿಯೂ ಇರುವ ಸ್ಥಿತಿಗೆ ಶಾಂತತೆಯನ್ನಬಹುದು. ತಾತ್ಪರ್ಯವೇನೆಂದರೆ, ಶಾಂತಿಯುಳ್ಳ ಮನುಷ್ಯನ ಆತ್ಮಭಾವವು ಪೂರ್ಣವಾಗಿ ಅಳಿದು ಹೋಗಿರಲಿಕ್ಕೆಬೇಕು; ಮತ್ತು ವಿಶ್ವಕುಟುಂಬ ವೃತ್ತಿಯೂ ಭೂಯಿಷ್ಠ ಹಿತಪರತೆಯೂ ಅವನಲ್ಲಿ ಪೂರ್ಣವಾಗಿ ಜಾಗ್ರತವಾಗಿರಲಿಕ್ಕೆಬೇಕು.

ಮನುಷ್ಯನಲ್ಲಿ ಶಾಶ್ವತವಾದ ಶಾಂತಿಯು ನೆಲೆಗೊಂಡ ಹೊರತು ಆತನು ಪೂರ್ಣವಾಗಿ ಯಶಸ್ವಿಯಾದನೆಂದು ಹೇಳಲಾಗುವದಿಲ್ಲ. ಶಾಂತಿಯಿಲ್ಲದ ಮನುಷ್ಯನ ಬುದ್ಧಿಯು ಪರಿಪಕ್ವವಾಗಿರುವದಿಲ್ಲ; ಮತ್ತು ಅಂತಃಕರಣವು ವಿಶುದ್ಧವಾಗಿರುವದಿಲ್ಲ. ಇಲ್ಲಿಯವರೆಗೆ ಮನುಷ್ಯನು ಆತ್ಮವಂಚನೆಯನ್ನೂ, ಆತ್ಮಶ್ಲಾಘನೆಯನ್ನೂ ಬಿಡುವದಿಲ್ಲವೋ ಅಲ್ಲಿಯವರೆಗೆ ಶ್ರೇಯಃಸಾಧನದ ಮಾರ್ಗವು ಅವನಿಗೆ ಸಾಧ್ಯವಾಗುವದಿಲ್ಲ. ತನ್ನ ಪಾಪ, ದುಃಖ ಹಾಗು ಪರಿತಾಪ ಇವು ತನ್ನ ಕರ್ಮದ ಹಾಗು ಅಜ್ಞಾನಾವಸ್ಥೆಯ ಫಲಗಳಾಗಿರುವವೆಂಬದು ಮನುಷ್ಯನಿಗೆ ಚನ್ನಾಗಿ ತಿಳಿದಿರಲಿಕ್ಕೆಬೇಕು. ಅದರಂತೆ ತನ್ನ ದುಃಖದ ಉತ್ಪಾದಕನು ತಾನೇ ಆಗಿದ್ದು ಎರಡನೆಯವನ ಸಂಬಂಧವು ಅದಕ್ಕೆ ಯಾವ ತರದಿಂದಲೂ ಇಲ್ಲವೆಂದು ಅವನು ಪೂರ್ಣವಾಗಿ ಅರಿತಿರಲಿಕ್ಕೆಬೇಕು. "ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ | ಪರೋ ದದಾತೀತಿ ಕುಬುದ್ಧಿರೇಷಾ | ಅಹಂಕರೋಮೀತಿ ವೃತಾಭಿಮಾನಃ | ಸ್ವಕರ್ಮಸೂತ್ರಗ್ರಥಿತೋ ಹಿ ಲೋಕಃ ||" ಇದನ್ನು ಪ್ರತಿಯೊಬ್ಬನು ನೆನಪಿನಲ್ಲಿಡಬೇಕು. ಧನಲೋಭಿಯಾದವನು ಧನಸಂಚಯಾರ್ಥವಾಗಿ ಪ್ರಯತ್ನ ಪಡುವಂತೆ, ಶಾಂತತೆಯು ನೆಲೆಗೊಳ್ಳುವದಕ್ಕೋಸ್ಕರ ಮನಃಪೂರ್ವಕವಾಗಿ ಪ್ರಯತ್ನ ಮಾಡಲಿಕ್ಕೆಬೇಕು. ಮತ್ತು ಅಲ್ಪಸ್ವಲ್ಪ ಶಾಂತತೆಯಿಂದ ಎಂದೂ ಸಂತುಷ್ಟರಾಗಬಾರದು. ಅಂದರೆ ಉತ್ತರೋತ್ತರವಾಗಿ ಜ್ಞಾನವೂ, ಸಾಮರ್ಥ್ಯವೂ, ಪರಮೇಶ್ವರನ ಕೃಪೆಯೂ, ಸಮಾಧಾನವೂ ಪ್ರಾಪ್ತವಾಗಿ ತದನಂತರ ಸರ್ವರನ್ನೂ ಶುದ್ಧೀಕರಿಸುವ ಸಂಪೂರ್ಣವಾದ ಶಾಂತಿಯು ಲಭಿಸುವದು.

ಮನಸ್ಸು ಶಾಂತವಾಯಿತೆಂದರೆ, ಸಾಮರ್ಥ್ಯ ಹಾಗು ಸ್ವಾಸ್ಥ್ಯ, ಪ್ರೇಮ ಮತ್ತು ಜ್ಞಾನಗಳು ಅಲ್ಲಿ ಬಂದವೆಂದೇ ತಿಳಿಯಬೇಕು. ಯಾವನು ಆತ್ಮಭಾವದೊಡನೆ ಬಲವಾಗಿ ಕಾದಾಡಿದನೋ, ಯಾವನು ತನ್ನ ದೋಷಗಳೊಡನೆ ಕಠಿಣತರವಾದ ಅಂತಸ್ಥ ಸಂಗ್ರಾಮ ಹೂಡಿ ಅದರಲ್ಲಿ ಜಯಹೊಂದಿದನೋ ಆ ವಿಜಯಶಾಲಿಯಾದ ಮನುಷ್ಯನಿಗೇ 'ಶಾಂತ'ನೆಂಬ ಸಂಜ್ಞೆಯು ಸಲ್ಲುವದು.

# ೮. ಅಂತರ್ದೃಷ್ಟಿ ಮತ್ತು ಉದಾರಪ್ರವೃತ್ತಿ

ಮನುಷ್ಯನು ಸದಾಚರಣದ ಇಚ್ಛೆಯನ್ನು ಹಿಡಿದು ಅದಕ್ಕೋಸುಗ ಪ್ರಯತ್ನ ಮಾಡಹತ್ತಲು ಆತನಿಗೆ ದೈವಿಕವಾದ ಅಂತರ್ದೃಷ್ಟಿಯು ಪ್ರಾಪ್ತವಾಗುತ್ತದೆ. ಈ ಅಂತರ್ದೃಷ್ಟಿಯಿಂದ ಅವನು ಜಗತ್ತಿನೊಳಗಿನ ಕಾರ್ಯಕಾರಣಸಂಬಂಧಗಳನ್ನು ಕುರಿತು ಸೂಕ್ಷ್ಮವಾಗಿ ವಿಚಾರಮಾಡಹತ್ತುತ್ತಾನೆ. ಒಮ್ಮೆ ಇದು ಸಾಧ್ಯವಾಯಿತೆಂದರೆ ಆ ಮನುಷ್ಯನು ಸನ್ಮಾರ್ಗದಿಂದ ಎಂದೂ ಚ್ಯುತನಾಗುವದಿಲ್ಲ; ಮೋಹಕ್ಕೆ ವಶನಾಗುವದಿಲ್ಲ; ಮತ್ತು ಜಗತ್ತಿನ ಕಲ್ಯಾಣಕ್ಕೋಸ್ಕರವಾಗಿ ಕೈಕೊಂಡ ತನ್ನ ಉದ್ಯೋಗದಲ್ಲಿ ಎಂದೂ ಹಿಂದಾಗುವದಿಲ್ಲ.

ಸದ್ಗುಣಾಭ್ಯಾಸದಿಂದ ಬುದ್ಧಿಯು ಪ್ರಗಲ್ಭವಾಯಿತೆಂದರೆ, ದುಷ್ಟಪ್ರವೃತ್ತಿಗಳೆಲ್ಲ ನಾಶಹೊಂದುತ್ತವೆ. ಮತ್ತು ಕೈಯಿಂದ ಕುಕರ್ಮವು ಎಂದೂ ಘಟಿಸುವದಿಲ್ಲ. ಪ್ರತಿಯೊಬ್ಬ ಮನುಷ್ಯನ ಚರಿತ್ರವು ಕಾರಣ ಹಾಗು ಕಾರ್ಯಗಳ ಒಂದು ಅಖಂಡವಾದ ಪರಂಪರೆಯಾಗಿದೆ. ಈ ಪ್ರಕಾರ ಪೂರ್ಣಜ್ಞಾನವಾದ ನಂತರ ಯಾವ ಮನುಷ್ಯನಾದರೂ ಸದ್ವರ್ತನದ ಇಚ್ಛೆಯನ್ನೇ ಹಿಡಿಯುವನು. ಆ ಮನುಷ್ಯನು ಅಸನ್ಮಾರ್ಗದ ಕಡೆಗೆ ಪ್ರವೃತ್ತಿಯುಳ್ಳವನಾಗಲಾರನು; ಮತ್ತು ಅವನು ಆತ್ಮವಿಷಯಕವಾದ ಕ್ಷುದ್ರ ವಿಚಾರಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡುವನು.

ಮಾನವೀ ಜೀವಿತವು ಯಾವ ಸತ್ಯಸಿದ್ಧಾಂತಗಳಿಂದ ಬದ್ಧವಾಗಿದೆಯೋ ಅವುಗಳ ಯೋಗ್ಯವಾದ ಜ್ಞಾನವಿಲ್ಲದ ಮನುಷ್ಯನು ಪ್ರಸಂಗವಿಶೇಷದಲ್ಲಿ ಸದ್ವರ್ತನ ಸೌಂದರ್ಯವನ್ನು ತೋರಿಸಿದರೂ ಆತನ ಪ್ರವೃತ್ತಿಯು ಇನ್ನೂ ಉದಾರವಾಗಿಲ್ಲವೆಂದೂ, ಸಾತ್ವಿಕ ಭಾವದ ಕವಚವು ಇನ್ನೂ ಅವನಿಗೆ ಪ್ರಾಪ್ತವಾಗಿಲ್ಲವೆಂದೂ ಅಥವಾ ಅಂತಿಮಸಾಧ್ಯದ ಪೂರ್ಣವಾದ ಆಶ್ರಯವೂ ಇನ್ನೂ ಆತನಿಗೆ ದೊರೆತಿಲ್ಲವೆಂದೂ ನಿಶ್ಚಯವಾಗಿ ತಿಳಿಯಬೇಕು. ಆತನಿಗೆ ನಿತ್ಯಾನಿತ್ಯವಸ್ತುವಿವೇಕವು ಅಂದರೆ ಒಳ್ಳೆಯದರ ಫಲವು ಒಳ್ಳೆಯದೂ ಕೆಟ್ಟದರ ಫಲವು ಕೆಟ್ಟದೂ ಎಂಬುದನ್ನು ತಿಳಿಯುವ ಬುದ್ಧಿಯ ಕುಶಾಗ್ರತೆಯು ಅಥವಾ ಅಂತರ್ದೃಷ್ಟಿಯು ಪ್ರಾಪ್ತವಾಗಿರದೆ ಇರುವದರಿಂದ, ಯಾವ ವಿಷಯದಲ್ಲಿ ಆತನ ಮನಸ್ಸು ದೃಢವಾಗಿರುವದಿಲ್ಲವೋ ಆ ವಿಷಯದಲ್ಲಿ ಅವನು ಮೋಹದ ಅಧೀನನಾಗುತ್ತಾನೆ; ಮತ್ತು ಆತನ ಪಾರಮಾರ್ಥಿಕ ದೃಷ್ಟಿಯು ಕುರುಡಾಗಿರುವ ಮೂಲಕ ಆತನಿಗೆ ಪೂರ್ಣಜ್ಞಾನವು ಪ್ರಾಪ್ತವಾಗುವದಿಲ್ಲ. ಈ ಪ್ರಕಾರ ಆಘಾತಗಳನ್ನು ತಡೆಯಬೇಕಾಗುವದರಿಂದ ಆತನು ನಿಜಸ್ಥಿತಿಯನ್ನು ಶೋಧಿಸಹತ್ತುತ್ತಾನೆ. ಹೀಗೆ ತನ್ನ ಅಪಯಶಸ್ಸಿನ ಕಾರಣಗಳನ್ನು ನಾಶಗೊಳಿಸಿ ಸದ್ಗುಣಗಳ ಅನುಷ್ಠಾನ ಮಾಡಿದರೆ ಸೃಷ್ಟಿಯ ಸತ್ಯಸ್ವರೂಪದ ಆಕಲನವಾಗಿ ಕಟ್ಟಕಡೆಗೆ ಆತನು ದೇವಪದವಿಯನ್ನೈದುವನು.

ಸದ್ಗುಣದ ನಿಜವಾದ ಕಲ್ಪನೆಯಿಲ್ಲದ ಮನುಷ್ಯನಾಗಲಿ, ಶುದ್ಧಾಂತಃಕರಣದ ಅಥವಾ ಗಂಭೀರವಾದ ಮನಸ್ಸಿಲ್ಲದವನಾಗಲಿ ವಿಶಿಷ್ಟ ಸ್ಥಿತಿಯ ಮೂಲಕವೋ ಅಥವಾ ಮಿತ್ರರ ಸಹಚರ್ಯದಿಂದಲೋ ಇಲ್ಲವೆ ಮನಸ್ಸು ಸ್ವೈರವಾಗಿ ಹೋಗಲಿಕ್ಕೆ ಅವಕಾಶವಿಲ್ಲದೆ ಇರುವದರಿಂದಲೋ ಸದ್ವರ್ತನಿಯಾಗಿದ್ದರೆ, ಅಥವಾ ಸ್ವತಃ ಸದ್ವರ್ತನಿಯಾಗಿರುವೆನೆಂದು ಜಂಭಬಡಿಯುತ್ತಿದ್ದರೆ, ಅಂತಹನು ಯಾವ ಬಂಧನದ ಮೂಲಕ ಸ್ವೈರವರ್ತನಿಯಾಗದೆ ಸುಮ್ಮನೆ ಇರುತ್ತಿದ್ದನೋ ಆ ಬಂಧನವು ಇಲ್ಲದಂತಾದ ಕೂಡಲೆ ಮೋಹಪಾಶದಲ್ಲಿ ಬೀಳುವನಲ್ಲದೆ ಆತನ ಪ್ರಚ್ಛನ್ನ ಮನೋದೌರ್ಬಲ್ಯವೂ, ದುರ್ಗುಣ ಪ್ರವೃತ್ತಿಯೂ ಹೊರಬಿದ್ದ ಹೊರತು ಎಂದೂ ನಿಲ್ಲುವದಿಲ್ಲ. ಆದರೆ ಯಾವನು ನಿಜವಾಗಿಯೂ ಸದ್ವರ್ತನಿಯಾಗಿರುವನೋ ಮತ್ತು ಎರಡನೆಯವರ ದಾಕ್ಷಿಣ್ಯ ಮೊದಲಾದವುಗಳನ್ನು ಲೆಕ್ಕಿಸದೆ ತನ್ನ ಮನಸ್ಸಿಗೆ ತಿಳಿದದ್ದರಿಂದ ಸದ್ವರ್ತನಿಯಾಗಿರುವನೋ ಅವನು ನಿತ್ಯದ ವ್ಯವಹಾರದಲ್ಲಿ ಇತರರಂತೆಯೇ ಗಣಿಸಲ್ಪಡುವನು. ಆದರೆ ಅಕಸ್ಮಾತ್ತಾಗಿ ಯಾವದೊಂದು ಮೋಹದ ಪ್ರಸಂಗವು ಪ್ರಾಪ್ತವಾದರೆ ಇಲ್ಲಿ ಯಾವದೊಂದು ವಿಶಿಷ್ಟ ಪ್ರಸಂಗವು ಒದಗಿದರೆ ಮಾತ್ರ ಆತನ ಗುಪ್ತವಾದ ಸದ್ಗುಣಗಳು ಪೂರ್ಣವಾದ ತೇಜಸ್ಸಿನಿಂದಲೂ ಸಾಮರ್ಥ್ಯದಿಂದಲೂ ಜನರನ್ನು ಆಶ್ಚರ್ಯಗೊಳಿಸುವವು.

ಅಂತರ್ದೃಷ್ಟಿಯಿಂದ ಸಂಕಟಗಳ ಭೀತಿಯು ನಷ್ಟವಾಗುತ್ತದೆ; ಮತ್ತು ಸದ್ಧರ್ಮವು ವಿಜಯಹೊಂದುವದೆಂದು ಮನವರಿಕೆಯಾಗುತ್ತದೆ. ಯಾವನು ಪೂರ್ಣಜ್ಞಾನಿಯಾಗಿರುವನೋ ಅವನಿಂದ ಪಾಪಕರ್ಮವು ಘಟಿಸಲಾರದು. ಯಾಕಂದರೆ ಸತ್ಕೃತ್ಯ ಹಾಗು ದುಷ್ಕೃತ್ಯಗಳ ಸಾಮರ್ಥ್ಯವು ಆತನಿಗೆ ತಿಳಿಯುತ್ತದೆ. ಮತ್ತು ಕೆಟ್ಟದರ ಪರಿಣಾಮವು ಅತ್ಯಂತ ಭಯಂಕರವಾಗಿಯೂ ಎಷ್ಟೋ ಮಾರ್ಗಗಳಿಂದ ಅಧಃಪಾತವನ್ನುಂಟುಮಾಡುವಂಥಾದ್ದಾಗಿಯೂ ಇರುತ್ತದೆಂದು ಆತನಿಗೆ ಸಂಪೂರ್ಣವಾಗಿ ಗೊತ್ತಿರುವದರಿಂದ ಅವನು ಅಸನ್ಮಾರ್ಗವನ್ನು ಅವಲಂಬಿಸುವದೇ ಇಲ್ಲ. ಉತ್ತಮವಾದ ಪಕ್ವಾನ್ನವನ್ನು ಪರಿತ್ಯಜಿಸಿ ಕದನ್ನವನ್ನು ತಿನ್ನಲು ಯಾವ ಜಾಣನು ತಾನೆ ಆಶಿಸುವನು? ಅದರಂತೆಯೇ ಆಧ್ಯಾತ್ಮಿಕ ಬುದ್ಧಿಯು ಜಾಗ್ರತವಾಗಿರುವ ಮನುಷ್ಯನು ಸತ್ಪ್ರವೃತ್ತಿಯನ್ನು ಬಿಟ್ಟು ಅಸತ್ಪ್ರವೃತ್ತಿಯ ಕಡೆಗೆ ಎಂದೂ ಮನಸ್ಸು ಮಾಡಲಾರನು. ಪಾಪಾಚರಣೆಯ ಕಡೆಗೆ ಮನಸ್ಸಿನ ಪ್ರವೃತ್ತಿಯಿರುವದು ಭ್ರಮೆಯ ಹಾಗು ಅಜ್ಞಾನದ ಫಲವಾಗಿದೆ. ಬುದ್ಧಿಯ ಮೋಹಪಟಲವು ದೂರವಾಗಿರದೆ ಇರುವದರಿಂದಲೂ, ಮತ್ತು ಅದು ಪ್ರಗಲ್ಭವಾಗಿರದೆ ಇರುವದರಿಂದಲೂ 'ಸತ್ಯ' ಹಾಗು 'ಅಸತ್ಯ' ಇವುಗಳ ವಿಷಯವಾಗಿ ಮನಸ್ಸಿನಲ್ಲಿ ಗೊಂದಲವುಂಟಾಗಿ ಪಾಪದ ಕಡೆಗೆ ಪ್ರವೃತ್ತಿಯಾಗುತ್ತದೆ.

ಮನುಷ್ಯನು ಸದಾಚರಣಕ್ಕೋಸ್ಕರ ಪ್ರಯತ್ನಮಾಡಹತ್ತಿದನೆಂದರೆ, ಅವನು ತನ್ನ ಮೇಲೆ ಕೈಮಾಡುವಂಥ ಹಾಗು ನೋಡಲಿಕ್ಕೆ ಅಜೇಯವೆಂದು ತೋರುವಂಥ ಮನೋವಿಕಾರಗಳೆಂಬ ಶತ್ರುಗಳ ಮೇಲೆ ಶಸ್ತ್ರವನ್ನು ಹಿಡಿಯುತ್ತಾನೆ. ಆದರೆ ಅವನಿಗೆ ಜ್ಞಾನಪ್ರಾಪ್ತಿಯಾಗಿ ಯಾವತ್ತು ಐಹಿಕ ವಿಷಯಗಳ ಯಥಾರ್ಥವಾದ ಬೋಧ

ವಾಗುತ್ತ ನಡೆದಂತೆ ಅಸತ್ಪ್ರವೃತ್ತಿಯು ದುರ್ಬಲವಾಗಿಯೂ, ಅಶಕ್ತವಾಗಿಯೂ, ಅಜ್ಞಾನ ಮೂಲಕವಾಗಿಯೂ ಇರುವದೆಂದೂ, ಅದೊಂದು ಭಯಂಕರವಾದ ಶಕ್ತಿಯಲ್ಲ ವೆಂದೂ ಅವನಿಗೆ ತಿಳಿದುಬರುತ್ತದೆ. ಜ್ಞಾನಿಯಾದ ಮನುಷ್ಯನಿಗೆ ದುಃಖದ ಮೂಲವು ಅಜ್ಞಾನವಾಗಿದ್ದು ಅದರ ಮೂಲಕವಾಗಿಯೇ ಮನಸ್ತಾಪವನ್ನು ಭೋಗಿಸಬೇಕಾಗುತ್ತ ದೆಂಬದು ತಿಳಿಯುತ್ತದೆ. 'ಅಸತ್ಯ'ವೆಂದರೆ 'ಸತ್ಯ'ದ ಅಭಾವವೆಂಬ ಜ್ಞಾನವಾಯಿ ತೆಂದರೆ ಮನುಷ್ಯನು 'ಅಸತ್ಪ್ರವೃತ್ತ' ಮನುಷ್ಯನನ್ನು ತಿರಸ್ಕರಿಸದೆ, ಪಾಪರತರಾದ ಮತ್ತು ದುಃಖಿಗಳಾದ ಅವರನ್ನು ಕುರಿತು ಅನುಕಂಪವನ್ನೇ ಪ್ರಕಟಮಾಡುತ್ತಾನೆ.

ಪಾಪಪ್ರವೃತ್ತಿಯೆಂದರೇನು? ಅದರ ಉಗಮವು ಯಾತರಿಂದಾಗಿದೆ? ಈ ಸಂಗತಿ ಗಳನ್ನರಿತುಕೊಂಡು ಅದನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟ ಮನುಷ್ಯನು ಸದ್ಗುಣ ಭ್ರಷ್ಟನಾದ ಎರಡನೆಯ ಮನುಷ್ಯನ ತಿರಸ್ಕಾರವನ್ನಾಗಲಿ, ದ್ವೇಷವನ್ನಾಗಲಿ ಉಪ ಹಾಸವನ್ನಾಗಲಿ ಎಂದೂ ಮಾಡುವದಿಲ್ಲ. ಇಷ್ಟೇ ಅಲ್ಲ, ಬೇರೆಯವನು ಶೀಲಭ್ರಷ್ಟ ನಾಗಿರುವನೆಂಬದು ತಿಳಿದ ಕೂಡಲೇ ಅವನ ಸ್ಥಿತಿಯು ಹೀಗೇಕೆ ಆಯಿತು ? ಅವನು ಯಾವ ವಿಷಯದಲ್ಲಿ ತಪ್ಪುತ್ತಾನೆ ? ಅವನ ಆಧ್ಯಾತ್ಮಿಕ ಅವನತಿಯಾಗಲಿಕ್ಕೆ ಕಾರಣ ವೇನು ? ಇವನ್ನೆಲ್ಲ ಶೋಧಿಸಿ ದಯೆಯಿಂದ ಆತನನ್ನು ಸನ್ಮಾರ್ಗಕ್ಕೆ ಹಚ್ಚಲು ಪ್ರಯತ್ನ ಮಾಡುವನು. ಆದರೆ ಅಂತರ್ದೃಷ್ಟಿಯಿಲ್ಲದ ಮನುಷ್ಯನು ಭ್ರಷ್ಟನಾದವನ ತಿರಸ್ಕಾರ ವನ್ನೇ ಮಾಡುವನು. ಅಂತರ್ದೃಷ್ಟಿಯಿಂದ ಮನುಷ್ಯಮಾತ್ರರಲ್ಲಿ ಪ್ರೇಮವು ಉತ್ಪನ್ನ ವಾಗುತ್ತದೆ; ಮತ್ತು ಅನುಕಂಪನವು ಜ್ಞಾನದ ಫಲವಾಗಿದೆ.

ತನ್ನ ಚಿತ್ತವು ಶುದ್ಧವಾಗುವದರಿಂದಲೂ, ಯಾವಾಗಲೂ ಸದ್ವರ್ತನದಿಂದಿರುವ ದರಿಂದಲೂ ಪ್ರಾಪ್ತವಾಗುವ ಜ್ಞಾನದ ಪರಿಣತಾವಸ್ಥೆಯೆಂದರೇ ಉತ್ತಮವಾದ ಶೀಲ ವುಂಟಾಗುವದು. ಈ ಪ್ರಕಾರ ಶೀಲವು ಉತ್ತಮವಾಯಿತೆಂದರೆ, ಅಂತಹ ಮನುಷ್ಯನಲ್ಲಿ ನಿಯಮಿತತನವೂ, ಪ್ರೇಮವೂ ಉತ್ಪನ್ನವಾಗುತ್ತವೆ. ಅವನ ಬುದ್ಧಿಯು ಬೆಳೆದು ಇಚ್ಛಾ ಶಕ್ತಿಯು ಸತೇಜವಾಗುತ್ತದೆ. ಮತ್ತು ಅಂತಃಕರಣವು ಪ್ರಫುಲ್ಲವಾಗಿ ಇವೆಲ್ಲವುಗಳ ಸಮುಚ್ಚಯದಿಂದ ಆ ಮನುಷ್ಯನು ವಿವೇಕಸಂಪನ್ನನೂ ಸಾತ್ವಿಕ ಬುದ್ಧಿಯವನೂ ಆಗುತ್ತಾನೆ. ಇಂತಹನಲ್ಲಿ ಸರ್ವಭೂತಾನುಕಂಪನವೂ, ಸಹಾನುಭೂತಿಯೂ, ಪಾವಿ ತ್ರ್ಯವೂ, ಜ್ಞಾನವೂ ವಾಸಮಾಡುತ್ತಿರುತ್ತವೆ. ಹೀಗೆ ಸದ್ವರ್ತನದಿಂದ ಜ್ಞಾನ ವುಂಟಾಗಿ ಆ ಜ್ಞಾನದಿಂದ ಅಥವಾ ಅಂತರ್ದೃಷ್ಟಿಯಿಂದ ಸದ್ವರ್ತನವು ಸ್ಥಿರವಾಗುತ್ತದೆ. ಪವಿತ್ರವಾದ ಮತ್ತು ಉದಾತ್ತವಾದ ವಿಷಯಗಳ ಕಡೆಗೆ ಮನಸ್ಸಿನ ಪ್ರವೃತ್ತಿಯಾಗು ತ್ತದೆ. ಇಂತಹ ಮನುಷ್ಯನನ್ನು ಜನರು ಸಾಧುಕೋಟಿಯಲ್ಲಿ ಗಣಿಸಹತ್ತುತ್ತಾರೆ.

ಪ್ರತಿಕೂಲವಾದ ಪರಿಸ್ಥಿತಿಯಿಂದಾಗಲಿ, ಭಿನ್ನಸ್ವಭಾವದ ಮನುಷ್ಯನ ಸಹವಾಸ ದಿಂದಾಗಲಿ ಯಾವ ಮನುಷ್ಯನ ಸತ್ಪ್ರವೃತ್ತಿಯು ಪರಿವರ್ತನವನ್ನೈದುವದಿಲ್ಲವೋ ಆತನು ದೈವಿಕ ಸಾಮರ್ಥ್ಯವುಳ್ಳವನೆಂದು ತಿಳಿಯಬೇಕು. ಅಂತಹನೇ ಪರಬ್ರಹ್ಮನ ಪರಿಚಯ ವನ್ನು ಪಡೆಯುವನು; ಅವನಿಗೆ ದುಃಖಬಾಧೆಯು ಎಂದೂ ಉಂಟಾಗಲಾರದು.

ಯಾಕಂದರೆ ದುಃಖದ ಸಂಬಂಧವೇ ಇಲ್ಲದ ಮನುಷ್ಯನು ಸತ್ಯವಾದ ಹಾಗು ನಾಶ-ರಹಿತವಾದ ವಿಷಯಗಳನ್ನು ಕುರಿತೇ ಆಲೋಚಿಸುವನು. ಸದಾಚಾರದ ವಿಷಯವಾಗಿದ್ದ ಭ್ರಾಮಕ ಕಲ್ಪನೆಯ ಮೂಲಕವಾಗಿಯೇ ಮನುಷ್ಯನಿಂದ ದುಷ್ಕೃತ್ಯಗಳುಂಟಾಗುವ ದೆಂದು ಆತನು ಚನ್ನಾಗಿ ತಿಳಿದುಕೊಂಡಿರುವದರಿಂದ ಯಾವ ವ್ಯಕ್ತಿಯ ವಿಷಯಕ್ಕೂ ಆತನು ದ್ವೇಷಭಾವವನ್ನು ವಹಿಸದೆ, ಶುದ್ಧಾಂತಃಕರಣದಿಂದ ವಿಮತ್ಸರನಾಗಿರುತ್ತಾನೆ.

ಇಂತಹ ಮನುಷ್ಯನು ಬೇಕಾದಂಥ ಮೂಲೆಯಲ್ಲಿ ಬಿದ್ದುಕೊಂಡಿದ್ದರೂ ಆತನ ಜೀವಿತವು ಪ್ರಭಾವಶಾಲಿಯಾಗಿಯೇ ಇರುತ್ತದೆ. ಯಾಕಂದರೆ ಸದ್ವರ್ತನವೇ ಜಗತ್ತಿನೊಳಗೆ ಎಲ್ಲಕ್ಕೂ ಶ್ರೇಷ್ಠವಾದ ವಿಷಯವಾಗಿದೆ. ಇಂತಹ ಮನುಷ್ಯನು ವಾಸಿಸಿರುವಾಗ ಅವನ ಶ್ರೇಷ್ಠತ್ವವು ಒಂದು ವೇಳೆ ಜನರಿಗೆ ತಿಳಿಯದೆ ಇದ್ದರೂ ಇಂತಹ ಮನುಷ್ಯನು ಮನುಷ್ಯ ಜಾತಿಯಲ್ಲಿ ಸಂಚಾರ ಮಾಡುವದು ಮಾನವ ಜಾತಿಯ ಮೇಲಿನ ಒಂದು ದೊಡ್ಡ ಉಪಕಾರವೆಂದು ತಿಳಿಯಬೇಕು. ಜಗತ್ತಿನ ಭವಿತವ್ಯತೆಯು ಭೂತ ಕಾಲದಲ್ಲಿ ಸಜ್ಜನರ ಕೈಯಲ್ಲಿ ಇತ್ತು; ಈಗಲಾದರೂ ಇದೆ; ಮುಂದಾದರೂ ಸಿಕ್ಕಯವಾಗಿ ಇರುವದು. ಸದ್ಗುಣ ಪ್ರವೃತ್ತಿಯು ಅಷ್ಟೊಂದು ಸಾಮರ್ಥ್ಯವುಳ್ಳದ್ದಾಗಿದೆ. ಸಜ್ಜನರು ಮಾನವ ಜಾತಿಗೆ ಮಾರ್ಗದರ್ಶಕರೂ ಉದ್ಧಾರ ಕರ್ತೃಗಳೂ ಆಗಿರುತ್ತಾರೆ. ಸದ್ಯಕ್ಕೆ ನಡೆದ ಉತ್ಕ್ರಾಂತಿಗಳಲ್ಲಿ ಸದ್ಗುಣಪ್ರವೃತ್ತಿಗಳಿಂದಲೇ ಮಾನವ ಜಾತಿಯು ಉನ್ನತಿಯನ್ನು ಹೊಂದಹತ್ತಿದೆ. ಇದರ ಮೇಲಿಂದ ಕೆಲವು ಗೂಢವಾದ ಅದ್ಭುತ ವಿಷಯಗಳಲ್ಲಿ ಸಮಾಜದಲ್ಲಿ ಉತ್ಕ್ರಾಂತಿಯುಂಟಾಗಿದೆಯೆಂದು ಮಾತ್ರ ಯಾರೂ ತಿಳಿಯಬಾರದು. ವ್ಯಾವಹಾರಿಕ ದೃಷ್ಟಿಯಿಂದ ಈ ಉನ್ನತಿಯಾಗುತ್ತ ನಡೆದಿದ್ದು, ಅದು ಸಜ್ಜನರ ಆದರ್ಶರೂಪವಾದ ವರ್ತನಕ್ರಮದಿಂದಲೂ ಸತ್ಕೃತ್ಯಗಳ ತೇಜಸ್ಸಿನಿಂದಲೂ ಆಗಹತ್ತಿದೆ. ಯಾವ ಸತ್ವಧೀರಪುರುಷರು ಜಗತ್ತಿನ ಕಲ್ಯಾಣಕ್ಕೋಸುಗ ತಮ್ಮ ದೇಹವನ್ನು ಸವೆಸುತ್ತಿರುವರೋ ಅವರಿಗೆ ಅಪ್ರಬುದ್ಧ ಜನರು ಚಮತ್ಕಾರ ಕರ್ತೃಗಳೆಂದು ಅನ್ನರೊಲ್ಲರೇಕೆ; ನಿಜವಾಗಿ ಇಂತಹ ಜನರು ಚಮತ್ಕಾರ ಕರ್ತೃಗಳಾಗಿರದೆ ಸದ್ವರ್ತನ ಪ್ರಸಾರಾರ್ಥವಾಗಿ ಪ್ರಯತ್ನಿಸುವರೂ, ಸತ್ಪ್ರವೃತ್ತಿಯ ದಾಸರೂ ಆಗಿರುತ್ತಾರೆ.

ದುಷ್ಟಪ್ರವೃತ್ತಿಯ ಅಧಿಕಾರವು ಜಗತ್ತಿನ ಮೇಲೆ ಹಿಂದಿನ ಕಾಲದಲ್ಲಿ ನಡೆಯುತ್ತಿದ್ದಿಲ್ಲ. ಸದ್ಯಕ್ಕೆ ನಡೆಯುತ್ತಿರುವದಿಲ್ಲ; ಮತ್ತು ಮುಂದಾದರೂ ನಡೆಯುವದಿಲ್ಲ. ಯಾಕಂದರೆ ದುಷ್ಕೃತ್ಯಗಳು ಜಗತ್ತಿನಲ್ಲಿ ಹೆಚ್ಚಾಗಿ ಉಂಟಾಗಹತ್ತಿದವೆಂದರೆ ಜಗತ್ತಿನ ಅಸ್ತಿತ್ವವು ವಿಲಯವಾಯಿತೆಂದೇ ತಿಳಿಯತಕ್ಕದ್ದು. ಅಂಧಕಾರವು ಪ್ರಕಾಶದ ಅಭಾವವಾಗಿರುವಂತೆ, ಸತ್ಕೃತಿಯ ಅಭಾವವೇ ದುಷ್ಕೃತಿಯು; ಮತ್ತು ಪ್ರಕಾಶ ಅಥವಾ ಜ್ಞಾನವೇ ಜಗತ್ತಿನ ಧಾರಣವಾಗಿದ್ದು ಅಂಧಕಾರ ಇಲ್ಲವೆ ಅಜ್ಞಾನದ ಕಾರ್ಯಗಳು ಎಂದೂ ನಡೆಯಲಾರವು. ದುಷ್ಕರ್ಮವು ಜಗತ್ತಿನೊಳಗಿನ ತೀರ ದುರ್ಬಲ ಸಂಗತಿಯಾಗಿದ್ದು ಅದರಿಂದ ಯಾವ ಕಾರ್ಯವೂ ಸಾಧ್ಯವಾಗುವದಿಲ್ಲ. ಈ ಜಗತ್ತು ಕೇವಲ

ಸತ್ಪ್ರವೃತ್ತಿಯಿಂದಲೇ ನಡೆದಿದೆ. ವಿಶ್ವವು 'ಸತ್ಯ'ದಿಂದ ತುಂಬಿ ಹೋಗಿದೆ; ಮತ್ತು ದುಷ್ಕರ್ಮಕ್ಕೆ ಎಂದೂ ವಿಜಯವು ದೊರೆಯುವದಿಲ್ಲ.

ಅಂತರ್ದೃಷ್ಟಿಯೆಂದರೆ ಸರ್ವತ್ರವೂ ಸತ್ಯದ ಪ್ರಕಾಶವಿರುವದೆಂಬ ಜ್ಞಾನವಾಗುವದು. ಈ ಪ್ರಕಾಶದಿಂದಲೇ ಯಾವತ್ತು ವಿಷಯಗಳ ಜ್ಞಾನವಾಗುವದು. ಸೂರ್ಯ ಪ್ರಕಾಶದಿಂದ ಎಲ್ಲ ವಸ್ತುಗಳ ಯಥಾರ್ಥಜ್ಞಾನವಾಗುವಂತೆ, ಸತ್ಯದ ಪ್ರಕಾಶವು ಅಂತಃಕರಣವಲ್ಲಿ ಬಿತ್ತೆಂದರೆ ಜೀವಿತದೊಳಗಿನ ಯಾವತ್ತು ವಿಷಯಗಳ ಯಥಾರ್ಥಜ್ಞಾನವು ಆದರಿಂದಾಗುವದು. ಯಾವನು ತನ್ನ ದೃಷ್ಟಿಯನ್ನು ಅಂತರ್ಮುಖವಮಾಡಿ ಸತ್ಯದ ಸಹಾಯದಿಂದ ತನ್ನ ಹೃದಯವನ್ನು ಶೋಧಿಸುವನೋ, ಅವನಿಗೆ ಎಲ್ಲರ ಹೃದಯಗಳ ಜ್ಞಾನವಾಗುತ್ತದೆ. ಬಹು ದಿವಸಗಳ ಪರೀಕ್ಷಣದಿಂದ ಯಾವನು ಸತ್ಯನಿಯಮಗಳನ್ನು ಆಕಲನ ಮಾಡಿಕೊಂಡನೋ ಅವನಿಗೆ ವಿಶ್ವವ್ಯಾಪಕವಾದ ಹಾಗು ವಿಶ್ವಾಧಾರಭೂತವಾದ ಈಶ್ವರೀ ಸೂತ್ರಗಳ ಜ್ಞಾನವಾಗುತ್ತದೆ. ಜ್ಞಾನದಿಂದ ಅಸನ್ಮಾರ್ಗವು ಇಲ್ಲದಂತಾಗಿ ಧರ್ಮಮೂಢತನವೂ ದೂರಾಗುತ್ತದೆ. ಪಾಪಪ್ರವೃತ್ತಿಯೇ ಅಸನ್ಮಾರ್ಗಾವಲಂಬನವು. ಮನುಷ್ಯರು ಒಬ್ಬರ ಮೇಲೊಬ್ಬರು ಕೈ ಮಾಡುತ್ತಾರೆ. ಆದರೆ ಸ್ವಂತ ಮಾತ್ರ ಅಜ್ಞಾನದಲ್ಲಿ ಉಳಿಯುತ್ತಾರೆ. ಮನುಷ್ಯನಲ್ಲಿ ಪಾಪಪ್ರವೃತ್ತಿಯು ಇಲ್ಲದಂತಾದರೆ ಮಾತ್ರ ಜ್ಞಾನ ಪ್ರಾಪ್ತಿಯಾಗುತ್ತದೆ; ಮತ್ತು ಪಾಪಪ್ರವೃತ್ತಿಯಿಂದಲೇ ಧರ್ಮ ಮೂಢತನವು ಉದ್ಭವಿಸುತ್ತದೆ. ದೃಷ್ಟಿಯು ವಿಕಲ್ಪಿತವಾಯಿತೆಂದರೆ ಅಜ್ಞಾನಮೂಲಕ ಭ್ರಮೆಗಳುತ್ಪನ್ನವಾಗುತ್ತವೆ. ಮತ್ತು ಅಂತಃಕರಣವು ದುಷ್ಟವಿಕಾರಗಳಿಂದ ತುಂಬಿ ಹೋಗಿರುವದರಿಂದ ಇಂತಹರ ದೃಷ್ಟಿಗೆ ಕಾಲ್ಪನಿಗೆ ರಾಕ್ಷಸರ ಭೀತಿಯೇ ಕಾಣಹತ್ತುತ್ತದೆ. ಆದರೆ ಶುದ್ಧ ಜ್ಞಾನವಾದವನಲ್ಲಿ ಭೀತಿಯೇ ಉಳಿಯುವದಿಲ್ಲ. ಭೂತಪಿಶಾಚಗಳೂ; ಕ್ರೂರ ಹಾಗು ತಾಮಸೀ ದೇವತೆಗಳೂ ಕೇವಲ ಮನುಷ್ಯನ ಅಜ್ಞಾನಜನ್ಯ ಕಲ್ಪನೆಗಳ ಫಲಗಳಾಗಿದ್ದು, ಶುದ್ಧಚಿತ್ತನಾದ ಮನುಷ್ಯನ ತೀಕ್ಷ್ಣದೃಷ್ಟಿಯಿಂದ ಅವುಗಳ ಉತ್ಪಾದಕ ಭ್ರಮೆಗಳೊಡನೆ ನಾಶಹೊಂದುತ್ತವೆ. ಈ ಪ್ರಕಾರ ಪವಿತ್ರನಾದ ಮನುಷ್ಯನಿಗೆ ಎಲ್ಲ ಕಡೆಯಲ್ಲಿಯೂ ನಯನಮನೋಹರವಾದ ಹಾಗು ನಿಯಮಬದ್ಧವಾದ ವಿಶ್ವವು ಕಾಣಹತ್ತುತ್ತದೆ.

ಅಂತರ್ದೃಷ್ಟಿಯು ಪ್ರಾಪ್ತವಾದ ಮನುಷ್ಯನು ಸಾಧುಸಂತರ ಮೋಕ್ಷದಾಯಕವಾದ ವಿಚಾರಗಳ ಸಾಹಚರ್ಯದಲ್ಲಿ ತನ್ನ ಕಾಲಕ್ಷೇಪವನ್ನು ಮಾಡುತ್ತಿರುತ್ತಾನೆ. ಕ್ಷಣಿಕವಾದ ಪವಿತ್ರತೆಯ ತರಂಗವು ಅವನ ಮನಸ್ಸಿನಲ್ಲಿ ಬಂದು ಕೂಡಲೇ ನಾಶವಾಗಿ ಹೋಗದೆ, ಅವನು ಯಾವಾಗಲೂ ಪವಿತ್ರವಿಚಾರಗಳಲ್ಲಿಯೇ ನಿಮಗ್ನನಾಗಿರುತ್ತಾನೆ. ಆತ್ಮಭಾವ ಹಾಗು ದುಃಖ ಇವುಗಳೊಳಗಿನ ತ್ರಾಸದಾಯಕವಾದ ದೀರ್ಘಪ್ರವಾಸವನ್ನು ಆತನು ಮುಗಿಸಿದ್ದು, ಈಗ ಆತನಿಗೆ ಪೂರ್ಣಶಾಂತಿಯು ಪ್ರಾಪ್ತವಾಗಿರುತ್ತದೆ. ಅವನು ಯಾವಾಗಲೂ ಆನಂದದಲ್ಲಿರುತ್ತಾನೆ, ವಿಜಯಶ್ರೀಯು ಅವನ ಮುಖದಲ್ಲಿ ಒಪ್ಪುತ್ತಿರುತ್ತದೆ. ಜಗತ್ತಿನೊಳಗಿನ ಪಾಪ, ವಿಪತ್ತಿ ಹಾಗು ಕ್ಲೇಶಗಳು ಇತರರಿಗಿಂತ ಆತನಿಗೆ ಸ್ಪಷ್ಟ

ವಾಗಿ ಕಂಡುಬರುತ್ತವೆ. ಯಾಕಂದರೆ ಮೊದಲು ತಾನು ಅವುಗಳಲ್ಲಿ ಸಿಲುಕಿ ಒದ್ದಾಡು
ವಾಗ ಯಾವ ಜ್ಞಾನವಿದ್ದಿಲ್ಲವೋ ಅದರ ಮೂಲಕಾರ್ಯಕಾರಣ ಸಂಬಂಧವೂ, ಅದರ
ಪರಿಪಾಕ ಮತ್ತು ಫಲಪ್ರಾಪ್ತಿಗಳ ಅನ್ಯೋನ್ಯ ಸಂಬಂಧವೂ, ಅವನಿಗೆ ಪೂರ್ಣವಾಗಿ
ತಿಳಿಯುತ್ತಿರುತ್ತವೆ. ಅಪತ್ಯವತ್ಸಲೆಯಾದ ಮಾತೆಯು ತನ್ನ ಅರ್ಭಕನ ಜೋಪಾನೆ
ಗೋಸ್ಕರ ಮನಃಪೂರ್ವಕವಾಗಿ ಪ್ರಯತ್ನಿಸುವಂತೆ ಆ ಮನುಷ್ಯನು ಅಜ್ಞಾನಪಂಕದಲ್ಲಿ
ಬಿದ್ದು ದುಃಖಶೋಕದಲ್ಲಿ ಮಗ್ನರಾದ ಜನರನ್ನು ಜ್ಞಾನಸಂಪನ್ನರನ್ನಾಗಿಯೂ ಸುಖಿ
ಗಳನ್ನಾಗಿಯೂ ಮಾಡಲು ತ್ರಿಕರಣಪೂರ್ವಕವಾಗಿ ಪ್ರಯತ್ನ ಮಾಡುವನು.

ಯಾವತ್ತು ಜಗತ್ತಿನ ವ್ಯವಹಾರವು ನ್ಯಾಯದಿಂದಲೇ ನಡೆದಿದೆಯೆಂದು ಆತನು
ತಿಳಿದಿರುತ್ತಾನೆ. ದುಷ್ಕೃತ್ಯವು ತೋರಿಕೆಯ ಸನ್ಮಾನವನ್ನು ಹೊಂದಿ ಅದಕ್ಕೋಸುಗ
ನಾಲ್ವರಲ್ಲಿ ಒಂದು ತರದ ಹೆಸರುವಾಸಿತನವು ಪ್ರಾಪ್ತವಾದರೂ ಅಸನ್ಮಾರ್ಗದಿಂದ ನಿಜ
ವಾದ ಯಶೋಲಾಭವಾಗಲಾರದೆಂದೂ, ಅದು ಕಟ್ಟಕಡೆಗೆ ನಾಶವನ್ನೇ ಹೊಂದುವ
ದೆಂದೂ ಆತನಿಗೆ ಪೂರ್ಣವಾಗಿ ಅವಗತವಿರುತ್ತದೆ. ಸರ್ವವ್ಯಾಪಿಯಾದ ಸತ್ಯವು ಜಗ
ತ್ತಿನ ನಿದರ್ಶನಕ್ಕೆ ಜಾರದೆ ಇದ್ದರೂ ಅದು ಅವಿನಾಶಿಯಾಗಿದೆಯೆಂದೂ ಜಗತ್ತಿನ
ಮೇಲೆಲ್ಲ ಅದರ ಅಧಿಕಾರವು ಅಬಾಧಿತವಾಗಿ ಉಂಟೆಂದೂ ಆತನ ಭಾವನೆಯಿರುತ್ತದೆ.
'ಸತ್ಯದ' ಘನತೆಯೂ, ಶ್ರೇಷ್ಠತೆಯೂ, ಸಾಮರ್ಥ್ಯವೂ ಅಪಾರವಾಗಿದ್ದು, ದುಷ್ಕೃತ್ಯವು
ಕ್ಷುದ್ರವೂ ದುರ್ಬಲವೂ, ತೇಜೋಹೀನವೂ ಆಗಿರುವದೆಂದು ಅವನು ಅರಿತುಕೊಂಡಿರು
ತ್ತಾನೆ. ಈ ಪ್ರಕಾರದ ಸದ್ಭಾವನೆಗಳುಳ್ಳ ಮನುಷ್ಯನು ಯಾವಾಗಲೂ ಸತ್ಕೃತ್ಯ
ಗಳಲ್ಲಿಯೇ ಮಗ್ನನಿರುತ್ತಾನೆ. ಆತನು ಸತ್ಯದ ದಾಸನಾಗುತ್ತಾನೆ; ಮತ್ತು ಸತ್ಕೃತ್ಯ
ಗಳಲ್ಲಿ ರಮಮಾಣನಾಗುವದರಿಂದಲೇ ಆತನಿಗೆ ಅತ್ಯಾನಂದವಾಗುತ್ತದೆ.

ಹೃದಯದಲ್ಲಿ ಅಂತರ್ದೃಷ್ಟಿಯ ಉಗಮವಾಯಿತೆಂದರೆ ಸತ್ಯಸ್ವರೂಪದ ಬೋಧ
ವಾಗುತ್ತದೆ. ಇದು ಕೇವಲ ಆಲಂಕಾರಿಕ ಭಾಷೆಯಾಗಿರದೆ ವಿಶ್ವವು ಸತ್ಯಸ್ವರೂಪ
ವಾಗಿದ್ದು ಯಾವದು ಪಿಂಡದಲ್ಲಿರುವದೋ ಅದು ಬ್ರಹ್ಮಾಂಡದಲ್ಲಿಯೂ ಇರುವದೆಂಬ
ಮಾತಿನ ನಿಜತ್ವವು ಕಂಡುಬರುತ್ತದೆ. ವಸ್ತುವಿನ ಸ್ಥಿತ್ಯಂತರವಾದರೂ, ಇಲ್ಲವೆ ವಸ್ತುವು
ನಾಶಹೊಂದಿದರೂ ಅದರಿಂದ ಅಂತರ್ದೃಷ್ಟಿಯುಳ್ಳ ಮನುಷ್ಯನಿಗೆ ದುಃಖವಾಗುವದಿಲ್ಲ.
ಯಾಕಂದರೆ, ಸ್ಥಿತ್ಯಂತರವುಂಟಾದರೂ ಅಥವಾ ನಾಶವಾದರೂ ಅವಿನಾಶಿಯಾದ ತತ್ವವು
ಜಗತ್ತಿನಲ್ಲಿರುವದೆಂಬ ಜ್ಞಾನವು ಅವನಿಗಿರುತ್ತದೆ.

ಈ ತತ್ವಜ್ಞಾನದಿಂದಲೇ ಸಾಧುಸಂತರ ಉದಾರ ಪ್ರವೃತ್ತಿಯಾಗಲಿ ಅಧಿಕಾರ
ವಾಗಲಿ ಕಂಡುಬರುತ್ತದೆ. ಮನುಷ್ಯಜಾತಿಗೆ ಮಾರ್ಗದರ್ಶಕರಾದ ಮಹಾತ್ಮರಲ್ಲಿ
ಪೂರ್ವೋಕ್ತ ಮಹಾಶಯರಿಗಿಂತಲೂ ಅಧಿಕವಾಗಿ ಈ ಜ್ಞಾನವು ವಾಸವಾಗಿರುತ್ತದೆ.
ಅವರಲ್ಲಿ ವಿಶ್ವಾತ್ಮಭಾವವು ಪೂರ್ಣ ಜಾಗ್ರತವಾಗಿರುತ್ತದೆ. ಜೀವಿತದ ಸಾಫಲ್ಯವೆಂದ
ರೇನೆಂಬದನ್ನು ಅವರು ಅರಿತಿರುತ್ತಾರೆ; ಮತ್ತು ಸತ್ಯಧರ್ಮದ ಜ್ಞಾನಮಾಡಿಕೊಂಡು
ಅದರಂತೆಯೇ ತಮ್ಮ ವರ್ತನಕ್ರಮವನ್ನಿಡುತ್ತಾರೆ ! ಆತ್ಮಜಯವನ್ನು ಅವರು ಸಂಪಾ

ಡಿಸಿರುವದರಿಂದ ಅವರ ಯಾವತ್ತು ಮಾಯಮೋಹಗಳು ನಷ್ಟವಾಗುತ್ತವೆ. ದುಷ್ಟ ವಿಚಾರಗಳನ್ನು ದಮನಪಡಿಸಿರುವದರಿಂದ ಅವರ ದುಃಖವು ಇಲ್ಲದಂತಾಗಿರುತ್ತದೆ. ಅವರು ಸ್ವತಃ ಪವಿತ್ರರಾಗಿರುವದರಿಂದ ನಾಲ್ಕೂ ಕಡೆಗೆ ಅವರಿಗೆ ಬ್ರಹ್ಮವೇ ಗೋಚರವಾಗುತ್ತದೆ.

ಯಾವನು ಸತ್ಯವಾದ ಪವಿತ್ರವಾದ ಮತ್ತು ಸರಳವಾದ ಮಾರ್ಗವನ್ನೇ ಅವಲಂಬಿಸಿ, ವಿಪರ್ಯಾಸ, ನಿಂದೆ, ಅಥವಾ ಆಘಾತಗಳು ಬೇಕಾದಷ್ಟು ಪ್ರಾಪ್ತವಾದರೂ ಅವೆಲ್ಲವುಗಳನ್ನು ತಡೆದು ಸತ್ಪಥದಿಂದ ಚ್ಯುತನಾಗದೆ ಇರುವನೋ ಅಂತಹನಿಗೇ ಅಂತರ್ದೃಷ್ಟಿಯು ಪ್ರಾಪ್ತವಾಗಿ ಯಾವತ್ತು ಜಗತ್ತು ಸತ್ಯಮಯವಾಗಿ ಕಾಣಹತ್ತುತ್ತದೆ. ಆ ಮೇಲೆ ಆತನ ಯಾವತ್ತು ತಪಸ್ಸು ಪೂರ್ಣವಾಯಿತೆಂದು ತಿಳಿಯಬೇಕು. ಇನ್ನು ಮುಂದೆ ಆತನಿಗೆ ಯಾವದೇ ವಿಷಯದ ತಾಪವಾಗಲಿ ದುಃಖವಾಗಲಿ ಆಗಲಾರದು. ಪಾವಿತ್ರ್ಯ ಹಾಗು ಆನಂದಗಳು ಅವನಿಗೆ ನಿರಂತರವಾಗಿ ಸಹಚಾರಿಗಳಾಗುತ್ತವೆ. ಸತ್ಯದ ವಿಜಯವಾಯಿತೆಂದು ಅಖಿಲ ವಿಶ್ವದಲ್ಲಿ ಆನಂದವು ಪಸರಿಸುತ್ತದೆ. ಮತ್ತು ಯಾವತ್ತು ಜಗತ್ತು ಒಳ್ಳೇ ಆನಂದದಿಂದ ಇಂತಹ ಸತ್ಪುರುಷರ ಜಯಜಯಕಾರವನ್ನು ಮಾಡುತ್ತದೆ.

○

# ೯. ಮನುಷ್ಯನ ಪ್ರಭುತ್ವ

ಆತ್ಮಭಾವ ಅಥವಾ ಅಹಂಕಾರವನ್ನು ಗೆದ್ದ ನಂತರ ಒಂದು ವಿಶಿಷ್ಟ ಪ್ರಕಾರದ ತಿಳುವಳಿಕೆಯು ಮನುಷ್ಯನಲ್ಲಿ ಉತ್ಪನ್ನವಾಗಿರುತ್ತದೆ. ನನ್ನದು ನಿನ್ನದು, ಚಲೋದು ಕೆಟ್ಟದು, ಸ್ವಾರ್ಥ ಮೊದಲಾದವುಗಳಿಂದ ತುಂಬಿರುವ ಹಾಗು ಉದ್ವೇಗ ಹಾಗು ವಿಪತ್ತಿಗಳನ್ನು ಉಪಭೋಗಿಸಲಿಕ್ಕೆ ಹಚ್ಚುವ ಪ್ರಾಪಂಚಿಕ ಬುದ್ಧಿಯಿಂದ ಇದು ತೀರ ಭಿನ್ನವಾಗಿರುತ್ತದೆ. ಇದನ್ನು ನಾವು ದೈವಿಕ ಬುದ್ಧಿಯೆಂದು ಕರೆಯುವ. ಮಾನವಜಾತಿ ಮತ್ತು ವಿಶ್ವ, ಅವಿನಾಶಿಯಾದ ಧ್ಯೇಯ, ಸನ್ಮಾರ್ಗ ಚಾತುರ್ಯ ಮತ್ತು ಸತ್ಯ ಇವುಗಳೊಡನೆಯೇ ಈ ದೈವಿಕ ಬುದ್ಧಿಯ ಸಂಬಂಧವುಂಟು. ವ್ಯಕ್ತಿಯ ಸುಖ, ಸಂರಕ್ಷಣ ಇಲ್ಲವೆ ಯೋಗಕ್ಷೇಮವನ್ನು ಅದು ವಹಿಸುವದಿಲ್ಲ. ಇವುಗಳೊಡನೆ ದೈವಿಕ ಬುದ್ಧಿಯು ಕರ್ತವ್ಯವಿಲ್ಲವೆಂದರೆ, ಅದರಿಂದ ವ್ಯಕ್ತಿವಿಷಯಕವಾದ ಸುಖವು ಪೂರ್ಣವಾಗಿ ಇಲ್ಲದಂತಾಗುತ್ತದೆಯೆಂಬ ಅರ್ಥವಲ್ಲ. ಆದರೆ ಅದಕ್ಕೋಸುಗ ಲೋಲುಪರಾಗಿ, ಅದನ್ನೇ ಮುಖ್ಯ ಧ್ಯೇಯವನ್ನಾಗಿಟ್ಟುಕೊಳ್ಳುವಷ್ಟು ಮಹತ್ವವು ಆ ವ್ಯಕ್ತಿಸುಖಕ್ಕೆ ಕೊಡಲ್ಪಡುವದಿಲ್ಲ. ಈ ಬುದ್ಧಿಯು ಶುದ್ಧಮಾರ್ಗಗಾಮಿಯಾಗಿದ್ದು ಶುದ್ಧವಾದ ಆಚಾರ ವಿಚಾರಗಳಿಂದ ತನ್ನಿಂದ ತಾನೇ ಲಭಿಸುವ ಸುಖದಿಂದಲೇ ಸಂತೋಷ ಹೊಂದುವದೇ ಹೊರತು ಸುಖೋಪಭೋಗವೇ ಇತಿಕರ್ತವ್ಯತೆಯೆಂದು ಭಾವಿಸುವದಿಲ್ಲ. ಈ ದೈವಿಕ ಭಾವನೆಯಲ್ಲಿ ಪಾಪ ಮತ್ತು ದುಃಖಗಳ ಸಂಪರ್ಕವೇ ಇರುವದಿಲ್ಲ. ಜೀವಿತದ ಮೂಲವು ಯಾತರಲ್ಲಿ ಉಂಟು ? ಅದರ ನಿಜವಾದ ಹೇತುವೇನು ? ಈ ಮೊದಲಾದ ಜ್ಞಾನವಾಗಿರುವದರಿಂದ ಪಾಪಪ್ರವೃತ್ತಿಯು ಸಮೂಲವಾಗಿಯೇ ನಾಶವಾಗಿರುತ್ತದೆ. ಆದುದರಿಂದ ದುಃಖದ ಕಾರಣವೇ ಇರುವದಿಲ್ಲ. ಜೀಜಸನು ಈ ಸ್ಥಿತಿಗೆ 'ಪರಮೇಶ್ವರನ ರಾಜ್ಯ'ವೆಂದು ಅನ್ನುತ್ತಾನೆ. ಬುದ್ಧನು ಇದಕ್ಕೆ 'ನಿರ್ವಾಣ'ವೆಂಬ ಹೆಸರು ಕೊಟ್ಟದ್ದಾನೆ. ಚೀನ ದೇಶದ ತತ್ವವೇತ್ತನು ಇದನ್ನೇ 'ಟಾವೋ' ಎಂದು ಕರೆದಿದ್ದಾನೆ. ಇಮರ್ಸನನು ಇದಕ್ಕೆ 'ಪರಾತ್ಪರಾತ್ಮಾ' ಎಂದು ಸಂಬೋಧಿಸಿದ್ದಾನೆ. ಮತ್ತು ಡಾ. ಬರ್ಕನು ಇದನ್ನೇ 'ವಿಶ್ವಾತ್ಮಭಾವ' ವೆಂದು ಹೇಳಿರುವನಲ್ಲದೆ ಅದೇ ಹೆಸರಿನ ಒಂದು ಗ್ರಂಥವನ್ನೂ ಬರೆದಿದ್ದಾನೆ.

ಮನುಷ್ಯನ ನಿತ್ಯದ ಬುದ್ಧಿಯೆಂದರೆ ಆತ್ಮಭಾವ ಅಥವಾ ಅಹಂಕಾರವು. 'ನಾನು' ಎಂಬ ಅಹಂಕಾರವು ಪ್ರತಿಯೊಬ್ಬ ಮನುಷ್ಯನಲ್ಲಿ ಇದ್ದೇ ಇರುತ್ತದೆ. ಈ ಅಹಂಕಾರದಿಂದಲೇ ಅಪಾರವಾದ ಚಿಂತೆಯೂ ಸಂಕಟಗಳೂ ಪ್ರಾಪ್ತವಾಗುತ್ತವೆ. ಇದರಿಂದ ದೇಹದ ನಾಶವು ದುಃಖದ ಪರಮಾವಧಿಯೆಂದು ಎಣಿಸಲ್ಪಟ್ಟ ಶರೀರವು ಅಮರವಾಗಿರಬೇಕೆಂಬ ಮಾತಿಗೆ ಪ್ರಾಧಾನ್ಯವು ಬರುತ್ತದೆ.

ಆದರೆ ದೈವಿಕ ಜ್ಞಾನವು ಪ್ರಾಪ್ತವಾದನಂತರ ಈ ಚಿಂತೆಯೆಲ್ಲವೂ ವಿಲಯ ಹೊಂದುತ್ತದೆ. ಆತ್ಮಭಾವವು ಇಲ್ಲದಂತಾಗುವದರಿಂದ ದೇಹವಿಷಯಕವಾದ ಯಾವತ್ತು ಶಂಕೆಗಳೂ ಚಿಂತೆಗಳೂ ನಾಶವಾಗುತ್ತವೆ. ಮತ್ತು ಯಾವತ್ತು ವಸ್ತುಜಾತಿಗಳ ಯಥಾರ್ಥ ಜ್ಞಾನವಾಗುವದರಿಂದ ಅವು ಸುಖಕರವಾಗಲಿ, ದುಃಖಕಾರಕವಾಗಲಿ, ಬೇರೊಂದು ವಿಧದಿಂದಾಗಲಿ ಭಾಸಮಾನವಾಗದೆ ಇದ್ದಕ್ಕಿದ್ದ ಹಾಗೆಯೇ ಗೋಚರವಾಗುತ್ತವೆ.

ಅಹಂಭಾವಯುಕ್ತನಾದ ಮನುಷ್ಯನು ವಾಸನೆಗಳ ದಾಸನಾಗುತ್ತಾನೆ. ಆದರೆ ದೈವಿಕಜ್ಞಾನ ಸಂಪನ್ನನಾದ ಮನುಷ್ಯನು ಅವುಗಳ ಒಡೆಯನಾಗುತ್ತಾನೆ. ಮೊದಲಿನ ಮನುಷ್ಯನು ತನಗೆ ಸುಖಾವಹವಾದ ಇಲ್ಲದೆ ದುಃಖಾವಹವಾದ ವಿಷಯಗಳನ್ನೇ ವಿಚಾರ ಮಾಡುತ್ತಾನೆ. ಆದರೆ ಎರಡನೆಯವನು ಸುಖದುಃಖಗಳನ್ನು ಲೆಕ್ಕಿಸದೆ ಕೇವಲ ಸತ್ಯಮಾರ್ಗದಿಂದಲೇ ವರ್ತಿಸುತ್ತಿರುತ್ತಾನೆ.

ಯಾವತ್ತು ಮನುಷ್ಯರು ಆತ್ಮಭಾವದೊಳಗಿಂದ ಮುಕ್ತರಾಗಿ ದೈವಿಕಜ್ಞಾನ ಸಂಪನ್ನರಾಗಹತ್ತಿದ್ದಾರೆ. ಆತ್ಮಭಾವನೆಯ ದಾಸ್ಯ ಹಾಗು ಅದರ ಸಾಹಚರ್ಯದಲ್ಲಿರುವ ಪಾಪವೃತ್ತಿ ಮತ್ತು ಲಜ್ಜಾಸ್ಪದವಾದ ಸ್ಥಿತಿ ಇವುಗಳಿಂದ ಬಿಡುಗಡೆ ಹೊಂದಿ ತೇಜಸ್ವಿಯಾದ ಸತ್ಯಮಾರ್ಗವನ್ನು ಆಶ್ರಯಿಸಬೇಕೆಂಬ ಇಚ್ಛೆಯು ಮನುಷ್ಯಮಾತ್ರರಲ್ಲಿ ಅಂಕುರಿಸಹತ್ತಿದೆ. ಮಹಾತ್ಮರೂ ಅವತಾರಿಗಳೂ ಆದ ಪುರುಷರಿಗೆ ಈ ಸಂಗತಿಯು ಸಾಧ್ಯವಾಗಿದೆ. ಆತ್ಮಭಾವದ ಜಾಲದಲ್ಲಿ ಸಿಕ್ಕಿಕೊಂಡದ್ದರಿಂದ ಅನೇಕ ತರದ ಜನ್ಮಗಳನ್ನು ಅವರು ತಾಳಬೇಕಾಯಿತು. ಆದರೆ ಆತ್ಮಭಾವವನ್ನು ಪರಿತ್ಯಜಿಸಿದ ಕೂಡಲೇ ಅವರಿಗೆ ದೈವಿಕಜ್ಞಾನವು ಪ್ರಾಪ್ತವಾಯಿತು. "ಬಹೂನಾಂ ಜನ್ಮನಾಂ ಅಂತೇ ಜ್ಞಾನವಾನ್ಮಾಂ ಪ್ರಪದ್ಯತೇ" ಎಂಬ ವಚನವಾದರೂ ಇದನ್ನೇ ಹೇಳುವದಲ್ಲವೇ ? ಅವರು ಈ ಮೃತ್ಯುಭೂಮಿಯಲ್ಲಿ ಹೊಂದತಕ್ಕ ಉತ್ಕ್ರಾಂತಿಯು ಪರಿಪೂರ್ಣವಾಗಿದ್ದು ಇನ್ನು ಮುಂದೆ ಪುನಃ ಆತ್ಮಭಾವಯುಕ್ತವಾದ ದೇಹವನ್ನು ಧಾರಣಮಾಡುವದು ಅವರ ಪಾಲಿಗೆ ಬರುವದಿಲ್ಲ. ಅವರು ಜೀವನ್ಮುಕ್ತರಾಗಿದ್ದಾರೆ. ಅವರು ಆತ್ಮಜಯವನ್ನು ಮಾಡಿದ್ದರಿಂದ ಅವರಿಗೆ ಪೂರ್ಣಜ್ಞಾನವು ಅಂದರೆ ಬ್ರಹ್ಮಜ್ಞಾನವು ಪ್ರಾಪ್ತವಾಗಿದೆ. ಇಂತಹ ಜ್ಞಾನವಂತ ಮನುಷ್ಯನನ್ನು ಜನರು ದೇವರಂತೆ ಭಜನೆ ಮಾಡುತ್ತಾರೆ. ಯಾಕಂದರೆ ಇತರೇತರ ಆತ್ಮಭಾವಯುಕ್ತರಾದ ಜನರಿಗಿಂತಲೂ ಅವನಲ್ಲಿ ವಿಶೇಷ ತರದ ಜ್ಞಾನವೂ ಕಂಡುಬರುತ್ತದೆ. ಆದರೂ ಆ ವ್ಯಕ್ತಿಯಲ್ಲಿ ಯಾವದೊಂದು ಗೂಢಸಾಮರ್ಥ್ಯವಿರುವದೆಂಬಂತೇನೂ ಇಲ್ಲ. ಆತ್ಮಭಾವದ ಗೊಂದಲವು ಇಲ್ಲದ್ದರಿಂದ ಅವನ ವರ್ತನದ ಸ್ಪಷ್ಟಾರ್ಥವೂ ಸಾರ್ಥಕತೆಯೂ ಕಂಡುಬರುತ್ತದೆ; ಆತನ ಆಚರಣದೊಳಗಿನ ರಹಸ್ಯವು ವ್ಯಕ್ತಗೊಳಿಸಲ್ಪಡುತ್ತದೆ.

ಇಂತಹ ಮಹಾತ್ಮರಲ್ಲಿದ್ದ ಅಖಂಡವಾದ ಸೌಜನ್ಯ, ಅದ್ವಿತೀಯವಾದ ಜ್ಞಾನ, ಹಾಗು ಪೂರ್ಣ ಶಾಂತಿ ಇವು ಆತ್ಮಭಾವಯುಕ್ತರಾದ ಜನರ ದೃಷ್ಟಿಯಿಂದ ಲೋಕೋ

ತ್ತರವಾಗಿ ಕಂಡುಬರುತ್ತವೆ. ಆದರೆ ಯಾವನ ಅಹಂಕಾರವು ನಾಶವಾಗಹತ್ತಿ ದೈವಿಕ ಜ್ಞಾನವು ಪ್ರಾಪ್ತವಾಗಹತ್ತಿದೆಯೋ ಅಂತಹನಲ್ಲಿ ಇದೇ ಸಾತ್ವಿಕಭಾವವು ಸಾಹಜಿಕ ವಾಗಿಯೇ ಪ್ರಾದುರ್ಭೂತವಾಗುತ್ತದೆ. ಇಂತಹ ದೈವೀಜ್ಞಾನದ ಪ್ರಾಪ್ತಿಗಾಗಿ ಆತ್ಮಭಾವಯುಕ್ತನಾದ ಮನುಷ್ಯನು ಪೂರ್ಣವಾಗಿ ಸದ್ವರ್ತನದ ಆಚರಣೆಯನ್ನಿಡಲಿಕ್ಕೆ ಬೇಕು.

ಮನುಷ್ಯನನ್ನು ಅಧೀನದಲ್ಲಿಟ್ಟುಕೊಳ್ಳಲು ಯತ್ನಿಸುವ ಮನೋವಿಕಾರಗಳನ್ನು ದಮನಪಡಿಸುವ ಹಾಗೆ ದೈವಿಕ ಜ್ಞಾನವೂ; ದೈವಿಕ ನಮ್ರತೆಯೂ, ದೈವಿಕ ಸಾಮರ್ಥ್ಯವೂ ಪ್ರಾಪ್ತವಾಗುತ್ತವೆ. ಯಾವನು ಆತ್ಮಜಯವನ್ನು ಸಂಪಾದಿಸುವನೋ ಅವನೇ ದೈವಿಕ ಸಾಮರ್ಥ್ಯವುಳ್ಳವನಾಗುವನು. ಆತ್ಮಜ್ಞಾನಿಯಾದ ಅಥವಾ ಬ್ರಹ್ಮಜ್ಞಾನಿಯಾದ ಮನುಷ್ಯನಲ್ಲಿ ಕಂಡುಬರುವ ಉದಾರ ಪ್ರವೃತ್ತಿಯೂ ಪರೋಪಕಾರದ ಸ್ವಭಾವವೂ, ಅವ್ಯಭಿಚಾರಿಯಾದ ಸದ್ವರ್ತನವೂ ಇವೇ ಮೊದಲಾದವುಗಳು ಆತ್ಮಜಯದ ಫಲಗಳಾಗಿರುವವು. ಆತ್ಮಭಾವವುಳ್ಳ ಮನುಷ್ಯನು ಅಂಥ ಪ್ರವೃತ್ತಿಯಿಂದ ಯಾವ ಮನೋವಿಕಾರಗಳಿಗೆ ದಾಸನಾಗಿ ಸ್ವತಃ ಧನ್ಯನೆಂದು ತಿಳಿದುಕೊಳ್ಳುವನೋ, ಅವೇ ಮನೋವಿಕಾರಗಳನ್ನು ಕೈಯಲ್ಲಿಟ್ಟುಕೊಂಡು ನಿಯಮನಪಡಿಸುವದರಿಂದ ಆತ್ಮಜ್ಞಾನವು ಪ್ರಾಪ್ತವಾಗುತ್ತದೆ. " ಚಣೇ ಖಾವೇ ಲೋಖಂಡಾಂಚೇ ಮಗ ಬ್ರಹ್ಮಪದೀ ನಾಚೇ " ಅಹಂಕಾರಯುಕ್ತನಾದ ಮನುಷ್ಯನೂ, ದಾಸ್ಯದಲ್ಲಿ ಬಿದ್ದಾಡುವ ಮನುಷ್ಯನೂ ಸಮಾನರು. ಅವನು ತನ್ನ ವಾಸನೆಗಳಿಗೆ ದಾಸನಾಗಿರುತ್ತಾನೆ. ಷಡ್ರಿಪುಗಳು ಆತನ ಮೇಲೆ ತಮ್ಮ ಅಧಿಕಾರವನ್ನು ನಡೆಸುತ್ತವೆ. ಅವನು ಷಡ್ರಿಪುಗಳನ್ನು ಅಪ್ಪಿಕೊಂಡಿರುವದರಿಂದ ಅವುಗಳಿಂದೊದಗುವ ದುಃಖಗಳನ್ನೂ ಅನುಭವಿಸಬೇಕಾಗುತ್ತದೆ. ನಾನು ಪಾಪದಲ್ಲಿ ಮಗ್ನನಾಗಿರುವದರಿಂದ ವಿಪತ್ತಿಗಳು ಪ್ರಾಪ್ತವಾಗುತ್ತವೆಂಬದು ಆತನಿಗೆ ತಿಳಿಯುತ್ತಿರುತ್ತದೆ. ಆದರೆ ಅದರೊಳಗಿಂದ ಪಾರಾಗುವ ಮಾರ್ಗವು ಅವನಿಗೆ ಗೋಚರನಾಗುವದಿಲ್ಲ. ಆದುದರಿಂದ ಆತನು ತಾತ್ಕಾಲಿಕವಾದ ವೇದಾಂತದಿಂದ ತನ್ನ ಮನಸ್ಸಿನ ಸಮಾಧಾನ ಮಾಡಿಕೊಂಡು ಮುಂದಿನ ಆಶೆಯನ್ನು ಮನಸ್ಸಿನಲ್ಲಿ ಹಿಡಿದು ಸುಮ್ಮನಿರುತ್ತಾನೆ. ಆದರೆ ಈ ಪ್ರಕಾರದ ಆಚರಣೆಯಿಂದ ಆತನಿಗೆ ನಿಜವಾಗಿ ಸಮಾಧಾನವಾಗಲಿ, ದುಷ್ಕರ್ಮನಿವೃತ್ತಿಯಾಗಲಿ ಆಗದೆ ಉತ್ತರೋತ್ತರವಾಗಿ ಅಧಿಕ ದುಃಖಗಳನ್ನು ಉಪಭೋಗಿಸಬೇಕಾಗುತ್ತದೆ.

ಆದರೆ ಆತ್ಮಜ್ಞಾನಿಯಾದ ಮನುಷ್ಯನು ಸಕಲ ಸೃಷ್ಟಿಗೂ ಒಡೆಯನಾಗಿರುತ್ತಾನೆ. ಆತನು ಸತ್ಯದ ದಾಸನು; ಆದರೆ ಅಹಂಕಾರದ ದಾಸನಲ್ಲ. ಅವನು ತನ್ನ ವಾಸನೆಗಳನ್ನು ದಮನಪಡಿಸಿ ಅವುಗಳನ್ನು ಯುಕ್ತಮಾರ್ಗದಲ್ಲಿ ಹೋಗಗೊಡುತ್ತಾನೆ, ಆದುದರಿಂದಲೇ ದುಃಖ ಶೋಕಾದಿಗಳಿಂದ ಮುಕ್ತನಾಗುತ್ತಾನೆ. ಮತ್ತು ಈ ದುಃಖಾದಿಗಳಿಂದ ಮುಕ್ತನಾಗುವದಕ್ಕೆ ಆತ್ಮಜಯವೇ ಮುಖ್ಯಸಾಧನವೆಂದು ಅವನಿಗೆ ಮನವರಿಕೆ

ಯಾಗುತ್ತದೆ. ಆತನ ಪ್ರಯತ್ನಕ್ಕೆ ತತ್ವಜ್ಞಾನದ ಸಹಾಯವು ಅವಶ್ಯ ಬೀಳುವದಿಲ್ಲ. ಆತನು ಸನ್ಮಾರ್ಗಾಚರಣದಲ್ಲಿ ಅವಿರತವಾಗಿ ರಮಮಾಣನಾಗುತ್ತಾನೆ. ತನ್ನ ಪ್ರಯತ್ನಕ್ಕೆ ಯಶಸ್ಸು ಪ್ರಾಪ್ತನಾಗಹತ್ತಿದೆಯೆಂಬುದನ್ನು ತಿಳಿದು ಆತನಿಗೆ ಆನಂದವಾಗುತ್ತದೆ, ಮತ್ತು ಹೆಚ್ಚು ಪವಿತ್ರನೂ, ಹೆಚ್ಚು ಸಾಮರ್ಥ್ಯವಂತನೂ ಆಗುತ್ತಾನೆ. ಸಂಪೂರ್ಣ ಆತ್ಮಜಯವು ಆತನಿಗೆ ಯಾವಾಗ ಸಾಧ್ಯವಾಗುವದೋ, ಆಗ ಸತ್ಯಮಾರ್ಗವನ್ನು ಅನುಸರಿಸಿದ ಇಚ್ಛೆಗಳು ಮಾತ್ರ ಅವನಲ್ಲಿ ಇರುತ್ತವೆ. ಬ್ರಹ್ಮಚಿಂತನೆಯ ಹೊರತು ಅನ್ಯ ವಿಷಯವನ್ನು ಅವನು ಆಲೋಚಿಸುವದಿಲ್ಲ. ಆಗ ಅವನು ತನ್ನ ಕರ್ಮಗಳ ಸ್ವಾಮಿಯಾಗುವದರಿಂದ ಯಾವ ಸಂಬಂಧದ ದುಃಖವೂ ಅವನಿಗಾಗುವದಿಲ್ಲ.

ಅಂತರಂಗದಲ್ಲಿ ಕ್ಷುಬ್ಧತೆಯನ್ನುಂಟುಮಾಡುವ ದುರ್ಜೇಯವಾದ ಅಹಂಕಾರವು ನಷ್ಟವಾಯಿತೆಂದರೆ, ಮನುಷ್ಯನು ಶಾಂತನೂ, ಸುಖಿಯೂ, ಜ್ಞಾನಿಯೂ, ಆನಂದವುಳ್ಳವನೂ ಆಗುವನು. ಆ ಮೇಲೆ ಅವನಿಗೆ ದುಃಖ ಶೋಕಗಳ ಬಾಧೆಯಾಗುವದಿಲ್ಲ. ಮಾನವ ಸುಲಭವಾದ ದುಃಖಗಳೂ, ವಿಪತ್ತುಗಳೂ ಆತನನ್ನು ಪೀಡಿಸಲು ಸಮರ್ಥವಾಗಲಾರವು ಮತ್ತು ಯಾವ ದುಃಖಕಾರಕ ವಿಷಯವೂ ಆತನನ್ನು ಮುಟ್ಟಲಾರದು. ದುಃಖ ಶೋಕಗಳಿಂದ ಆತನು ನಿರ್ಲಿಪ್ತನಾಗಿಯೇ ಇರುತ್ತಾನೆ. ದೈವಿಕ ಗುಣಗಳ ಬೆಂಬಲವು ಆತನಿಗೆ ಪ್ರಾಪ್ತವಾಗಿರುವದರಿಂದ ಯಾವ ಶತ್ರುವೂ ಆತನನ್ನು ನಾಶ ಮಾಡಲಾರನು. ಅಥವಾ ಯಾವ ಶತ್ರುವೂ ಆತನನ್ನು ಪೀಡಿಸಲಾರನು. ಸತ್ವಶೀಲನೂ ಶಾಂತನೂ ಆಗಿರುವದರಿಂದ ಯಾವದೇ ವ್ಯಕ್ತಿಯಾಗಲಿ ಶಕ್ತಿಯಾಗಲಿ ಆತನ ಶಾಂತಿಯನ್ನು ಹರಣ ಮಾಡಲಾರದು.

ಮನುಷ್ಯನಿಗೆ ತನ್ನ ಹೊರತು ಅನ್ಯರಾರೂ ಶತ್ರುಗಳಿಲ್ಲ. "ಆತ್ಮೈವ ರಿಪು-ರಾತ್ಮನಃ" ಅಜ್ಞಾನದಿಂದ ಭಿನ್ನವಾದ ತಿಮಿರವು—ಅಂಧಃಕಾರವು ಇಲ್ಲವೇ ಇಲ್ಲ; ಮತ್ತು ನಮ್ಮ ದೇಹಸೌಲಭ್ಯವಾದ ಉಚ್ಛೃಂಖಲ ಪ್ರವೃತ್ತಿಯಿಂದ ಉತ್ಪನ್ನವಾಗುವ ದುಃಖದ ಹೊರತು ಅನ್ಯ ದುಃಖವೇ ಇಲ್ಲ.

ನಾನು ಮತ್ತು ಎರಡನೆಯವನು ಎಂಬ ಭೇದವು ಯಾವನಲ್ಲಿ ಉಂಟೋ, ಯಾವನ ಇಚ್ಛೆ ಹಾಗು ಉದ್ವೇಗ ಇವು ನಷ್ಟವಾಗಿಲ್ಲವೋ, ಯಾವನ ವಾಸನೆ ಹಾಗು ನೈರಾಶ್ಯಗಳು ಲುಪ್ತವಾಗಿಲ್ಲವೋ, ಮತ್ತು ಯಾವನ ದುಃಖ ಹಾಗು ಶೋಕಗಳು ನಾಶ ಹೊಂದಿಲ್ಲವೋ ಅವನು ಪೂರ್ಣಜ್ಞಾನಿಯಾಗಿಲ್ಲವೆಂದು ತಿಳಿಯಬೇಕು. ಈ ಎಲ್ಲ ಅವಸ್ಥೆಗಳು ಆತ್ಮಭಾವದಲ್ಲಿ ಲೀನವಾದವರಿಗೆ ಸಂಬಂಧಿಸುತ್ತವೆ. ಇವುಗಳಿಂದ ಮನುಷ್ಯನ ಅಜ್ಞಾನವೂ, ವಿಕಾರಬದ್ಧತೆಯೂ, ದೌರ್ಬಲ್ಯವೂ, ಮೂರ್ಖತನವೂ ಕಂಡುಬರುತ್ತದೆ.

ಯಾವನು ಈ ಸಂಸಾರದಲ್ಲಿದ್ದು ತನ್ನ ಮನಸ್ಸನ್ನು ಯಾವಾಗಲೂ ಶಾಂತವಾಗಿಯೂ ಕೋಮಲವಾಗಿಯೂ ಇಟ್ಟುಕೊಳ್ಳುವನೋ, ಮತ್ತು ಯಾವಾಗಲೂ

ಧೈರ್ಯದಿಂದ ವರ್ತಿಸುವನೋ ಅವನೇ ನಿಜವಾದ ಜ್ಞಾನವಂತನು. ಅಂತಹ ಜ್ಞಾನಿಯು ಯಾವ ಇಚ್ಛೆಯನ್ನೂ ಮಾಡುವದಿಲ್ಲ. ಮತ್ತು ಯಾವ ತರದ ದುಃಖವೂ ಅವನಿಗಾಗುವದಿಲ್ಲ. ಅವನಲ್ಲಿ ಯಾವ ತರದ ಆಶೆಯೂ ಇರುವದಿಲ್ಲ; ಮತ್ತು ಅವನು ನಿರಾಶೆಯುಳ್ಳವನಾಗಿಯೂ ಇರುವದಿಲ್ಲ. ಪರಮೇಶ್ವರನು ಉತ್ಪನ್ನ ಮಾಡಿದ ಈ ಜಗತ್ತಿನಲ್ಲಿ ಅವನಿಗೆ ರೋಷವೇ ಕಂಡುಬರುವದಿಲ್ಲ. ಇವೆಲ್ಲವುಗಳೂ ಆತ್ಮಜ್ಞಾನವುಳ್ಳ ಮನುಷ್ಯನ ಲಕ್ಷಣಗಳು. ಇವೆಲ್ಲವುಗಳೂ ಬ್ರಹ್ಮಜ್ಞಾನಿಯ ಸಾತ್ವಿಕ ಭಾವಗಳು. ಇವುಗಳಿಂದಲೇ ಅವನಿಗೆ ಜ್ಞಾನವೂ, ಸಾಮರ್ಥ್ಯವೂ, ಪ್ರಭುತ್ವವೂ ಪ್ರಾಪ್ತವಾಗಿರುತ್ತದೆಂದು ತಿಳಿಯಬೇಕು. "ಯೋನಕಾಂಕ್ಷನಿ ನ ದ್ವೇಷ್ಟಿಂ ಬ್ರಹ್ಮ ಸಂಪದ್ಯತೇ ತದಾ", "ನಿರಾಶ್ರೀರ್ಯತ ಚಿತ್ತಾತ್ಮ" ಇವೇ ಮೊದಲಾದ ವಚನಗಳ ತಾತ್ಪರ್ಯವಾದರೂ ಇದೇ.

ಯಾವನ ವಿತ್ತಾಪೇಕ್ಷೆ ಸುಖಾಪೇಕ್ಷೆ, ಮೊದಲಾದ ಅಪೇಕ್ಷೆಗಳು ನಾಶವಾಗಿರುತ್ತವೆಯೋ, ಯಾವನು ಇದ್ದದ್ದರಲ್ಲಿಯೇ ಸಂತೋಷ ಹೊಂದಿ, ಅದು ನಾಶವಾದರೂ ಕೂಡ ಶೋಕ ಮಾಡದೆ ಇರುವನೋ ಅವನಿಗೆ ಜ್ಞಾನಿಯೆನ್ನಬಹುದು, ಯಾವನ ಇಚ್ಛೆಗಳು ಅನಿವಾರವಾಗಿರುವವೋ ಯಾವನು ಇದ್ದದರಲ್ಲಿ ಸಂತೋಷ ಪಡೆದು ಇಲ್ಲದ್ದಕ್ಕಾಗಿ ಆಶಿಸುವನೋ ಅವನೇ ಮೂರ್ಖನು; ಅವನೇ ಅಜ್ಞಾನಿಯು.

ಮನುಷ್ಯನು ವಿಜಯಿಯಾಗಲಿಕ್ಕೆ ಬೇಕಾಗುವಷ್ಟು ಸಿದ್ಧತೆಯು ನೈಸರ್ಗಿಕವಾಗಿಯೇ ಮಾಡಲ್ಪಟ್ಟಿದೆ. ಆದರೆ ಆತನು ಭೂಪ್ರದೇಶವನ್ನು ಸಂಪಾದಿಸಿದರೆ ಅದರಿಂದ ಸೃಷ್ಟಿಕರ್ತನ ಹೇತುವು ಸಫಲವಾದಂತಾಯಿತೆಂದು ಮಾತ್ರ ಭಾವಿಸಬಾರದು. ಆತನು ಆತ್ಮಜಯವನ್ನು ಸಂಪಾದಿಸಲಿಕ್ಕೆ ಬೇಕು. ಭೂಪ್ರದೇಶವನ್ನು ಗೆದ್ದ ಮನುಷ್ಯನು ಆ ಪ್ರದೇಶದ ಐಹಿಕ ರಾಜನಾಗುವನು. ಆದರೆ ಆತ್ಮಜಯದಿಂದ ಅವನೇ ಪಾರಲೌಕಿಕ ರಾಜನಾಗುವನು.

ಮನುಷ್ಯನು ಪ್ರಭುವಾಗುವಂತೆ ಆತನ ಯೋಗ್ಯತೆಯಿದೆ. ಅಂದರೆ ಆವನು ಅನ್ಯಪ್ರಾಣಿಗಳ ಮೇಲೆ ಬಲಾತ್ಕಾರ ನಡೆಸಿ ಅವುಗಳ ಮೇಲೆ ತನ್ನ ಅಧಿಕಾರ ಕೂಡಿಸಬೇಕೆಂಬದು ಈಶ್ವರೀ ಯೋಜನೆಯಾಗಿರದೆ, ಆತನು ಆತ್ಮಜಯವನ್ನು ಸಂಪಾದಿಸಿಕೊಂಡು ತನ್ನ ದೇಹಧರ್ಮದ ಪ್ರಭುವಾಗಬೇಕೆಂಬದು ಪರಮೇಶ್ವರನ ಸಂಕೇತವಾಗಿದೆ. ಬಲಾತ್ಕಾರದಿಂದ ಇತರರ ಮೇಲೆ ತನ್ನ ಅಧಿಕಾರವನ್ನು ಪ್ರಸ್ಥಾಪಿಸುವದೆಂದರೆ ಅಹಂಕಾರದ ಪರಮಾವಧಿಯೆಂದು ಹೇಳಬಹುದು. ಆದರೆ ಆತ್ಮಸಂಯಮನದಿಂದ ಆತ್ಮಜಯವನ್ನು ಸಂಪಾದಿಸುವದೆಂದರೆ ನಮ್ರತೆಯ ಪರಮಾವಧಿಯೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಯಾವನು ವಿಶ್ವದ ಕಲ್ಯಾಣಕ್ಕೋಸುಗವೂ, ಸತ್ಯದ ಉತ್ಕರ್ಷಕ್ಕಾಗಿಯೂ ಸ್ವಾರ್ಥವನ್ನು ಬದಿಗೊತ್ತಿದನೋ ಆ ಪುರುಷೋತ್ತಮನೇ ಮನುಷ್ಯಪ್ರಭುವೆನಿಸಿಕೊಳ್ಳುವನು. ಆತನಿಗೇ ನಾಶರಹಿತವಾದ ಯಾವತ್ತು ವಿಷಯಗಳೂ, ಯಾವತ್ತು ಸಿದ್ಧಿಗಳೂ ಪ್ರಾಪ್ತವಾಗಿವೆಯೆಂದು ತಿಳಿಯಬೇಕು. ಆತನಿಗೆ ಪೂರ್ಣಪುರುಷನೆಂಬ ನಾಮಾಭಿಧಾನ

ಮಾತ್ರವಲ್ಲದೆ ದೈವಿಕ ಜ್ಞಾನವೂ ಪ್ರಾಪ್ತನಾಗುವದು. ಅವನು ನರನಿದ್ದ ನಾರಾಯಣ ನಾಗುವನು. ಅವನ ಕಿಲ್ಮಿಷವು ಇಲ್ಲದಂತಾಗಿ ಆಯುಷ್ಯದೊಳಗಿನ ದುಃಖಗಳಿಂದ ಆತನು ಪೂರ್ಣವಾಗಿ ಮುಕ್ತನಾಗುವನು. ಅವನು ಸಕಲಾವಸ್ಥೆಗಳಿಂದಲೂ ಅತೀತ ನಾಗುವನು. ಆತನ ದುಃಖ, ಶೋಕ, ಚಿಂತೆ, ಪರಿತಾಪಗಳೆಲ್ಲವೂ ವಿಲಯಹೊಂದಿ ಆತನು ಶುದ್ಧನೂ, ಆನಂದವುಳ್ಳವನೂ, ಅಜರಾಮರನೂ ಆಗುವನು; ಸಚ್ಚಿದಾನಂದ ಸ್ವರೂಪವನ್ನು ಹೊಂದುವನು. ಅವನಿಗೆ ಜರಾಮರಣದ ದುಃಖವೂ, ಶೋಕದ ಭಯವೂ ಇಲ್ಲವೇ ಇಲ್ಲ. ಜಗತ್ತಿನೊಳಗಿನ ಉತ್ಕ್ರಾಂತಿಗಳಿಂದ ಅಲಿಪ್ತನಾಗಿದ್ದು ಅವುಗಳನ್ನು ಆನಂದಯುಕ್ತನಾದ ಹಾಗು ಶಾಂತವಾದ ಮನಸ್ಸಿನಿಂದ ನಿರೀಕ್ಷಣ ಮಾಡುವನು. ಆದುದರಿಂದ ಆತನಿಗೆ ಮುಕ್ತಿಯು ದೊರಕುವದು. ಜನನ ಮರಣಗಳು ಆತನಿಂದ ದೂರಾಗುವವು; ಅವನು ಅವುಗಳ ಸ್ವಾಮಿಯಾಗುವನು.

೦

# ೧೦. ಜ್ಞಾನ ಮತ್ತು ವಿಜಯ

ಭಕ್ತಿಯು ಶ್ರೇಯಃಸಾಧನದ— ವಿಜಯಶಾಲಿಯಾದ ಜೀವಿತದ— ಪ್ರಥಮ ಸೋಪಾನವಾಗಿದ್ದು ಜ್ಞಾನಸಂಪನ್ನತೆಯೇ ಅದರ ಪೂರ್ಣಾವಸ್ಥೆಯಾಗಿದೆ. ಶ್ರದ್ಧೆಯಿಂದ ಮಾರ್ಗವು ಗೋಚರವಾಗುತ್ತದೆ; ಆದರೆ ಜ್ಞಾನವು ಅದರ ಇಷ್ಟಾಪೂರ್ತಿಯೆಂದು ತಿಳಿಯಬೇಕು. ಶ್ರದ್ಧೆಯ ಮಾರ್ಗದಲ್ಲಿ ಅಪಾರವಾದ ಕಷ್ಟಗಳನ್ನನುಭವಿಸಬೇಕಾಗುತ್ತದೆ. ಜ್ಞಾನದಿಂದ ಪ್ರೇಮಭಾವವು ಉತ್ಪನ್ನವಾಗುತ್ತದೆ. ಶ್ರದ್ಧೆಯು ಅಂಧಪ್ರವೃತ್ತಿಯಾದರೂ ವಿಶ್ವಾಸಯುಕ್ತವಾದ ಸ್ಥಿತಿಯು. ಜ್ಞಾನವು ಸಂಪೂರ್ಣ ಜಾಗರೂಕತೆಯಿಂದ ಕೆಲಸ ಮಾಡುವಂಥಾದ್ದು. ಶ್ರದ್ಧೆಯಿಂದ ಮನುಷ್ಯನು ಕರ್ಮಗಳನ್ನು ಮಾಡಹತ್ತುತ್ತಾನೆ. ಜ್ಞಾನದಿಂದ ಕರ್ಮಗಳ ಫಲಪ್ರಾಪ್ತಿಯಾಗುತ್ತದೆ. ಇಷ್ಟಾಪೂರ್ತಿಯಾಗುವದಕ್ಕಾಗಿ ಶ್ರದ್ಧೆಯು ಅವಶ್ಯವಾಗಿ ಬೇಕು. ಸಾಧ್ಯವಿಷಯಗಳ ಸಾರವೇ ಜ್ಞಾನಪ್ರಾಪ್ತಿಯು. ಶ್ರದ್ಧೆಯು ಈ ಭೂತಳದ ಮೇಲಿನ ಮನುಷ್ಯನೆಂಬ ಪ್ರವಾಸಿಯ ಆಧಾರಯಷ್ಟಿಯೆಂತಲೂ, ಜ್ಞಾನವು ಆತನು ಕೊನೆಗೆ ಮುಟ್ಟಬೇಕಾದ ಸ್ಥಳವೆಂತಲೂ ತಿಳಿಯಬೇಕು. ಶ್ರದ್ಧೆಯ ಹೊರತು ಜ್ಞಾನಪ್ರಾಪ್ತಿಯಾಗುವಂತಿಲ್ಲ. ಜ್ಞಾನಪ್ರಾಪ್ತಿಯಾಯಿತೆಂದರೆ ಅದರ ಕೆಲಸವು ತೀರಿದಂತಾಯಿತು.

ಶ್ರೇಯಃಸಾಧನ ಮಾಡುವದು ಇಲ್ಲವೆ ವಿಜಯಶಾಲಿಯಾದ ಜೀವಿತವುಳ್ಳವನಾಗುವದೆಂದರೆ, ಜ್ಞಾನಸಂಪನ್ನನಾಗುವದು. ಅಜ್ಞಾನವೆಂದರೆ ಪುಸ್ತಕೀ ವಿದ್ಯೆಯಾಗಲಿ ನಿಷ್ಪ್ರಯೋಜಕ ವಿಷಯಗಳ ಪಾಠಾಂತರವಾಗಲಿ ಅಲ್ಲ; ಜೀವಿತದ ರಹಸ್ಯದ ತಿಳವಳಿಕೆಯು ಜ್ಞಾನದ ಹೊರತು ಮನುಷ್ಯನಿಗೆ ವಿಜಯಪ್ರಾಪ್ತಿಯಾಗುವದಿಲ್ಲ, ಸ್ಥೈರ್ಯವು ಉಂಟಾಗುವದಿಲ್ಲ. ಶಾಂತಿಯು ದೊರೆಯುವದಿಲ್ಲ. ಅಜ್ಞಾನಿಗೂ ಮೂರ್ಖನಿಗೂ ಜ್ಞಾನದ ಹೊರತು ಗತಿಯೇ ಇಲ್ಲ. ಪಾಪಿಷ್ಠನಿಗೆ ಶುದ್ಧತೆಯ ಹೊರತು ಮುಕ್ತಿಯು ದೊರೆಯಲಾರದು. ಶುದ್ಧವಾದ ಹಾಗು ಪವಿತ್ರವಾದ ಆಚರಣೆಯಿದ್ದ ಹೊರತು ಪರಮಾರ್ಥ ಜ್ಞಾನವಾಗುವದಿಲ್ಲ; ಮತ್ತು ಪರಮಾರ್ಥಜ್ಞಾನವು ಪ್ರಾಪ್ತವಾದ ಹೊರತು ಸಂಸಾರಾರ್ಣವ ದುಃಖದೊಳಗಿನ ಬಿಡುಗಡೆಯಾಗುವದಿಲ್ಲ. ಚಿತ್ತಶುದ್ಧಿಯಾದ ಹೊರತು ಶಾಶ್ವತವಾದ ಶಾಂತಿಯು ದೊರೆಯುವದಿಲ್ಲ. ಚಿತ್ತಶುದ್ಧಿ ಹಾಗು ಶುದ್ಧಾಚರಣೆಗಳು ಒಂದೇ ಆಗಿವೆ.

ಆದರೆ ಅಜ್ಞಾನಿಯೂ ಕೂಡ ಜ್ಞಾನಪ್ರಾಪ್ತಿಯನ್ನು ಮಾಡಿಕೊಂಡು ಮುಕ್ತನಾಗಬಹುದು. ದುರಾಚಾರಿಯಾದ ಮನುಷ್ಯನೂ ಕೂಡ ಪವಿತ್ರಾಚರಣೆಯಿಂದ ನಡೆದು ಶುದ್ಧತೆಯನ್ನು ತಂದುಕೊಳ್ಳಬಹುದು. ಶ್ರೀಮಂತನಿರಲಿ, ದರಿದ್ರನಿರಲಿ, ವಿದ್ವಾಂಸನಿರಲಿ, ಅವಿದ್ವಾಂಸನಿರಲಿ ಎಂತಹನೇ ಇದ್ದರೂ ನಮ್ರತೆಯಿಂದಲೂ ಶುದ್ಧವಾದ ಆಚರಣೆಯಿಂದಲೂ ನಡೆದು ಈ ಭವಸಾಗರವನ್ನು ದಾಟಿ ಹೋಗುವದು ಪ್ರತಿಯೊಬ್ಬನಿಗೂ

ಸಾಧ್ಯವಿದೆ. ಆದರೆ ಆ ತರದ ಇಚ್ಛೆಯನ್ನು ಹಿಡಿದು ತದನುರೂಪವಾಗಿ ಮನೋಭಾವದಿಂದ ವರ್ತಿಸಲಿಕ್ಕೆಬೇಕು. ಬದ್ಧರಾದವರಿಗೆ ಮುಕ್ತಿಯೂ ನಿರುತ್ಸಾಹಿಗಳಿಗೆ ವಿಜಯವೂ ಪ್ರಯತ್ನದಿಂದ ಸಾಧ್ಯವಾಗುವದೆಂಬ ಭಾವನೆಯುಳ್ಳವನಿಗೆ ಸ್ವರ್ಗೀಯ ಆನಂದವಾಗುತ್ತಿದ್ದು, ಸಕಲ ವಿಶ್ವವೂ ಆ ಆನಂದದಲ್ಲಿ ಮುಳುಗಿ ಹೋಗುತ್ತದೆ.

ಜ್ಞಾನವಂತನು ಆತ್ಮಜಯವನ್ನು ಮಾಡಿರುವದರಿಂದ ಅವನು ದುರಾಚರಣೆ, ಆಪತ್ತಿ, ಸಂಸಾರತಾಪತ್ರಯ ಇವುಗಳ ಮೇಲೆಯೂ ವಿಜಯವನ್ನು ಸಂಪಾದಿಸುವನು. ದುಃಖ ಶೋಕಾನ್ವಿತ ಮನಸ್ಥಿತಿಯು ಹೊರಟು ಹೋಗಿ ಶುದ್ಧಿ ಹಾಗು ಶಾಂತಿಯುಕ್ತವಾದ ಶ್ರೇಷ್ಠ ಮನಸ್ಥಿತಿಯ ಲಾಭವು ಅವನಿಗಾಗುತ್ತದೆ. ಆಮೇಲೆ ಪ್ರಾಚೀನವಾದ 'ಪಾಪಮಯ' ಜಗತ್ತಿನೊಳಗಿಂದ ಅಂತರ್ಧಾನವನ್ನು ಹೊಂದಿ ಸುಖಮಯ, ನಿರುಪಾಧಿಕ, ನಿಯಮಬದ್ಧವಾದ ಹಾಗು ಮೃತ್ಯುವಿನ ಭಯವಿಲ್ಲದ ನೂತನವಾದ ಜಗತ್ತಿನಲ್ಲಿ ಪುನರ್ಜನ್ಮವನ್ನು ತಳೆದು ಬಂದವನಂತೆ ಆತನು ಕಾಣಹತ್ತುತ್ತಾನೆ.

ಜ್ಞಾನವಂತನ ಸೃಷ್ಟಿಯಲ್ಲಿ ಚಿಂತೆ, ಶೋಕ, ಪರಿತಾಪ, ನಿರಾಶೆ, ದುಃಖ, ಉದ್ವೇಗ ಇವುಗಳಿಗೆ ಅಸ್ಪದವಿರುವದಿಲ್ಲ. ಅಹಂಕಾರಯುಕ್ತನಾದವನ ಸೃಷ್ಟಿಯಲ್ಲಿ ಈ ಭಾವನೆಗಳ ಛಾಯಾರೂಪವಾದ ಅಸ್ತಿತ್ವವಿರುತ್ತದೆ. ಆದರೆ ಜ್ಞಾನದ ಪ್ರಕಾಶವು ಹರಡಿದ ಕೂಡಲೆ ಛಾಯೆಯು ನಷ್ಟವಾಗುತ್ತದೆ. ಮನುಷ್ಯನ ದುಃಖವು ಆತನ ಅಜ್ಞಾನಾವಸ್ಥೆಯ ಹಾಗು ಅಸಂಸ್ಕೃತ ಮನಸ್ಸಿನ ಫಲವಾಗಿರುತ್ತದೆ. ಪದಾರ್ಥದೊಡನೆ ನೆರಳು ತಿರುಗುವಂತೆ ಅಹಂಭಾವದೊಡನೆ ದುಃಖವು ಯಾವಾಗಲೂ ಇದ್ದೇ ಇರುತ್ತದೆ. ದುರಾಚಾರ ಪ್ರವೃತ್ತಿಯಲ್ಲಿಯೂ ದುಃಖದ ಅಸ್ತಿತ್ವವು ಇದ್ದೇ ಇದೆ. ಸ್ವಾರ್ಥಪ್ರವೃತ್ತಿಯಲ್ಲಿ ಶಾಂತಿ ಇಲ್ಲ; ಜ್ಞಾನಪ್ರಕಾಶವಿಲ್ಲ. ಇದರಂತೆಯೇ ತ್ರಾಸದಾಯಕವಾದ ಷಡ್ರಿಪುಗಳೂ, ಅಹರ್ನಿಶವಾಗಿ ಮನುಷ್ಯನನ್ನು ದಗ್ಧಗೊಳಿಸುತ್ತಿರುವ ವಾಸನೆಗಳೂ ಎಲ್ಲಿ ಪ್ರಬಲವಾಗಿರುವವೋ ಅಲ್ಲಿ ಜ್ಞಾನ ಹಾಗು ಶಾಂತಿಯ ವಾಯುವು ಬೀಸುವ ಸಂಭವವೇ ಇಲ್ಲ.

ನಿರ್ಭಯತೆ ಮತ್ತು ನಿಷ್ಠೆ, ಸುಖ ಮತ್ತು ಚಿತ್ತಸ್ವಾಸ್ಥ್ಯ, ಸಮಾಧಾನ ಮತ್ತು ಸಂತೋಷ, ಆನಂದ ಮತ್ತು ಶಾಂತಿ ಇವೆಲ್ಲವುಗಳು ಜ್ಞಾನವಂತನ ಅವಿನಾಶಿಯಾದ ಸಂಪತ್ತಿಯಾಗಿದ್ದು, ಶಮದಮಾದಿ ಸಾಧನಸಾಮಗ್ರಿಯಿಂದಲೂ, ಸದಾಚರಣ ಹಾಗು ಪವಿತ್ರ ವರ್ತನದ ವಿನಿಮಯದಿಂದಲೂ ಅದನ್ನು ಪ್ರಾಪ್ತಮಾಡಿಕೊಳ್ಳಬಹುದು.

ಶುದ್ಧವಾದ ಆಯುಷ್ಯಕ್ರಮದ ಫಲವೇ ಜ್ಞಾನವು. ಹಾಗು ಜ್ಞಾನದ ಅಂತರಾತ್ಮವೇ ಶಾಂತಿಯು. ಜೀವಿತದ ಸತ್ಯವಾದ ಉದ್ದೇಶವಾವುದು? ಎಂಬುದನ್ನು ಪರಿಪೂರ್ಣವಾಗಿ ತಿಳಿದುಕೊಳ್ಳುವದು 'ಆತ್ಮವಿಜಯ'ವನ್ನು ಸಂಪಾದಿಸಲು ಅತ್ಯವಶ್ಯವಾದದ್ದದೆ. ಅದರಂತೆ ಆಯುಷ್ಯದಲ್ಲಿ ಉತ್ಪನ್ನವಾಗುವ ಸಣ್ಣ ಪುಟ್ಟ ಸಂಗತಿಗಳಿಗಾಗಿ ದುಃಖಶೋಕಪರವಶರಾಗದೆ, ಯಾವ ಬಗೆಯಿಂದಲೂ ಮನಸ್ಸಿನ ಶಾಂತಿಯನ್ನು ಕಳಕೊಳ್ಳದೆ ಇರುವದರಿಂದಲೇ ಆತ್ಮವಿಜಯವು ಸಾಧ್ಯವಾಗುತ್ತದೆ.

ಅಧ್ಯಯನವು ಪೂರ್ಣವಾದ ವಿದ್ಯಾರ್ಥಿಗೆ ಅಪೂರ್ಣವಾದ ಇಲ್ಲವೇ ತಪ್ಪಾದ ಪಾಠದಿಂದ ಹೇಗೆ ತ್ರಾಸವಾಗುವದಿಲ್ಲವೋ, ಅಥವಾ ಗುರುಗಳಿಂದ ಉಪಹಾಸವನ್ನಾಗಲಿ ಶಿಕ್ಷೆಯನ್ನಾಗಲಿ ಅನುಭೋಗಿಸುವ ಪ್ರಸಂಗವು ಹೇಗೆ ಪ್ರಾಪ್ತವಾಗುವದಿಲ್ಲವೋ, ಅದ ರಂತೆಯೇ ಸದ್ಗುಣಚಿಂತನದಲ್ಲಿ ಪ್ರವೀಣನಾದ ಮನುಷ್ಯನಿಗೆ, ಸದಾಚಾರಿಯಾದ ಜ್ಞಾನವಂತನಿಗೆ ತಪ್ಪಾದ ಅಥವಾ ಅಸನ್ಮಾರ್ಗದ ಕರ್ತವ್ಯಾನುಷ್ಠಾನದಿಂದ, ಉತ್ಪನ್ನ ವಾಗುವ ದುಃಖಶೋಕಾದಿಗಳನ್ನು ಭೋಗಿಸಬೇಕಾಗುವದಿಲ್ಲ. ಅವನು ಅವುಗಳಿಂದ ಯಾವಾಗಲೂ ಮುಕ್ತನಾಗಿಯೇ ಇರುವನು.

ಅಧ್ಯಯನವು ಪೂರ್ಣವಾದ ವಿದ್ಯಾರ್ಥಿಗೆ ತನ್ನ ಬುದ್ಧಿಯ ವಿಷಯವಾಗಿ ಶಂಕೆ ಯಾಗಲಿ ಅವಿಶ್ವಾಸವಾಗಲಿ ಇರುವದಿಲ್ಲ. ತನ್ನ ಬುದ್ಧಿಯ ಜಾಡ್ಯವನ್ನು ಅವನು ಹೋಗ ಲಾಡಿಸಿಕೊಂಡಿರುತ್ತಾನೆ. ಆತನಿಗೆ ಪೂರ್ಣವಾಗಿ ಜ್ಞಾನಪ್ರಾಪ್ತಿಯಾಗಿರುತ್ತದೆ: ಮತ್ತು ನಾನು ಜ್ಞಾನಸಂಪನ್ನನಾಗಿದ್ದೇನೆಂಬ ವಿಶ್ವಾಸವು ಅವನಲ್ಲಿರುತ್ತದೆ. ಕಾರಣವೇನಂದರೆ, ಬುದ್ಧಿಗೆ ಅನೇಕ ತರದ ವ್ಯಾಸಂಗಗಳುಂಟಾಗಿ ಅನೇಕತರದಿಂದ ಅದರ ಪರೀಕ್ಷೆಯಾಗಿ ಕಡೆಗೆ ಆತನು ತನ್ನ ಅಧ್ಯಯನವನ್ನು ಪೂರ್ಣಮಾಡಿಕೊಂಡಿರುತ್ತಾನೆ. ಆದುದರಿಂದ ತನ್ನ ಜ್ಞಾನದ ವಿಷಯವಾಗಿ ಆತನು ಸಂದೇಹಗೊಳ್ಳಲು ಅವಕಾಶವಿಲ್ಲ. ಆತನು ಬುದ್ಧಿ ಯನ್ನು ಹೆಚ್ಚುಹೆಚ್ಚಾಗಿ ಪರೀಕ್ಷಿಸಿದಷ್ಟೂ ಆತನಿಗೆ ಆನಂದವೇ ಹೆಚ್ಚುತ್ತ ಹೋಗು ತ್ತದೆ. ಆತನು ಸಾಮರ್ಥ್ಯಯುಕ್ತನೂ ಆತ್ಮವಿಶ್ವಾಸಿಯೂ ಆನಂದಿಯೂ ಆಗಿರುತ್ತಾನೆ.

ಈ ದೃಷ್ಟಾಂತದಂತೆಯೇ ಸದಾಚಾರಿಯಾದ ಮನುಷ್ಯನಿಗೆ ತನ್ನ ಭವಿತವ್ಯತೆಯ ವಿಷಯವಾಗಿ ಶಂಕೆಯಾಗಲಿ ಭೀತಿಯಾಗಲಿ ಎಂದೂ ಉತ್ಪನ್ನವಾಗುವದಿಲ್ಲ. ತನ್ನ ಹೃದಯದ ಅಜ್ಞಾನವನ್ನು ಆತನು ಕಳೆದುಕೊಂಡಿರುತ್ತಾನೆ. ಆತನಿಗೆ ಜ್ಞಾನಪ್ರಾಪ್ತಿ ಯಾಗಿರುತ್ತದೆ. ಮತ್ತು ತನಗೆ ಜ್ಞಾನಪ್ರಾಪ್ತಿಯಾಗಿದೆಯೆಂಬ ತಿಳಿವಳಿಕೆಯು ಅವನಲ್ಲಿ ರುತ್ತದೆ. ಮತ್ತು ಮೊದಲು ದುರ್ಜನರ ದುರ್ವರ್ತನದ ಪರಿಣಾಮವು ನನ್ನ ಮೇಲೆ ಉಂಟಾಗುತ್ತಿದ್ದು ತಾನು ಅದಕ್ಕೆ ವಶವಾಗುತ್ತಿದ್ದದ್ದನ್ನು ಈಗ ಜನರ ಕಠೋರವಾದ ಟೀಕೆಗಳನ್ನೂ ಮಾನಹಾನಿಯ ಶಬ್ದಗಳನ್ನೂ ಕೇಳಿದರೂ ತನ್ನ ಸ್ವಾಸ್ಥ್ಯವು ಭಂಗ ವಾಗದೆ ಇರುವದನ್ನೂ ತಿಳಿದು ನಾನು ಈಗ ನಿಜವಾದ ಜ್ಞಾನವಂತನಾದೆನೆಂಬುದರ ಸತ್ಯತೆಯು ಆತನ ಅನುಭವಕ್ಕೆ ಬರುತ್ತದೆ.

ಸತ್ ಮತ್ತು ಅಸತ್ ಇವುಗಳೊಳಗಿನ ಭೇದವನ್ನು ಅರಿತು ಎರಡನೆಯವರ ದುಷ್ಕೃತ್ಯಗಳಿಂದ ಉದ್ವೇಗವನ್ನು ಹೊಂದದೆ ಇರುವದು ಸದಾಚಾರಿಯಾದ ಮನುಷ್ಯನ ದೈವೀ ಸಾಮರ್ಥ್ಯದ ಲಕ್ಷಣವಾಗಿದೆ. ಈ ತರದ ವಸ್ತುವಿವೇಕವು ಉತ್ಪನ್ನವಾಗುವದೆ ಪರಮಾರ್ಥ ಜ್ಞಾನದ ಪರಮಾವಧಿಯೂ ವಿಜಯವೂ ಆಗಿದೆ ! ಈ ಪ್ರಕಾರದ ಸ್ಥಿತಿಯು ಪ್ರಾಪ್ತವಾದ ಮೇಲೆ ಎರಡನೆಯವರ ಕೃತಿಗಳಿಂದ ಸಂತಾಪವುಂಟಾಗುವದಿಲ್ಲ; ಮನಸ್ಸಿನ ಶಾಂತತೆಯು ವಿಚಲವಾಗುವದಿಲ್ಲ; ಸತ್ಕರ್ಮಾನುಷ್ಠಾನವೇ ಆತನ ಗತಿಯು; ಅದೇ

ಆತನ ಆಶ್ರಯಸ್ಥಾನವು. ಆದುದರಿಂದ ದುಃಖಭಾವನೆಗಳು ಆತನನ್ನು ಸಂಪರ್ಕ ಮಾಡಲು ಸಮರ್ಥವಾಗುವದೇ ಇಲ್ಲ. ಆತನು ಅಪಕಾರಿಗಳ ಋಣವನ್ನು ಉಪಕಾರ ಗಳಿಂದ ತೀರಿಸುತ್ತಾನೆ; ದುಷ್ಕರ್ಮದಿಂದುಂಟಾಗುವ ದುಃಖವನ್ನು ಸತ್ಕರ್ಮದ ಸಾಮರ್ಥ್ಯದಿಂದ ಪರಿಮಾರ್ಜನಗೊಳಿಸುತ್ತಾನೆ.

ದುಷ್ಕರ್ಮದಲ್ಲಿ ಆಸಕ್ತನಾದ ಮನುಷ್ಯನು ಎರಡನೆಯವರ ದುಷ್ಕರ್ಮಗಳು ಪ್ರಬಲವಾಗಿವೆಯೆಂದೂ ಅವುಗಳಿಂದ ತನಗೆ ಅಪಾಯವಾಗಿರುವದೆಂದೂ ಯಾವಾಗಲೂ ತಿಳಿದುಕೊಳ್ಳುತ್ತಾನೆ. ಈ ತಿಳವಳಿಕೆಯಿಂದ ಅವನಿಗೆ ಅತಿಶಯ ದುಃಖವೂ ಪೀಡೆಯೂ ಆಗುತ್ತದೆ. ಆದರೆ ತನ್ನ ದುಷ್ಕರ್ಮಕ್ಕೆ ಅವನು ಅಷ್ಟೊಂದು ಭಯಪಡುವದಿಲ್ಲ. ಅವ ನದು ಅವನಿಗೆ ಕಾಣಿಸುವದೇ ಇಲ್ಲ. ಅಜ್ಞಾನಾಂಧಕಾರದಲ್ಲಿ ಮುಳುಗಿ ಹೋಗಿರುವುದರಿಂದ ಆಧ್ಯಾತ್ಮಿಕ ಧ್ಯಾನವಾಗಲಿ, ಸದ್ವರ್ತನದ ಧೈರ್ಯವಾಗಲಿ, ಶಾಶ್ವತ ಶಾಂತಿಯಾಗಲಿ ಆತನಿಗೆ ದೊರೆಯುವದು ಅಸಾಧ್ಯವಾಗುತ್ತದೆ.

ಯಾವನು 'ಆತ್ಮಜಯ'ವನ್ನು ಸಂಪಾದಿಸಿರುತ್ತಾನೆಯೋ ಆತನೇ ಸಿದ್ಧಪುರು ಷನು. ಸಿದ್ಧನೆಂದರೆ ಭೂತಗಳನ್ನು ಓಡಿಸುವವನಾಗಲಿ ಚಮತ್ಕಾರಗಳನ್ನು ಮಾಡುವವ ನಾಗಲಿ ಅಲ್ಲ. ಯಾಕಂದರೆ ಆ ಕೃತಿಗಳು ಅಜ್ಞಾನ ಅಥವಾ ಭ್ರಮೆಯ ಫಲಗಳು. ಜೀವಿತದ ನಿಜವಾದ ಹೇತುವನ್ನು ತಿಳಿದವನಿಗೆ ಅದರ ಐಹಿಕ ಮತ್ತು ಪಾರಮಾರ್ಥಿಕ ರಹಸ್ಯವು ಗೊತ್ತಿರುತ್ತದೆ, ಆತನ ವಿಶ್ವಾತ್ಮದೃಷ್ಟಿಯು ಜಾಗೃತವಾಗಿರುತ್ತದೆ; ವಿಶ್ವದ ನಿಯಮ. ವಿಶ್ವಪ್ರೇಮ, ವಿಶ್ವದ ಸ್ವಾತಂತ್ರ್ಯ ಇವೆಲ್ಲವುಗಳನ್ನೂ ಆತನು ಪೂರ್ಣವಾಗಿ ಆಕಲನ ಮಾಡುತ್ತಾನೆ. ಆತನ ಸಂಕುಚಿತ ವೃತ್ತಿಯು ನಷ್ಟವಾಗಿ ವಿಶ್ವಕುಟುಂಬ ವೃತ್ತಿಯು ಅವನಲ್ಲಿ ನೆಲೆಗೊಳ್ಳುತ್ತದೆ.

ಯಾವನು ಅಧ್ಯಾತ್ಮಿಕ ಜ್ಞಾನಸಂಪನ್ನನೂ ವಿಜಯಶಾಲಿಯೂ ಆಗುತ್ತಾನೆಯೋ ಆತನ ಸ್ವಾರ್ಥಪರತ್ವದ ದುಷ್ಟಸ್ವಪ್ನಗಳು ಇಲ್ಲದಂತಾಗುತ್ತವೆ. ಆತನಿಗೆ ದಿವ್ಯದೃಷ್ಟಿಯು ಪ್ರಾಪ್ತವಾಗಿ ವಿಶ್ವವೆಲ್ಲ ನೂತನೈಶ್ವರ್ಯಯುಕ್ತವಾಗಿಯೂ ತೇಜಸ್ವಿಯಾಗಿಯೂ ಕಾಣ ಹತ್ತುತ್ತದೆ. ಆ ಸಿದ್ಧಪುರುಷನಿಗೆ ಅಕ್ಷಯಶಾಂತಿಯು ಪ್ರಾಪ್ತವಾಗಿ, ಪರಮೇಶ್ವರನ ವಿಷಯದಲ್ಲಿ ದೃಢವಾದ ನಿಷ್ಠೆಯೂ ಸರ್ವರ ವಿಷಯದಲ್ಲಿಯೂ ಪೂರ್ಣಪ್ರೇಮವೂ ಅವನಲ್ಲಿ ಉತ್ಪನ್ನವಾಗುತ್ತದೆ. ಆತನ ಕಾಮುಕವಾದ ಇಚ್ಛೆಗಳೆಲ್ಲ ಲುಪ್ತವಾಗುತ್ತವೆ. ಕ್ಷುದ್ರಹೇತುಗಳೂ ಲೋಭದ್ವೇಷಗಳೂ ನಷ್ಟವಾಗುತ್ತವೆ. ಈ ರೀತಿಯಾಗಿ ಆತನು ಉನ್ನತಿಯನ್ನು ಹೊಂದಿದನೆಂದರೆ ಜಗತ್ತಿನ ವ್ಯವಹಾರವು ನಿಯಮಬದ್ಧವಾಗಿ ನಡೆದಿದೆ ಯೆಂಬ ತಿಳಿವಳಿಕೆಯು ಅವನಲ್ಲಿ ಉಂಟಾಗುವದು; ಮತ್ತು ಅತ್ಯಂತ ಭಯಂಕರವಾದ ಮೃತ್ಯುವಿನ ವಿಷಯಕವಾದ ಹೆದರಿಕೆಯು ಅವನಲ್ಲಿ ಎಳ್ಳಷ್ಟಾದರೂ ಉಳಿಯುವದಿಲ್ಲ. ಮೃತ್ಯುವು ಬಂದರೆ ಅವನಿಗೆ ದುಃಖವಾಗುವದಿಲ್ಲ. ಅವನು ದುಃಖಶೋಕಾತೀತನಾಗಿರು ತ್ತಾನೆ. ಆದರೆ ಆತನು ಉದಾಸನಾಗಲಿ ದುಷ್ಟನಾಗಲಿ ಆಗಿರುತ್ತಾನೆಂಬುದು ಇದಕ್ಕೆ

ಕಾರಣವಾಗಿರದೆ ಸ್ವವಿಷಯದಲ್ಲುಂಟಾದ ಆತ್ಯಂತಿಕ ನಿವೃತ್ತಿಯೂ ಜನಸಮೂಹದ ಕಲ್ಯಾಣಕ್ಕೋಸ್ಕರ ಅತ್ಯಂತ ಆಸಕ್ತಿಯೂ ಇದಕ್ಕೆ ಕಾರಣಗಳು. ಇವೇ ಆತನ ಹೇತು ಸರ್ವಸ್ವಗಳು. ಸ್ವವಿಷಯಕ ಬುದ್ಧಿಯು ಸಮೂಲವಾಗಿ ನಾಶವಾಗಿರುವದರಿಂದ ಆತನ ದುಃಖವೂ ನಾಶವಾಗಿರುತ್ತದೆ. ತನಗೆ ಏನಾದರೂ ಪ್ರಾಪ್ತವಾದರೂ ಉತ್ತಮವೇ, ಪ್ರಾಪ್ತವಾಗದಿದ್ದರೂ ಉತ್ತಮವೇ ಎಂದು ಆತನು ಭಾವಿಸಿಕೊಂಡಿರುವದರಿಂದ ಆತನು ಯಾವಾಗಲೂ ಶಾಂತನಾಗಿಯೇ ಇರುತ್ತಾನೆ. ದುಃಖಭಾವನೆಗೆ ಆತನು ಪ್ರೇಮಭಾವದ ರೂಪವನ್ನು ಕೊಟ್ಟಿರುವದರಿಂದ ಆತನ ಹೃದಯವು ಅತ್ಯಂತ ಕೋಮಲವಾಗಿರುತ್ತದೆ ಆತನ ಹೃದಯದಲ್ಲಿ ಭೂತದಯೆಯು ತುಂಬಿರುತ್ತದೆ. ಆತನ ಸಾಮರ್ಥ್ಯವು ಪರಪೀಡಕ ವಾಗಿಯೂ ಮಹತ್ವಾಕಾಂಕ್ಷೆಯಾಗಿಯೂ ಐಹಿಕ ವಿಷಯಮಗ್ನವಾಗಿಯೂ ಆಗಿರದೆ, ಶುದ್ಧವೂ ಶಾಂತವೂ ಸ್ವರ್ಗೀಯವೂ ಆಗಿರುತ್ತದೆ. ಮತ್ತು ಜಗತ್ತಿನ ಕಲ್ಯಾಣಕ್ಕಾಗಿ ಯಾವಾಗ ಕಠೋರತೆಯನ್ನು ತಾಳಬೇಕೆಂಬದೂ ಯಾವಾಗ ಕೋಮಲನಾಗ ಬೇಕೆಂಬದೂ ತನ್ನಿಂದ ತಾನೇ ಗುಪ್ತವಾಗಿ ಆತನಿಗೆ ತಿಳಿದುಹೋಗುತ್ತದೆ. ಆತನು ಮಿತಭಾಷಿಯಾಗಿದ್ದರೂ ನಿಜವಾಗಿ ಜಗತ್ತಿಗೆ ಆತನೇ 'ಗುರು'ವು. ಆತನೇ 'ಸ್ವಾಮಿ'ಯು. ಆದರೂ ಆತನು ತನ್ನ ಅಧಿಕಾರವನ್ನು ನಡೆಯಿಸುವ ಆಕಾಂಕ್ಷೆಯುಳ್ಳವನಾಗಿರುವದಿಲ್ಲ. ಆತನು ಜಯಶಾಲಿಯೇನೋ ನಿಜ; ಆದರೆ ತನ್ನ ಬಾಂಧವರ ಮೇಲೆ ಅಧಿಕಾರ ನಡೆಯಿ ಸಲು ಆತನು ಬಯಿಸುವದಿಲ್ಲ. ವಿಶ್ವದ ವ್ಯಾಪಾರವು ಅನಿಯಂತ್ರಿತವಾಗಿ ನಡೆಯಲೆಂದು ಆತನು ಅದಕ್ಕೊಂದು ಚೈತನ್ಯಯುಕ್ತವಾದ ಆಧಾರವಾಗುತ್ತಾನೆ; ಮತ್ತು ಮಾನವ ಜಾತಿಯ ಉದ್ಧಾರಾರ್ಥವಾಗಿ ಶುದ್ಧಾಂತಃಕರಣದಿಂದಲೂ ಜ್ಞಾನಪೂರ್ಣ ಹೃದಯ ದಿಂದಲೂ ಪ್ರಯತ್ನ ಮಾಡುತ್ತಾನೆ.

ಇಂತಹ ಈ ನವಯುಗಾರಂಭದಲ್ಲಿ ಪಾಪಿಗಳಿಗೆ ಶುದ್ಧಿಯೂ ದುಃಖಿತರಿಗೆ ಆನಂದವೂ, ಗಲಿತಧೈರ್ಯನಿಗೆ ಧೈರ್ಯವೂ, ಪರಾಭೂತರಿಗೆ ವಿಜಯಪ್ರಾಪ್ತಿಯೂ ಪುನಃ ಉಂಟಾಗುತ್ತದೆಂಬ ಆನಂದದ ವಾರ್ತೆಯು ಎಲ್ಲರಿಗೂ ತಿಳಿದಿರಲಿ! ಎಲೈ ಮನು ಷ್ಯನೇ! ನಿನ್ನ ಅಂತಃಕರಣವು ಪಾಪದಿಂದ ಕಲುಷಿತವಾಗಿದೆ; ಭಿನ್ನ ಭಿನ್ನ ವಾಸನೆ ಗಳಿಂದ ಅದು ಛಿನ್ನವಿಚ್ಛಿನ್ನವಾಗಿದೆ; ಆದರೂ ಅದರಲ್ಲೊಂದು ನಿರ್ಭಯಸ್ಥಳವುಂಟು. ಸಾಮರ್ಥ್ಯದ ಕೇಂದ್ರವುಂಟು. ಸರ್ವೈಶ್ವರ್ಯಸಂಪನ್ನನೂ ಸದ್ಭಾವಸಚ್ಚಿದಾನಂದನೂ ಆದ ಪ್ರಭುವಿಗೆ ನೀನು ನಿವಾಸಸ್ಥಾನವಾಗಿರುತ್ತೀ. 'ವಿಜಯ'ದ ರಾಜದಂಡವು ನಿನ್ನ ಮಾರ್ಗಪ್ರತೀಕ್ಷೆಯನ್ನು ಮಾಡುತ್ತಲಿದೆ. "ಈಶ್ವರಃ ಸರ್ವ ಭೂತಾನಾಂ ಹೃದ್ದೇಶೇಽ ರ್ಜುನ ತಿಷ್ಠತಿ |" ಆದುದರಿಂದ ಎಲೈ ದುಃಖಿಯಾದ ಮನುಷ್ಯನೇ! ಏಳು. ಜಾಗೃತ ನಾಗು. ನಿನ್ನ ರಾಜ್ಯದಲ್ಲಿ ಅಧಿಷ್ಠಿತನಾಗು.

**ಶಾಂತಿಃ ಶಾಂತಿಃ ಶಾಂತಿಃ**

# ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

## ೧೫ ಪುಷ್ಪಗಳ ಪ್ರಕಟಣೆ

| | | | |
|---|---|---|---|
| ೧ | ಪಂಡಿತರಾಜ ಜಗನ್ನಾಥ | ... | ೫-೦೦ |
| ೨ | ಕನ್ನಡಿಗರ ಜನ್ಮಸಾರ್ಥಕತೆ | ... | ೫-೦೦ |
| ೩ | ಕರ್ಣಾಟಕ ನರಕಾಸುರ ವಿಜಯಃ ವ್ಯಾಯೋಗಂ | ... | ೪-೦೦ |
| ೪ | ಕರ್ನಾಟಕ ಕಥಾಸರಿತ್ಸಾಗರ | ... | ೬-೦೦ |
| ೫ | ಶೌರ್ಯಸಾಗರ | ... | ೬-೦೦ |
| ೬ | ಕನ್ನಡವಮಾತು ತಲೆಯೆತ್ತುವ ಬಗೆ | ... | ೩-೦೦ |
| ೭ | ಕಾಲಿದಾಸ ಚರಿತ್ರ | ... | ೬-೦೦ |
| ೮ | ಕರ್ಣಾಟಕ ಯಯಾತಿ ನಾಟಕಂ | ... | ೮-೦೦ |
| ೯ | ಮೋಹಿನೀ ಅಥವಾ ನಿಂದಕರ ನಡವಳಿ | ... | ೧೦-೦೦ |
| ೧೦ | ಭಾರತೀಯ ವಿದುಷಿಯರು | ... | ೮-೦೦ |
| ೧೧ | ಶ್ರೇಯಃಸಾಧನ | ... | ೮-೦೦ |
| ೧೨ | ಗೃಹವೈದ್ಯಕವು | ... | ೮-೦೦ |
| ೧೩ | ಈಸೋಪನ ಚರಿತ್ರ | ... | ೩-೦೦ |
| ೧೪ | ವಿದ್ಯಾರಣ್ಯ ಸ್ವಾಮಿಗಳು | ... | ೧೦-೦೦ |
| ೧೫ | ನರಗುಂದದ ಬಂಡಾಯ | ... | ೧೦-೦೦ |

